# ಹೊಸ ಮನುಷ್ಯ

**ಸಮಾಜವಾದಿ ಮಾಸಿಕ**

**ಏಪ್ರಿಲ್, ೨೦೧೫** **ಸಂಪಾದಕ : ಡಿ.ಎಸ್.ನಾಗಭೂಷಣ** **ಸಂಪುಟ: ೪ ಸಂಚಿಕೆ: ೯**

**ಚಂದಾ :** ವಾರ್ಷಿಕ: ರೂ. ೧೫೦/–(ವ್ಯಕ್ತಿಗಳಿಗೆ) ರೂ.೨೫೦/–(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೨೦/– ಪುಟಗಳು: ೨೦

**ವಿಳಾಸ:** ಎಚ್.ಐ.ಜಿ–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪


## ಸಂಪಾದಕರ ಟಿಪ್ಪಣಿಗಳು

**ಪ್ರಿ**ಯ ಓದುಗರೇ,

ಐ.ಎ.ಎಸ್. ಅಧಿಕಾರಿ ಡಿ.ಕೆ. ರವಿ ಅವರ ಸಾವಿನ ಪ್ರಕರಣ ಕುರಿತಂತೆ ನಮ್ಮ ರಾಜ್ಯ ಸರ್ಕಾರ, ಅವರ ಸಾವಿನ ಸುದ್ದಿ ಬಂದ ಕ್ಷಣದಿಂದಲೂ ವರ್ತಿಸುತ್ತಿರುವ ರೀತಿ ನಿಗೂಢವಾಗಿದೆ. ಯಾವುದೇ ಪ್ರಾಥಮಿಕ ತನಿಖೆಯೂ ಇಲ್ಲದೆ ವಿಧಾನ ಸಭೆಯಲ್ಲಿ ಮುಖ್ಯ ಮಂತ್ರಿ, ಗೃಹ ಮಂತ್ರಿಗಳಿಬ್ಬರೂ, ಅದೊಂದು ಆತ್ಮಹತ್ಯೆ ಎಂದು ಪ್ರಕಟಿಸುತ್ತಾರೆ ಮತ್ತು ಅದಕ್ಕೆ ಪೂರಕವೆಂದು ತಾವು ನಂಬಿದ ಕೆಲ ಮಾಹಿತಿಯನ್ನು ಬಹಿರಂಗಪಡಿಸುತ್ತಾರೆ. ಹೊರಗೆ ನಗರದ ಪೋಲೀಸ್ ಆಯುಕ್ತ ರೆಡ್ಡಿಯವರು, ಶವ ನೋಡಿದ ಬಂದೊಡನೆ ಇದು ಮೇಲ್ನೋಟಕ್ಕೆ ಆತ್ಮಹತ್ಯೆ ಎಂದು ಹೇಳುತ್ತಾರೆ! ಇದು ಯಾರಿಗಾದರೂ ಆಡಳಿತ ಸೂಕ್ಷ್ಮಗಳನ್ನರಿಯದ ಅನನುಭವಿ ಆಡಳಿತಗಾರರು ಮತ್ತು ಅಧಿಕಾರಿಗಳ ವರ್ತನೆಯಂತೆ ಕಂಡಿದ್ದರೆ ಆಶ್ಚರ್ಯವೇನಿಲ್ಲ. ಹಾಗೇ, ಈ ಹಿನ್ನೆಲೆಯಲ್ಲಿ ಡಿ.ಕೆ. ರವಿ ಅವರ ಕುಟುಂಬ ವರ್ಗ ಮತ್ತು ರವಿಯವರು ಕೋಲಾರದ ಜಿಲ್ಲಾಧಿಕಾರಿಯಾಗಿ, ನಂತರ ವಾಣಿಜ್ಯ ತೆರಿಗೆ ಇಲಾಖೆಯ ಹಿರಿಯ ಅಧಿಕಾರಿಯಾಗಿ ಮಾಡಿದ್ದ ದಿಟ್ಟ, ದಕ್ಷ ಮತ್ತು ಅಪರೂಪದ ಪ್ರಾಮಾಣಿಕತೆಯ ಕೆಲಸಗಳನ್ನು ಕಂಡು, ಕೇಳಿ ಮೆಚ್ಚಿದ್ದ ಜನತೆ ಈ ಸಾವು ಆತ್ಮಹತ್ಯೆ ಇರಲಾರದು ಎಂದು ಸಂಶಯಿಸಿ ಸಿ.ಬಿ.ಐ ತನಿಖೆಗೆ ಆಗ್ರಹಿಸಿದ್ದೂ ಆಶ್ಚರ್ಯವೇನಲ್ಲ..

ಆದರೆ ರಾಜ್ಯ ಸರ್ಕಾರ ಯಾವುದೇ ಕಾರಣ ಕೊಡದೆ ಈ ಆಗ್ರಹವನ್ನು ಒಪ್ಪಲು ಹಲವು ದಿನಗಳ ಕಾಲ ನಿರಾಕರಿಸಿ, ಕೊನೆಗೆ ಸರ್ಕಾರಕ್ಕಿಂತ ದೂರದ ಕಾಂಗ್ರೆಸ್ ಹೈಕಮಾಂಡ್ ಜನತೆಯ ಮನಸ್ಸಿನ ಸೂಕ್ಷ್ಮಗಳನ್ನು ಅರಿಯಲು ಸಾಧ್ಯವಾಗಿ ಅದರ ಸೂಚನೆಯಂತೆ ಸಿ.ಬಿ.ಐ. ತನಿಖೆಗೆ ಒಪ್ಪುವಂತಾಗಿರುವುದು ರಾಜ್ಯ ಸರ್ಕಾರದ ಘನತೆಯನ್ನು ಕುಂದಿಸಿದೆ ಎಂದೇ ಹೇಳಬೇಕು. ಅಷ್ಟೇ ಅಲ್ಲದೆ, ಸಿಬಿ.ಐ. ತನಿಖೆಗೆ ಮುನ್ನ ತನ್ನದೇ ಸಿ.ಐ.ಡಿ ತನಿಖೆಯ ಮಧ್ಯಂತರ ವರದಿಯನ್ನು ಬಹಿರಂಗ ಪಡಿಸಲು ಅದು ಕಾತುರವಾಗಿರುವಲ್ಲಿ ಮತ್ತು ಇದಕ್ಕೆ ನ್ಯಾಯಾಲಯ ಒಡ್ಡಿರುವ ತಡೆಯನ್ನು ಅದು ವಿರೋಧಿಸುತ್ತಿರುವುದರಲ್ಲಿ ತೋರುತ್ತಿರುವ ಹಠ ಈ ಸಾವಿನ ಹಿಂದೆ ಕಾಣದ ಕೈಗಳ ರಾಜಕಾರಣವೂ ಇರಬಹುದೆಂಬ ಸಂಶಯವನ್ನು ಬಲಪಡಿಸುವಂತಿದೆ.

ನಿಜ, ಈ ಪ್ರಕರಣವನ್ನು ಸ್ಪಷ್ಟವಾಗಿ, ನೇರವಾಗಿ ನೋಡಲು ಇದ್ದ ಎಲ್ಲ ಅವಕಾಶಗಳನ್ನೂ ನಮ್ಮ ಟಿವಿ. ಮಾಧ್ಯಮಗಳು ಹಾಳು ಮಾಡಿದವು. ಪ್ರಕರಣದ ಒಂದೇ ಬದಿಯ ವರದಿ ಮತ್ತು ಮಾಹಿತಿಯನ್ನು ಭಾವಾವೇಶಗಳೊಂದಿಗೆ ಪ್ರಸ್ತುತಗೊಳಿಸುವ ಮೂಲಕ ರಾಜ್ಯ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದವು. ಅದಕ್ಕೆ ಮೇಲೆ ತಿಳಿಸಿದ ರಾಜ್ಯ ಸರ್ಕಾರದ ಅಪ್ರಬುದ್ಧ ವರ್ತನೆಯೂ ಕಾರಣವಾಗಿತ್ತು ಎಂಬುದೂ ನಿಜ. ಆದರೆ ಡಿ.ಕೆ. ರವಿ ಸಾವಿನ ಸುತ್ತ ಹೆಣೆದುಕೊಂಡಿರಬಹುದಾದ ಇತರ ಸುದ್ದಿಗಳು ಹೊರಬರುತ್ತಿದ್ದಂತೆ ಎರಡು ವಿಷಯಗಳಂತೂ ಸ್ಪಷ್ಟವಾದವು. ಒಂದು, ಈಗ ಕೇಳಬರತೊಡಗಿರುವ ಅವರ ಪ್ರೇಮ ಪ್ರಕರಣ ಕುರಿತಾದ ಮತ್ತು ಅವರ ಪ್ರಾಮಾಣಿಕತೆಯನ್ನು ಸಂಶಯಿಸುವಂತಹ ಇತರೆ ಕೆಲವು ಸುದ್ದಿಗಳ ಹಿನ್ನೆಲೆಯಲ್ಲಿ ಆತ್ಮಹತ್ಯೆಯ ಸಾಧ್ಯತೆಯನ್ನು ಸುಲಭವಾಗಿ ತಳ್ಳಿಹಾಕುವಂತಿಲ್ಲ. ಇದು ನಿಷ್ಪಕ್ಷಪಾತವಾದ ಸಿ.ಬಿ.ಐ. ತನಿಖೆಯಿಂದಲೇ ಸಾಬೀತಾಗಬೇಕು. ಎರಡು, ಈ ಬಗ್ಗೆ ಎದ್ದ ಸಾರ್ವಜನಿಕ ಆಕ್ರೋಶದ ಹಿಂದೆ ಜಾತಿ ರಾಜಕಾರಣವೂ ಒಂದು ಪ್ರಧಾನ ಅಂಶವಾಗಿ ಕೆಲಸ ಮಾಡಿದೆ. ಸಿದ್ಧರಾಮಯ್ಯನವರ ನೇತೃತ್ವದ ರಾಜ್ಯ ಸರ್ಕಾರ ಒಕ್ಕಲಿಗ ಹಿತಾಸಕ್ತಿಗಳ ವಿರುದ್ಧವಿದೆ ಎಂಬ ಅಭಿಪ್ರಾಯವನ್ನು ಬಲಗೊಳಿಸಲು ಎಚ್.ಡಿ. ಕುಮಾರಸ್ವಾಮಿಯವರಿಗೆ ಈ ಪ್ರಕರಣವನ್ನು ಸಿದ್ಧರಾಮಯ್ಯ ನಿರ್ವಹಿಸಿದ ರೀತಿ ಸಹಾಯಮಾಡಿತೆಂದೇ ಹೇಳಬೇಕು. ಈ ಹಿಂದೆ ಇನ್ನೋರ್ವ ದಕ್ಷ ಮತ್ತು ಪ್ರಾಮಾಣಿಕ ಐ.ಎ.ಎಸ್. ಅಧಿಕಾರಿ ರಶ್ಮಿ ಮಹೇಶ್ ಅವರನ್ನು ಈ ಸರ್ಕಾರ ನಡೆಸಿಕೊಂಡ ಮತ್ತು ಅವರ ಮೇಲಾದ ಹಲ್ಲೆಯನ್ನು ಈ ಸರ್ಕಾರ ಪರಿಗಣಿಸಿದ ಉಡಾಫೆಯ ರೀತಿ–ನೀತಿಗಳು ಈ ಪ್ರಕರಣದ ಜಾತಿ ಆಯಾಮಕ್ಕೆ ತನ್ನದೇ ವಿಶ್ವಾಸಾರ್ಹತೆಯನ್ನು ಒದಗಿಸಿತು.


ಈ ನಿರ್ದಿಷ್ಟ ಪ್ರಕರಣಗಳ ಜಾತಿ ಆಯಾಮದ ಪ್ರಶ್ನೆ ಏನೇ ಇರಲಿ, ಇಂತಹ ಅಭಿಪ್ರಾಯ ಮೂಡಲು ಸಿದ್ಧರಾಮಯ್ಯನವರ ಸರ್ಕಾರಕ್ಕೆ ಮೂಲಾಧಾರವಾಗಿರುವಂತೆ ತೋರುತ್ತಿರುವ ಅವರ ಸಾಮಾಜಿಕ ನೀತಿಯೇ ಕಾರಣವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಸಿದ್ಧರಾಮಯ್ಯ 'ಅಹಿಂದ' ಕಲ್ಪನೆಯನ್ನು ಮುಂದೊಡ್ಡಿಕೊಂಡು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ತಮ್ಮ ಸರ್ಕಾರವನ್ನು ಯಾವುದೇ ಎಗ್ಗಿಲ್ಲದೆ ಒಂದು ಜಾತೀಯ ಸರ್ಕಾರವನ್ನಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ ಎಂಬ ಸಾರ್ವಜನಿಕ ಅಭಿಪ್ರಾಯ ದಿನೇ ದಿನೇ ಬಲಗೊಳ್ಳುತ್ತಿದೆ ಎಂಬುದನ್ನು ಅವರು ಆದಷ್ಟು ಬೇಗ ಅರಿತರೆ ಒಳ್ಳೆಯದು. ಮೊನ್ನೆ ಅವರು ವಿಧಾನಸಭಾಧ್ಯಕ್ಷ ಕಾಗೋಡು ತಿಮ್ಮಪ್ಪನವರಿಗೆ ಯಾವುದೋ ಖಾಸಗಿ ಸಂಸ್ಥೆಯೊಂದು ಪ್ರಕಟಿಸಿದ ಲೋಹಿಯಾ ಪ್ರಶಸ್ತಿಯನ್ನು ಪ್ರದಾನ ಮಾಡುತ್ತಾ, ತಮ್ಮದು ಲೋಹಿಯಾ ಸಮಾಜವಾದ ನಂಬಿರುವ ಸರ್ಕಾರವೆಂದು ಹೇಳಿದ್ದಾರೆ. ಬಹುಶಃ ಅವರಿಗೆ, ನಮ್ಮ ಬಹಳಷ್ಟು ಲೋಹಿಯಾ ಸಮಾಜವಾದಿಗಳಂತೆ ಲೋಹಿಯಾ ವಿಚಾರಧಾರೆಯೆಂದರೆ, ಕೇವಲ ಅಥವಾ ಮುಖ್ಯವಾಗಿ ಹಿಂದುಳಿದ ಜಾತಿಗಳ ರಾಜಕಾರಣ ಎಂಬ ಕಲ್ಪನೆ ಇದ್ದಂತಿದೆ.

ಇದು ಲೋಹಿಯಾ ವಿಚಾರಧಾರೆಯನ್ನು ಕುಬ್ಜಗೊಳಿಸುವ, ಅಗ್ಗ ಮಾಡಿ ಅಶ್ಲೀಲಗೊಳಿಸುವ ಪ್ರಯತ್ನವೆಂದೇ ಹೇಳಬೇಕಿದೆ. ಲೋಹಿಯಾ ಸಮಾಜವಾದ ಸಾಮಾಜಿಕ ನ್ಯಾಯಕ್ಕೆ ಮಹತ್ವ ನೀಡಿದ್ದು ನಿಜವಾದರೂ, ಅದನ್ನು ಜಾತಿ ರಹಿತ ಸಮಾಜದ ನಿರ್ಮಾಣದೆಡಗಿನ ರಾಜಕಾರಣವಾಗಿ ಗ್ರಹಿಸಿ ಪ್ರತಿಪಾದಿಸಿತ್ತೇ ಹೊರತು, ಈ ಸರ್ಕಾರ ಅನುಸರಿಸುತ್ತಿರುವಂತಹ ಜಾತಿ ಅಸ್ಮಿತೆಗಳನ್ನು ಬಲಪಡಿಸಿ ಸಾಮಾಜಿಕ ಅಸಮಧಾನಗಳ ಮೂಲಕ ಸಮಾಜವನ್ನು ಛಿದ್ರಗೊಳಿಸುವಂತಹ ನೀತಿಯನ್ನಲ್ಲ. ಜೊತೆಗೆ ಲೋಹಿಯಾ ಸಮಾಜವಾದದ ಮುಖ್ಯ ಗುರಿ ತನ್ನದೇ ಮಿತಿಗಳುಳ್ಳ ಸರಳ ಸಭ್ಯ ಬದುಕಿನ ಮಾದರಿಯನ್ನು ರೂಪಿಸುವುದಾಗಿತ್ತೇ ಹೊರತು, **ಬರೀ** 'ಬೇಕು ಬೇಕು'ಗಳ ಹಪಾಹಪಿಯ ಜನಸಮುದಾಯಗಳನ್ನು ನಿರ್ಮಿಸುವುದಾಗಿರಲಿಲ್ಲ. ಸಿದ್ಧರಾಮಯ್ಯನವರು ತಮ್ಮ ಆರ್ಥಿಕ ಕಾರ್ಯಕ್ರಮಗಳ ಮೂಲಕವಲ್ಲದೇ, ವಿವಿಧ ನೇಮಕಾತಿ, ಜಾತಿ ಸಮ್ಮೇಳನಗಳು ಮತ್ತು ಹೊಸ, ಹೊಸ ಜಾತಿ ಪುಣ್ಯ ಪುರುಷರ ಜನ್ಮ ದಿನಾಚರಣೆಗಳನ್ನು ಅಧಿಕೃತವಾಗಿ ಪೋಷಿಸುವ ಇಲ್ಲವೇ ಪ್ರೋತ್ಸಾಹಿಸುವ ಮೂಲಕ ಅಪಾಯಕಾರಿ ಆಟದಲ್ಲಿ ತೊಡಗಿದ್ದಾರೆ ಮತ್ತು ಲೋಹಿಯಾ ವಿಚಾರಧಾರೆಗೆ ಅನ್ಯಾಯವೆಸಗುತ್ತಿದ್ದಾರೆ ಎಂದೇ ಹೇಳಬೇಕು. ಜೊತೆಗೆ ಸಿದ್ಧರಾಮಯ್ಯ ರಾಜ್ಯದ ಕೇವಲ ರಾಜಕೀಯ ನಾಯಕರಾಗಿ ಬಿಮ್ಮನಿರದೆ, ಆಡಳಿತ ಮುಖ್ಯಸ್ಥರಾಗಿ ತಮ್ಮ ಅಧಿಕಾರಿ ಬಳಗದ ಅತ್ಯುತ್ತಮ ಯುವ ಅಧಿಕಾರಿಗಳನ್ನು ಗುರುತಿಸಿ, ಅವರೊಡನೆ ಹಿರಿಯನಾಗಿ ಆತ್ಮೀಯವಾಗಿ ಬೆರೆತು **ಸಕಾಲಿಕ ಬುದ್ಧಿ ಮಾತುಗಳಿಂದ** ಕರ್ನಾಟಕದ ಉನ್ನತಿಗಾಗಿ ಒಂದು ಸೇವಾ ತಂಡವನ್ನು ಬೆಳೆಸುವ ಮುನ್ನೋಟವನ್ನೂ ಪ್ರದರ್ಶಿಸಬೇಕಿದೆ. ಅದು ಲೋಹಿಯಾ ಮುನ್ನೋಡಿದ ಹೊಸ ರಾಜಕಾರಣಕ್ಕೂ ಶೋಭೆ ತರಬಲ್ಲುದಾಗಿದೆ.

ಲೋಹಿಯಾ ಮುನ್ನೋಡಿದ ಹೊಸ ರಾಜಕಾರಣ ಎಂದೆ. ಅದನ್ನು ನಾವು *ಆಂ ಆದ್ಮಿ* ಪಕ್ಷದ ರಾಜಕಾರಣದಲ್ಲಿ ಕಂಡು ಭರವಸೆಯ ಭಾವನೆಯನ್ನು ಹೊಂದಿದ್ದೆವು. ಇದರ ಹಿಂದೆ ಅಲ್ಲಿ ಯೋಗೇಂದ್ರ ಯಾದವ್, ಪ್ರಶಾಂತ್ ಭೂಷಣ್‌ರಂತಹ ಘನತೆವೆತ್ತ ಚಿಂತಕರೂ ಹೋರಾಟಗಾರರೂ ಇದ್ದರೆಂಬ

ಕಾರಣವಿತ್ತು. ಈಗ ಆ ಭರವಸೆಯ ಬೆಳಕೂ ಆರಿದೆ. ಆ ಇಬ್ಬರೂ ಪಕ್ಷಕ್ಕೆ ಈಗ ಬೇಡವಾಗಿದ್ದಾರೆ. ದೆಹಲಿ ಚುನಾವಣೆಯಲ್ಲಿ ಐತಿಹಾಸಿಕ ಜಯ ದಾಖಲಿಸಿದ ತದ ನಂತರದಲ್ಲೇ ನಡೆದಿರುವ ಈ ಒಳಜಗಳ ಪರ್ಯಾಯ ರಾಜಕಾರಣದ ಪ್ರಯತ್ನಗಳಿಗೆ ಬಿದ್ದಿರುವ ನಿರ್ಣಾಯಕ ಪೆಟ್ಟೆಂದೇ ಹೇಳಬೇಕು. ಏಕೆಂದರೆ,ಇದು ಜನಪ್ರಿಯ ರಾಜಕಾರಣ ಮತ್ತು ತಾತ್ವಿಕ ರಾಜಕಾರಣದ ನಡುವಣ ಆಯ್ಕೆಯ ಜಗಳವೇ ಆಗಿದ್ದಂತೆ ತೋರುತ್ತದೆ. ಆಪ್‌ನ ಪ್ರಬಲ ಬೆಂಬಲಿಗನಾಗಿದ್ದ ಈ ಪತ್ರಿಕೆ ಈ ಜಗಳದ ಬಗ್ಗೆ ಅವಸರದಲ್ಲಿ ಏನೂ ಹೇಳಲು ಇಷ್ಟಪಡುವುದಿಲ್ಲ. ಎಲ್ಲ ವಿವರಗಳು ಗೊತ್ತಾದ ಬಳಿಕ ನಮ್ಮ ನೋಟವನ್ನು ದಾಖಲಿಸುವುದು ಒಳಿತೆಂದು ಪತ್ರಿಕೆ ಭಾವಿಸುತ್ತದೆ.

ಇನ್ನು ಮೋದಿ ಸರ್ಕಾರ ತನ್ನ ಬಲಪಂಥೀಯತೆಯನ್ನು ನಿರಾತಂಕವಾಗಿ ಮುಂದುವರೆಸಿಕೊಂಡು ಹೋಗುತ್ತಿದೆ. ಬಲಪಂಥೀಯತೆ ಎಂದರೆ ಸಮಾಜದ ಮೇಲ್ಭಾಗಕ್ಕೆ ದೊರೆತ ಪ್ರಯೋಜನಗಳು ನಿಧಾನವಾಗಿಯಾದರೂ ಅಷ್ಟಿಷ್ಟು ಕೆಳಭಾಗಗಳಿಗೆ ಸೋರಿ ಸಮಾಜದ ಸರ್ವೋನ್ನತ ಅಭಿವೃದ್ಧಿಯಾಗುತ್ತದೆ ಮತ್ತು ಇದೊಂದೇ ಅಭಿವೃದ್ಧಿಯ ಯಶಸ್ವಿ ಮಾರ್ಗ ಎಂಬ ನಂಬಿಕೆ. ಈ ನಂಬಿಕೆಗೆ ತಕ್ಕುನಾಗಿಯೇ ಅದು ತನ್ನೀ ಮೊದಲ ಮುಂಗಡ ಪತ್ರದಲ್ಲಿ ಕಾರ್ಪೋರೇಟ್ ವಲಯಕ್ಕೆ ಮತ್ತು ಚಿನ್ನ-ವಜ್ರ ಕೈಗಾರಿಕೆ ಹಾಗೂ ವ್ಯಾಪಾರ ಕ್ಷೇತ್ರಗಳಿಗೆ ಕೋಟ್ಯಾಂತರ ರೂಪಾಯಿಗಳ ತೆರಿಗೆ ರಿಯಾಯತಿ ತೋರಿ, ಕೃಷಿ, ಉದ್ಯೋಗ ಖಾತರಿ, ಶಿಕ್ಷಣ ಮತ್ತು ಆರೋಗ್ಯ ವಲಯಗಳ ಅನುದಾನಗಳಿಗೆ ದೊಡ್ಡ ಕತ್ತರಿ ಹಾಕಿದೆ. ಈ ಬಗೆಗಿನ ವಿವರವಾದ ಲೇಖನವೊಂದು ೮ನೇ ಪುಟದಲ್ಲಿದೆ ಗಮನಿಸಿ. ಜೊತೆಗೆ ಅದು ತನ್ನ ಭೂಸ್ವಾಧೀನ ಮಸೂದೆ ಜಾರಿ ಬಗ್ಗೆ ಹಿಡಿದಿರುವ ಹಠ ಅದರ ರಾಜಕಾರಣ ಎಂತಹ ತಾತ್ವಿಕ ಭಂಡತನದಿಂದ ಕೂಡಿದೆ ಎಂಬುದನ್ನು ಸೂಚಿಸುವಂತಿದೆ.



ಇಂತಹ ಸಂಪೂರ್ಣ ಪ್ರತಿಕೂಲ ಪರಿಸ್ಥಿತಿಯಲ್ಲಿ ನಮ್ಮ 'ಚರಕ'ದ ಪ್ರಸನ್ನ ತಮ್ಮ 'ಕೈಮಗ್ಗ ಉಳಿಸಿ' ಆಂದೋಲನದ ಅಪರಿಪೂರ್ಣತೆಯನ್ನು ಮನಗಂಡೋ ಏನೋ ಇದೇ ಏಪ್ರಿಲ್ ೧೯ರಂದು ಮೈಸೂರು ಜಿಲ್ಲೆಯ ಖಾದಿ ಕ್ಷೇತ್ರ ಬದನವಾಳುವಿನಲ್ಲಿ 'ಸುಸ್ಥಿರ ಅಭಿವೃದ್ಧಿ' ಕುರಿತು ಒಂದು ರಾಷ್ಟ್ರೀಯ ಸಮಾವೇಶವನ್ನು ಆಯೋಜಿಸಿದ್ದಾರೆ. ಸುಸ್ಥಿರ ಅಭಿವೃದ್ಧಿ ಎಂದರೆ ಈ ಭೂಮಿ, ಗಾಳಿ ಮತ್ತು ನೀರು ಹಾಳಾಗದಂತೆ, ಸಕಲ ಜೀವಜಗತ್ತಿನೊಂದಿಗೆ ಮನುಷ್ಯ ಸಮರಸವಾಗಿ ಬಾಳುವೆ ಮಾಡಲು ಅನುವು ಮಾಡಿಕೊಡಬಲ್ಲಂತಹ ಬದುಕಿನ ಒಂದು ಮಾದರಿ. ಅದು ಇತ್ತೀಚಿನ ರಾಜಕಾರಣ ಕಟ್ಟಿಕೊಟ್ಟಿರುವ ಬದುಕಿನ ಮಾದರಿಗೆ, ಮೌಲ್ಯಗಳಿಗೆ ವ್ಯತಿರಿಕ್ತವಾದದ್ದು. ಅದು ಹಲವು ತ್ಯಾಗ, ಸಂಕಲ್ಪಗಳನ್ನು ಬೇಡುವ ಮಾದರಿ. ಅದು ಇಂದು ಜನರ ಮನಸನ್ನು ಹೊಗುವಂತೆ ಮಾಡಲು ಭಗೀರಥ ಪ್ರಯತ್ನವೇ ಬೇಕಾಗಿದೆ. ಇಂದಿನ ಮನುಷ್ಯನ ಲೋಕದೃಷ್ಟಿಯನ್ನೇ ಬದಲಿಸಬೇಕಾದ ದೊಡ್ಡ ಕೆಲಸವಿದು. ನಮ್ಮ ಪತ್ರಿಕೆಯದೂ ಸೇರಿದಂತೆ,'ಆ ದಿಕ್ಕಿನಲ್ಲಿ ನಡೆದಿರುವ ಹಲವು ಪ್ರಯತ್ನಗಳ ಮುಂದುವರಿಕೆಯಾಗಿ ಈ ಸಮ್ಮೇಳನ ನಡೆಯಲಿ, ಎಲ್ಲ ಆಸಕ್ತ ಜನ ಮತ್ತು ಗುಂಪುಗಳ ಭಾಗವಹಿಸುವಿಕೆಯೊಂದಿಗೆ ಒಂದು ಚಳುವಳಿಯಾಗಿ ಬೆಳೆಯಲಿ ಎಂದು ನಾವು ಹಾರೈಸುತ್ತೇವೆ.

**-ಸಂಪಾದಕ**

## ನಿಮ್ಮ ಪತ್ರ

**ಪ್ರಿ**ಯ ಸಂಪಾದಕರೇ,

ಮಾರ್ಚ್ ತಿಂಗಳ ಮಹಿಳಾ ವಿಶೇಷ ಸಂಚಿಕೆ ಪ್ರತಿ ಸಂಚಿಕೆಯಂತೆ ಹೊಸತನದಿಂದ ಮತ್ತು ಉದಾತ್ತ ಸಂವೇದನೆಗಳಿಂದ ತುಂಬಿ ನಮ್ಮನ್ನು ಸೆಳೆಯಿತು ನೀವು ಈ ಸಂಚಿಕೆಯಲ್ಲೇ ಒಂದು ಕಡೆ ಹೇಳಿರುವಂತೆ, ಇತಿಹಾಸದಲ್ಲಿ ಒಂದು ದೊಡ್ಡ ತಪ್ಪು ಹೆಜ್ಜೆ ಇಟ್ಟ ಪರಿಣಾಮವಾಗಿ ಸಮಾಜದಲ್ಲಿ ಬೆಳೆದುಬಂದಂತಹ ಹೆಣ್ಣಿನ ಬಗೆಯ ಒಂದು ನಕಾರಾತ್ಮಕ ಮನಃಸ್ಥಿತಿಯನ್ನು ಸರಿಪಡಿಸುವ ಒಂದು ಸಣ್ಣ ಪ್ರಯತ್ನವಾಗಿ 'ಹೊಸ ಮನುಷ್ಯ'ದ ಈ ಸಂಚಿಕೆ ಮೂಡಿ ಬಂದಿದೆ ಎಂದರೆ ತಪ್ಪಾಗಲಾರದು.

'ನಮ್ಮ ಸಮಾಜವಾದಿಗಳು' ಅಂಕಣದಲ್ಲಿ ಪರಿಚಯಿಸಿರುವ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಸಾಧನೆ ನಿಜಕ್ಕೂ ಮಹತ್ವದ್ದಾಗಿದೆ. ಸಮಾಜ ಭೌತಿಕವಾಗಿ ಹಾಗೂ ಮಾನಸಿಕವಾಗಿ ಹೆಚ್ಚು ಗಂಡುಗಂಡಾಗುತ್ತಿರುವುದನ್ನು ಡಾ. ಎಚ್.ಎಸ್. ಅನುಪಮಾ ಮತ್ತು ಎಚ್. ಕಾವ್ಯಶ್ರೀ ತಮ್ಮ ಲೇಖನಗಳಲ್ಲಿ ಮನಮುಟ್ಟುವಂತೆ ತಿಳಿಸಿದ್ದಾರೆ. ಒಟ್ಟಾರೆಯಾಗಿ ಇಡೀ ಸಂಚಿಕೆ ನಮ್ಮಲ್ಲಿ ಹೆಣ್ಣುತನದ ಅಂಶವನ್ನು ಹೆಚ್ಚಿಸುವಲ್ಲಿ ಸಫಲವಾಗಿದೆ ಎಂದು ಹೇಳಬೇಕು.

ಅನೇಕ ಹೋರಾಟ-ಚಳುವಳಿಗಳಲ್ಲಿ ಮಹಿಳೆಯರು ಮುಂಚೂಣಿಯಲ್ಲಿರುವುದು ಗಮನಾರ್ಹವೇ ಆಗಿದೆ ಮತ್ತು ಇದನ್ನು ಸಮಾಜ ಗಮನಿಸಬೇಕಿದೆ. ಈ ಹೋರಾಟಗಾರರ ಬಗೆಗೆ ಐವ್ವರು ಮಹಿಳೆಯರು ಬರೆದಿರುವ ಲೇಖನಗಳು ಮತ್ತು ಒಟ್ಟಾರೆ ಈ ಪ್ರಯತ್ನ ವಿನೂತನವಾಗಿದೆ.

**-ಬಿ.ವಿ. ಸುರೇಂದ್ರ,** ಧಾರವಾಡ

ಹಿಂದೊಮ್ಮೆ ನಿಮ್ಮ ಸಂಪಾದಕೀಯದಲ್ಲಿ ಗಂಡು ಗಂಡಾಗುತ್ತಿರುವ ಸಮಾಜದ ಬಗ್ಗೆ ಬರೆದಿದ್ದಿರಿ. ಮಾರ್ಚ್ ತಿಂಗಳ ಮಹಿಳಾ ವಿಶೇಷ ಸಂಚಿಕೆಯಲ್ಲಿ, ಜೈವಿಕವಾಗಿಯೂ ನಮ್ಮ ಸಮಾಜ ಗಂಡು ಗಂಡಾಗುತ್ತಿರುವ ಅಪಾಯದ ಕುರಿತು ಡಾ.ಎಚ್.ಎಸ್.ಅನುಪಮಾರವರು ಚರ್ಚಿಸಿದ್ದಾರೆ. 'ಗಂಡು ಗಂಡಾಗುತ್ತಿರುವ' ಎನ್ನುವಾಗ ಏನೋ ಒಂದು ರೀತಿ 'ಹೃದಯಹೀನವಾಗುತ್ತಿರುವ' ಎನ್ನುವ ಭಾವವುಂಟಾಗುತ್ತದೆ. ಏನೇ ಆದರೂ ಪ್ರಕೃತಿ ತನ್ನ ಸಮತೋಲನವನ್ನು ಕಾಯ್ದುಕೊಳ್ಳಲು ಏನಾದರೊಂದು ಮಾಡುತ್ತಾಳೆ ಎಂಬ ನಂಬಿಕೆ ಬಂದರೆ ಏನೋ ಒಳಗಡೆ ಒಂದು ಸಣ್ಣ ಬೆಳಕು ಮೂಡಿದಂತಾಗುತ್ತದೆ ಮತ್ತು ಬದುಕನ್ನು ಹಸನು ಮಾಡಲು ಉತ್ಸಾಹ ಮೂಡಿದಂತಾಗುತ್ತದೆ. ಅಂತಹ ಭರವಸೆಯನ್ನು ವೈದೇಹಿ ಅವರು 'ಯಾವುದೂ ಸತತ ಬಿನದದ ದಾರಿ ಅಲ್ಲವಲ್ಲ?' ಎಂಬ ಮಾತಿನ ಮೂಲಕ ಕೊಡುತ್ತಾರೆ. ಹಾಗೇ ಡಾ.ವಿಜಯಾ ಅವರು ಪೂರ್ಣ ಅರಿವಿನ ಕಿಚ್ಚು ಹಚ್ಚಿಕೊಳ್ಳಿ ಎಂದು ನಮ್ಮಂತಹ ಮಧ್ಯಮವರ್ಗದ ಜಾಣೆಯರನ್ನು ಎಚ್ಚರಿಸುತ್ತಾರೆ.

ಇಂದು ಬದುಕಿ ಎಂದಿಗೂ ಉಳಿಯುವ ಮಹಾಶ್ವೇತಾದೇವಿ, ಇಳಾ ಬೆನ್, ಮೇಧಾ ಪಾಟ್ಕರ್, ಅರುಣಾ ರಾಯ್, ಇರೋಮ್ ಶರ್ಮಿಳಾ.... ಇಂಥವರ ಜೀವಂತ ಚರಿತ್ರೆಗಳು ನಮ್ಮೊಳಗೆ ಬೆಳಕು ಉರಿಯುವಂತೆ ಮಾಡುತ್ತವೆ. ಅಂಥವರ ಬದುಕು ನಮಗೆ ಮಾದರಿಯಾಗುತ್ತವೆ. ಅರಿವಿನ ವ್ಯಾಪ್ತಿಯನ್ನು ಹಿಗ್ಗಿಸುತ್ತವೆ. ಇದಕ್ಕೆ ಪೂರಕವಾಗಿ ಪಿ.ಸತ್ಯವತಿಯವರ ಕಥೆ 'ನಾನ್ಯಾರು?' ನಮ್ಮನ್ನು ತಿವಿದು ಎಬ್ಬಿಸುತ್ತದೆ.

ಪುಸ್ತಕಾವಲೋಕನದ 'ಆರನೇ ಹೆಂಡತಿಯ ಆತ್ಮಕಥೆ'ಯನ್ನು ಈ ಹಿಂದೆಯೇ ಇಂಗ್ಲಿಷ್‌ನಲ್ಲಿ ಓದಿ 'ಹೀಗೂ ಉಂಟೇ?' ಎಂದು ಬೆಚ್ಚಿಬಿದ್ದಿದ್ದೆ. ಸಬಿತಾ ಬನ್ನಾಡಿಯವರು 'ಬೆಂಕಿಯ ಬೆಡಗಿಗೆ ರೆಕ್ಕೆ ಚಾಚುವವರ ಕತೆ'ಯನ್ನು ಎಚ್ಚರದ ದನಿಯಲ್ಲಿ ವಿಶ್ಲೇಷಿಸಿದ್ದಾರೆ. ಹಾಗೇ, ಕಾವ್ಯಶ್ರೀಯವರ "ಸ್ತ್ರೀವಾದವೆಂದರೆ. . . . .ಸಮಾನ ಗೌರವದ ಆಶಯ" ಎಂಬ ಮಾತು ಸ್ತ್ರೀವಾದವು ಹೆಣ್ತನದ ಹೆಗಲೇರಲೇಬೇಕಾದ ಇಂದಿನ ಅನಿವಾರ್ಯತೆಯನ್ನು, ಇಂದಿನ ಪರಿಸ್ಥಿತಿಯನ್ನೂ, ಮುಂದಿನ ಆಶಯವನ್ನೂ ಒಟ್ಟಿಗೇ ಹೇಳುತ್ತದೆ. 'ಯುವ ಸಮಾಜವಾದಿ ಚಿಂತನ ವೇದಿಕೆ'ಸಾರ್ಥಕವಾಗಿದೆ.

ಮಹಿಳೆಯರ ಸಾಧನ-ಲೇಖನಗಳ ಮಣಿಗಳನ್ನ ಪೋಣಿಸಿ ಸುಂದರವಾದ ಮಾಲೆಯನ್ನು ನಿರ್ಮಿಸಿದ ಸಂಪಾದಕರಿಗೆ ಅಭಿನಂದನೆಗಳು. ಇಷ್ಟೆಲ್ಲದರ ನಡುವೆ ನಿಮ್ಮ ಸಂಪಾದಕೀಯವೇ ಸಪ್ಪೆ ಎನಿಸಿದ್ದು ಸುಳ್ಳಲ್ಲ!

**-ಟಿ.ಎಲ್ ರೇಖಾಂಬ,** ಶಿವಮೊಗ್ಗ

ಸಮಾಜವಾದ, ಕನ್ನಡ ಮಾಧ್ಯಮ ಮುಂತಾದವುಗಳಿಗೆ ಇದು ವ್ಯತಿರಿಕ್ತ ಕಾಲ.ಅಂತಹುದರಲ್ಲಿಯೂ ನೀವು ಅವುಗಳ ಬೆನ್ನು ಹತ್ತಿದ್ದೀರಿ. ಅದಕ್ಕಾಗಿ ನಿಮಗೆ ಅಭಿನಂದನೆಗಳಿಗಿಂತ ಧನ್ಯವಾದಗಳನ್ನು ಹೇಳಬೇಕು!

ಮಾರ್ಚ್ ತಿಂಗಳ ಮಹಿಳಾ ವಿಶೇಷ ಸಂಚಿಕೆ ನಿಜವಾಗಿಯೂ ವಿಶೇಷವಾಗಿದೆ. ಜಾಗದ ಮಿತಿಯಿಂದಾಗಿರಬೇಕು, ಲೇಖನಗಳು ಸಾಂದ್ರ ಹಾಗೂ ಚೊಕ್ಕವಾಗಿವೆ. ಎಲ್ಲೂ ಗೊಂದಲವಿಲ್ಲ. ಎಲ್ಲ ಲೇಖಕಿಯರಿಗೂ ಅಭಿನಂದನೆಗಳು.

**-ವಿಜಯೇಂದ್ರ ಪಾಟೀಲ, ಬೆಂಗಳೂರು**

ಮಾರ್ಚ್ ತಿಂಗಳ ಸಂಚಿಕೆಯನ್ನು ಮಹಿಳಾ ಸಂಚಿಕೆಯನ್ನಾಗಿಸಿದ್ದಕ್ಕೆ ಅಭಿನಂದನೆಗಳು. ಸಾಹಿತ್ಯ, ಸಂಘಟನೆ, ಮಾಧ್ಯಮ, ಕಲೆ, ಚಳುವಳಿಗಳಲ್ಲಿ ತೊಡಗಿಕೊಂಡಿರುವ ಮಹಿಳೆಯರ ಮತ್ತು ಜಾಗತೀಕರಣದ ಸಂದರ್ಭದಲ್ಲಿನ ಹೆಣ್ಣು ಕುರಿತಾದ ಚಿಕ್ಕ ಚೊಕ್ಕ ಲೇಖನಗಳು ದಿಕ್ಸೂಚಿಗಳಾಗಿವೆ. ಹಾಗೆಯೇ ಮಹಿಳಾ ಚಳುವಳಿಕಾರರನ್ನು ಕುರಿತು ಕರ್ನಾಟಕದ ಇಂದಿಗ ಮುಂಚೂಣಿ ಮಹಿಳೆಯರು **ಬರೆದಿರುವ** ಪರಿಚಯಾತ್ಮಕ ಕಿರುಲೇಖನಗಳು ಚಳುವಳಿಗಳ ಮಾನವೀಯತೆಯ ಮಾರ್ಗದರ್ಶಿ ಸೂತ್ರಗಳಂತಿವೆ.

**-ಇಂದಿರಾ ಬಿ. ಕೃಷ್ಣಪ್ಪ,** ಬೆಂಗಳೂರು

## ನಮ್ಮ ಸಮಾಜವಾದಿಗಳು

# ಸುಸಂಸ್ಕೃತ ಹೋರಾಟಗಾರ ಗಂಗಾಧರ ಪದಕಿ



ಗಂಗಾಧರ ತ್ರಯಂಬಕ ಪದಕಿ ಧಾರವಾಡದ ಪ್ರಾಂತಕ್ಕೆ ಸಮಾಜವಾದದ ಪರಿಪೂರ್ಣ ಕಲ್ಪನೆಯನ್ನು ಪರಿಚಯಿಸಿದವರು. 'ಪದಕಿ ವಕೀಲರು' ಎಂದೇ ಅಖಂಡ ಧಾರವಾಡ ಜಿಲ್ಲೆಯಾದ್ಯಂತ ಪರಿಚಿತರಾಗಿ ಅಜಾತಶತ್ರು ಎನಿಸಿಕೊಂಡ ಅವರು ಶಾಲಾ ದಿನಗಳಲ್ಲಿಯೇ ಸ್ವಾತಂತ್ರ್ಯ ಆಂದೋಲನಕ್ಕೆ ಧುಮುಕಿದವರು. ಗಾಂಧೀಜಿ ತತ್ವ ಸಿದ್ಧಾಂತಗಳಿಗೆ ಮಾರು ಹೋದರೂ, ನೇತಾಜಿ ವೀರಾವೇಷಕ್ಕೆ ತಲೆದೂಗಿದವರು. ಗಳಗನಾಥರ 'ಮಾಧವ ಕರುಣ ವಿಲಾಸ' ಮುಂತಾದ ಕಾದಂಬರಿಗಳಿಂದ ಪ್ರೇರೇಪಿತರಾದವರು. ವಿವೇಕಾನಂದರ ವಾಗ್ಝರಿಗೆ ಮನಸೋತವರು ಪದಕಿಯವರು.

ಧಾರವಾಡ ತಾಲೂಕಿನ ಉಪ್ಪಿನ ಬೆಟಗೇರಿಯ ಕುಟುಂಬದಲ್ಲಿ ೧೯೨೬ರ ಜೂನ್ ೨೮ರಂದು ಜನಿಸಿದ ಪದಕಿಯವರು ಉಪ್ಪಿನ ಬೆಟಗೇರಿಯಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿ ಪ್ರೌಢ ಶಿಕ್ಷಣಕ್ಕೆಂದು ಬಂಡಾಯದೂರು ನರಗುಂದ ಸೇರಿದಾಗ ನೇರವಾಗಿ ಚಳುವಳಿಗಿಳಿದರು. ವಿದ್ಯಾರ್ಥಿಗಳ ನಡುವೆ 'ಬಾಲ ನಾಯಕ'ನ ಗುಣ ಬೆಳೆಸಿಕೊಂಡರು. ವಿನೋಬಾ ನೇತೃತ್ವದಲ್ಲಿ ಗಾಂಧೀಜಿ ವೈಯಕ್ತಿಕ ಸತ್ಯಾಗ್ರಹ ಆಂದೋಲನ ಸಾರಿದ್ದು, ಗೃಹಬಂಧನದಿಂದ ತಪ್ಪಿಸಿಕೊಂಡು ನೇತಾಜಿ ಬಲೂಚಿಸ್ತಾನದ ಮೂಲಕ ಜರ್ಮನಿಗೆ ಹೋದ ರೋಮಾಂಚಕ ಘಟನೆ, ಕ್ರಿಪ್ಸ್ ನಿಯೋಗದ ಪ್ರಯತ್ನದ ವಿಫಲತೆ, ಎರಡನೇ ಮಹಾಯುದ್ಧದ ಪತ್ರಿಕಾ ವರದಿಗಳು ಪದಕಿ ಚಲೇ ಜಾವ್ ಚಳುವಳಿಗೆ ಮುಂದಾಗಲು ಸಹಜವಾಗಿ ಕಾರಣವಾದವು. ೧೯೪೨ರ ಅಗಸ್ಟ್ ೧೪, ೧೫ರಂದು ನರಗುಂದದಲ್ಲಿ ಮೆರವಣಿಗೆ ನಡೆಸಲು ಮುಂದಾದರು. ಮೆರವಣಿಗೆಗೆ ಬೆಂಬಲ ನೀಡಿದ್ದ ೩-೪ ವ್ಯಾಪಾರಸ್ಥರನ್ನು ಬಂಧಿಸಿದ ಪೊಲೀಸರು ಸಣ್ಣ ಮಕ್ಕಳೆಂಬ ಕಾರಣಕ್ಕೆ ಪದಕಿ ಮತ್ತು ಗೆಳೆಯರನ್ನು ಬಿಟ್ಟರು.

ಹೋರಾಟದ ತೀವ್ರತೆಯಿಂದ ಸೊಲ್ಲಾಪುರದ ಕ್ರಾಂತಿಕಾರಿಗಳಿಂದ ಎರಡು ನಾಡಬಾಂಬ್ ದೊರಕಿಸಿಕೊಂಡ ಪದಕಿ ಹಾಗೂ ಮಿತ್ರರು ಒಂದನ್ನು ಸ್ಫೋಟಗೊಳಿಸಿದರು. ಇನ್ನೊಂದು ಬಾಂಬ್ ಚಿಕ್ಕನರಗುಂದದ ಶಂಕರಗೌಡ ಮನೆಯಲ್ಲಿ ಸಿಕ್ಕು ಪೊಲೀಸರು ಆತನನ್ನು ಬಂಧಿಸಿದರು. ಆಗ ಪದಕಿ ನರಗುಂದದಿಂದ ಪಲಾಯನ ಮಾಡಿ ಸ್ವಂತ ಊರು ಉಪ್ಪಿನ ಬೆಟಗೇರಿಗೆ ಬಂದರು. ಅಲ್ಲಿ ಪದಕಿಯವರು ೧೫-೨೦ ಹುಡುಗರ 'ಮ್ಯಾಳ' ಕಟ್ಟಿಕೊಂಡು ರಾತ್ರಿ ಹೊತ್ತಿನಲ್ಲಿ ಚಾವಡಿಗೆ ಬೆಂಕಿ ಹಚ್ಚುವದು, ಟಪಾಲು ಕಸಿದುಕೊಂಡು ಓಡಿ ಹೋಗುವದು, ಪೊಲೀಸ್ ಔಟ್‌ಪೋಸ್ಟ್ ನಾಶ ಮಾಡುವದು, ಕಂದಾಯದ ದಫ್ತರ್ ಸುಡುವದು. ಹಗಲು ಹೊತ್ತಿನಲ್ಲಿ ದೂರ ದೂರದ ಹೊಲ, ಗುಡ್ಡಗಳಲ್ಲಿ ಅಡಗಿ ಕೂಡುವದು ನಿತ್ಯದ ಕೆಲಸವಾಯಿತು. ದೊಡ್ಡ ದೊಡ್ಡ ಟಾರ್ಚ್ ಬ್ಯಾಟರಿಗಳಲ್ಲಿ ಕಂತ್ರಿ ಪಿಸ್ತೂಲ್‌ಗಳನ್ನು ಮುಚ್ಚಿಡುವ ಸಾಹಸಗಳಿಗೆ ಪದಕಿ ಮಂಡಳಿ ಕೈಹಾಕಿತು. ಹೊಲಗಳಲ್ಲಿ ರೈತರು ಇವರಿಗೆ ಊಟ ಕೊಡುತ್ತಿದ್ದರು. ಇವರ ಗುಪ್ತ ಚಲನವಲನಗಳಿಗೆ ಬೆಂಬಲ ನೀಡುತ್ತಿದ್ದರು.

ಅಗಸ್ಟ್ ೧೫ರಂದು ನರಗುಂದದಲ್ಲಿ ಎರಡು ಬಾರಿ, ಅಣ್ಣಿಗೇರಿ ರೇಲ್ವೆ ಸ್ಟೇಷನ್‌ದಲ್ಲಿ ಒಂದು ಬಾರಿ ಒಟ್ಟು ಮೂರು ಸಲ ಪೊಲೀಸರು ಪದಕಿ ಅವರನ್ನು ಹಿಡಿದರಾದರೂ ಚಿಕ್ಕವರೆಂದು ಬಿಟ್ಟುಬಿಟ್ಟರು. ೧೯೪೩ ಜೂನ್ ೬ರಂದು ಧಾರವಾಡ ಪೊಲೀಸರು ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದ ಆಪಾದನೆಯ ಮೇಲೆ ಪದಕಿ ಅವರನ್ನು ಬಂಧಿಸಿದರು. ಒಂದು ವರ್ಷ ವಿಚಾರಣಾಧೀನ ಕೈದಿಯಾಗಿ ಶಿವಮೊಗ್ಗೆ ಜೈಲಿನಲ್ಲಿ ಬಂಧಿಸಿಟ್ಟರು. ೧೯೪೪ ಜೂನ್ ೨೧ರಂದು ಬಿಡುಗಡೆ ಮಾಡಿದರು. ಜೈಲುವಾಸದ ಕಟು ಅನುಭವ, ಸಂಕಷ್ಟಗಳು ಪದಕಿಯವರ ದೇಶಪ್ರೇಮವನ್ನು ಇಮ್ಮಡಿಗೊಳಿಸಿದವೇ ಹೊರತು ಕಡಿಮೆ ಮಾಡಲಿಲ್ಲ. ಗಾಂಧೀಜಿ, ಜಯಪ್ರಕಾಶ ನಾರಾಯಣ, ಲೋಹಿಯಾ ಅವರ ವಿಚಾರಧಾರೆಗಳು ಹೋರಾಟದ ಹಸಿವನ್ನು ಪ್ರಬಲಗೊಳಿಸಿದವು. ಮಾನಸಿಕ ಸಿದ್ಧತೆ, ಸೈದ್ಧಾಂತಿಕ ಬದ್ಧತೆಗಳು ಚುರುಕುಗೊಂಡು ಚಳುವಳಿಗೆ ಅವರ ಮನಸ್ಸು ಗಟ್ಟಿಯಾಯಿತು.

ಬಿಡುಗಡೆಯ ನಂತರ ಬೆಳಗಾವಿಯ ಆರ್‌ಪಿಡಿ ಕಾಲೇಜ್‌ದಿಂದ ಬಿ. ಎ, ಹಾಗೂ ಬೆಳಗಾವಿಯ ಆರ್‌ಎಲ್ ಲಾ ಕಾಲೇಜ್‌ನಿಂದ ೧೯೫೪ರಲ್ಲಿ ಕಾನೂನು ಪದವಿ ಪಡೆದರು. ೧೯೫೬ರಿಂದ ಧಾರವಾಡದಲ್ಲಿ ವಕೀಲಿ ವೃತ್ತಿ ಆರಂಭಿಸಿದರು. ವೃತ್ತಿಯಿಂದ ನ್ಯಾಯವಾದಿಯಾಗಿದ್ದರೂ, ಸಮಾಜವಾದಿ ಪಕ್ಷಗಳ ಸಕ್ರಿಯ ಸದಸ್ಯರಾಗಿದ್ದರು. ಮಹಾತ್ಮರಿಂದಾಗಿ ಕಾಂಗ್ರೆಸ್‌ನೊಂದಿಗೆ ಸಂಪರ್ಕ ಹೊಂದಿದ್ದರೂ ಸ್ಥಳೀಯ ಕಾಂಗ್ರೆಸ್ಸಿಗರೊಂದಿಗೆ ಅವರದು ಭಿನ್ನತೆ. ಡಾ. ರಾಮಮನೋಹರ ಲೋಹಿಯಾ, ಜಯಪ್ರಕಾಶ ನಾರಾಯಣ, ಎಮ್. ಎನ್. ರಾಯ್, ಕಿಶನ್ ಪಟ್ನಾಯಕರ ಚಿಂತನೆಗಳ ತಳಹದಿ ಒಂದೆಡೆ. ರಾಜ್ಯದ ನಾಯಕರಾದ ಶಾಂತವೇರಿ ಗೋಪಾಲಗೌಡ, ಕಡಿದಾಳು ಮಂಜಪ್ಪ, ಕಮಲಾದೇವಿ ಚಟ್ಟೋಪಾಧ್ಯಾಯ, ಸದಾಶಿವ ಕಾರಂತ, ಅಮ್ಮೆಂಬಳ ಬಾಳಪ್ಪ, ರಾಮಕೃಷ್ಣ ಹೆಗಡೆ, ಜೆ. ಎಚ್. ಪಟೇಲ ಮುಂತಾದವರ ಒಡನಾಟ, ನೀಲಗಂಗಯ್ಯ ಪೂಜಾರ, ಅಬ್ಬಿಗೇರಿ ವಿರೂಪಾಕ್ಷಪ್ಪ ಅವರ ಸಾಥ್ ಪದಕಿಯವರ ಹೋರಾಟದ ಜೀವನವನ್ನು ಆವರಿಸಿಕೊಂಡಿದ್ದವು.

ಕಾಗೋಡು ಸತ್ಯಾಗ್ರಹದ ತೀವ್ರ ಪ್ರಭಾವಕ್ಕೆ ಒಳಗಾಗಿದ್ದ ಪದಕಿ ಅವರು ತಮ್ಮ ಸಮಾಜವಾದಿ ಗೆಳೆಯ ನೀಲಗಂಗಯ್ಯ ಪೂಜಾರರೊಂದಿಗೆ ಧಾರವಾಡ ತಾಲೂಕಿನ ಹೆಬ್ಬಳ್ಳಿ ಜಾಗೀರದಾರರ ಗೇಣಿದಾರರಿಗೆ ಭೂಮಿ ಕೊಡಿಸುವ ಹೋರಾಟ ಆರಂಭಿಸಿದರು. ಸತತ ೨-೩ ವರ್ಷ ನಡೆದ ಈ ಕುರಿತ ಮೆರವಣಿಗೆ, ಧರಣಿ, ಉಪವಾಸ, ಪಿಕೆಟಿಂಗ್‌ಗಳ ನೇತೃತ್ವ ವಹಿಸಿದರು. ಕೊನೆಗೂ ಹೆಬ್ಬಳ್ಳಿ, ಕಿತ್ತೂರು, ಯರಗಟ್ಟಿ, ಶಲವಡಿ, ಗಜೇಂದ್ರಗಡ ಮುಂತಾದ ಭೂಮಾಲೀಕರಿಂದ ಉಳುವವರಿಗೆ ೧೧,೦೦೦ ಎಕರೆ ಭೂಮಿ ಹಂಚಿಸುವಲ್ಲಿ ಯಶಸ್ವಿಯಾದರು. ಪದಕಿ ಅವರು ಗೇಣಿದಾರರ ಪರ ಹೋರಾಟವಲ್ಲದೇ ಪೌರಕಾರ್ಮಿಕರ, ಬೀಡಿ ಕಾರ್ಮಿಕರ, ಸಾರಿಗೆ ನೌಕರರ, ಸರಕಾರಿ ನೌಕರರ ಸಂಘಟನೆ ಕಟ್ಟಿ ಅವರಿಗಾಗಿ ಹೋರಾಡಿದರು. ಆಸಕ್ತಿದಾಯಕ ಸಂಗತಿ ಎಂದರೆ ಹುಟ್ಟಿನಿಂದ ಬ್ರಾಹ್ಮಣರಾದ ಪದಕಿಯವರು, ಇನ್ನೋರ್ವ ಸಮಾಜವಾದಿ ರಾಚಪ್ಪ ಹಡಪದರ ಮಧ್ಯಸ್ಥಿಕೆಯಲ್ಲಿ ಹುಬ್ಬಳ್ಳಿ-ಧಾರವಾಡ ಸವಿತಾ ಸಮಾಜದ ಅಧ್ಯಕ್ಷರಾಗಿದ್ದರು!

ಗ್ರಾಮೋದ್ಯೋಗ, ಸ್ವದೇಶಿ, ಖಾದಿಯ ಬಗ್ಗೆ ಸ್ಪಷ್ಟ ನಿಲುವು ಹೊಂದಿದ್ದ ಅವರಿಗೆ ಖಾದಿ ಪ್ರಚಾರ ಬೀಜಮಂತ್ರವಾಗಿತ್ತು. ಕಟ್ಟಾ ಖಾದಿಧಾರಿಯಾದ ಅವರು ಉಪ್ಪಿನ ಬೆಟಗೇರಿ, ಗರಗ, ಹೆಬ್ಬಳ್ಳಿಗಳ ಖಾದಿ ಕೇಂದ್ರಗಳನ್ನು ವಿಖ್ಯಾತಗೊಳಿಸಿದರು. ಪದಕಿ ಅಧ್ಯಕ್ಷರಾಗಿದ್ದಾಗಲೇ ಗರಗ ಖಾದಿ ಸಂಘ ರಾಷ್ಟ್ರಧ್ವಜ ತಯಾರಿಸುವದನ್ನು ಆರಂಭಿಸಿ ದೇಶಾದ್ಯಂತ ಹೆಸರು ಮಾಡಿದೆ.

ವಿವಿಧ ಶೈಕ್ಷಣಿಕ, ಗ್ರಾಹಕ, ನಾಗರಿಕ ಸಂಘಟನೆಗಳ ರೂವಾರಿಯಾದ ಪದಕಿಯವರು ೧೯೮೩ರಲ್ಲಿ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದಾಗ ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ(ಹುಡಾ)ದ ಅಧ್ಯಕ್ಷತೆಗೆ ನೇಮಕಗೊಂಡರು. ಅಂತೆಯೇ ಹುಬ್ಬಳ್ಳಿಯಲ್ಲಿ ಜಯಪ್ರಕಾಶ ನಗರ, ಆರ್. ಎಮ್. ಲೋಹಿಯಾ ನಗರ ಅವರಿಂದ, ಅವರ ಶಿಷ್ಯರಿಂದ ತಲೆ ಎತ್ತಿವೆ. ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ, ಸಾರಿಗೆ ಸೌಲಭ್ಯಗಳಿಗೆ ಕೈಒಡ್ಡದ ಅವರು ಆಪ್ತರು ಈ ಬಗ್ಗೆ ಮಾಡಿದ ಒತ್ತಾಯಕ್ಕೆ ಮಣಿದಿರಲಿಲ್ಲ. ಧಾರವಾಡ ಶಹರ ಕ್ಷೇತ್ರದಿಂದ ಸ್ಪರ್ಧಿಸಲು ೧೯೮೩, ೮೫ರಲ್ಲಿ ಜನತಾ ಪಕ್ಷದಿಂದ ಎರಡು ಬಾರಿ ಟಿಕೇಟ್ ದೊರೆತು ಸ್ಪರ್ಧಿಸಿದ್ದರಾದರೂ, ಕೆಲವೇ ನೂರು ಮತಗಳ ಅಂತರದಿಂದ ಸೋತಿದ್ದ ಪದಕಿ ಅವರಿಗೆ ಸೋಲುಗಳು ಎಂದೂ ನೋವು ತರುತ್ತಿರಲಿಲ್ಲ. "ಇದು ಪದಕಿ ಸೋಲಲ್ಲ. ಮತದಾರರ ಸೋಲು" ಎಂದು ಕೋರ್ಟಿನಲ್ಲಿ ಸಹೋದ್ಯೋಗಿ, ಆಪ್ತಮಿತ್ರರೂ, ರಾಜಕೀಯದಲ್ಲಿ ಕಟ್ಟಾ ವಿರೋಧಿಯಾಗಿದ್ದ ಆಗಿನ ಲೋಕಸಭೆ ಕಾಂಗ್ರೆಸ್ ಸದಸ್ಯ ಡಿ. ಕೆ. ನಾಯ್ಕರರೇ ಪದಕಿ ಚುನಾವಣೆ ಫಲಿತಾಂಶವನ್ನು ವಿಶ್ಲೇಷಿಸಿದ್ದು ಮಾರ್ಮಿಕವಾಗಿತ್ತು.

ಸಾಹಿತ್ಯಾಸಕ್ತರೂ, ಲೇಖಕರು ಅಗಿದ್ದ ಅವರ ಬದುಕು ಧಾರವಾಡದ ಸಾರಸ್ವತ ಲೋಕದಲ್ಲಿ ಚಿರಂತನ. ಅಲ್ಪಕಾಲದ ಅನಾರೋಗ್ಯದಿಂದ ಬಳಲಿದ ಅವರು ೨೦೦೬ ಸೆಪ್ಟೆಂಬರ್ ೨೯ರಂದು ನಿಧನ ಹೊಂದಿದರು. ಕರ್ನಾಟಕ ವಿದ್ಯಾವರ್ಧಕ ಸಂಘವು ಗುರುತಿಸಿರುವ "ಪ್ರಾತಃಸ್ಮರಣೀಯ ಧಾರವಾಡಿಗರು" ಪಟ್ಟಿಯಲ್ಲಿ ಪದಕಿಯವರ ಹೆಸರು ಅಗ್ರಪಂಕ್ತಿಯಲ್ಲಿದೆ

**-ಗಣೇಶ ಜೋಷಿ**

# ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ–೩೦

– ಇಂದಿರಾ ಬಿ. ಕೃಷ್ಣಪ್ಪ

## ಕ್ರಾಂತಿ ಕವಿ ಬೋಳ ಬಂಡೆಪ್ಪನವರ ಅಕಾಲಿಕ ಸಾವು

**ಕ**ರ್ನಾಟಕ ದಲಿತ ಸಂಘರ್ಷ ಸಮಿತಿ, ಈ ರಾಜ್ಯದಲ್ಲಿ ದನಿ ಇಲ್ಲದವರ ದನಿಯಾಗುತ್ತಿದ್ದ ಕಾಲದಲ್ಲಿ, ತನ್ನ ದನಿಯನ್ನು ಕೂಡಿಸಿದವನೇ ಕನಸುಗಾರ, ಯುವಕವಿ ಬೋಳೆ ಬಂಡೆಪ್ಪ. ಹದಿ ಹರೆಯದ, ಉತ್ಸಾಹದ ಬುಗ್ಗೆ ಬೋಳ ಬಂಡೆಪ್ಪ. ಅವರು ಬೂಸಾ ಚಳುವಳಿಯ ಆಶಯಗಳೊಂದಿಗೆ ರಾಯಚೂರಿನಲ್ಲಿ ಪ್ರತಿಭಟನೆಯನ್ನು ಬಾಬು ಭಂಡಾರಿಗಲ್, ಕೆ. ಕರಿಯಪ್ಪ, ಜಂಬಣ್ಣ ಅಮರಚಿಂತರವರೊಡಗೂಡಿ ಸಂಘಟಿಸಿ, ದಸಂಸದ ಚಳುವಳಿಯೊಳಗೆ ಸೇರ್ಪಡೆಯಾದರು. ದಸಂಸದ ಹೋರಾಟಗಳಿಂದ ಹೊಸ ಹುರುಪನ್ನು ಮೈಮನದಲ್ಲಿ ತುಂಬಿಕೊಂಡ ಈ ಯುವಕ, ದಲಿತ ಕೇರಿಗಳು, ಹಾಸ್ಟೆಲ್‌ಗಳನ್ನು ಸುತ್ತಿ ರಾಯಚೂರಿನಲ್ಲಿ ದಸಂಸವನ್ನು ಕಟ್ಟಿದ ಕಟ್ಟಾಳೇ ಎನ್ನಬಹುದು.

ಇಂಥಹ ಯುವ ಚೈತನ್ಯಕ್ಕೆ "ಕಣ್ಣೆಸರಾಯಿತೋ" ಎಂಬಂತೆ ರಕ್ತದ ಕ್ಯಾನ್ಸರ್ ಅದ್ಹೇಗೋ ತಗುಲಿಕೊಂಡಿತ್ತು. ಬಡವರನ್ನ ಬಡಬಾಗ್ನಿಯಲ್ಲಿ ಬೇಯಿಸುವ ಕ್ಯಾನ್ಸರ್‌ಗೆ ಮದ್ದೇ ಇಲ್ಲದ ಹೊತ್ತಲ್ಲಿ, ಚಿಕಿತ್ಸೆಗಾಗಿ ಆಸ್ಪತ್ರೆ ಸೇರಿದ್ದ ಬಂಡೆಪ್ಪನಿಗೆ ಜೀವನ ಸಂಗಾತಿ ಗಂಗಮ್ಮ ಮತ್ತು ದಸಂಸ ಗೆಳೆಯರು ಅದಾಗಲೇ ಸಾಲ ಎತ್ತುತ್ತ, ಚಿಕಿತ್ಸೆ ಕೊಡಿಸುತ್ತಿದ್ದರು. ಅಂದಿನ ರಾಯಚೂರು ಜಿಲ್ಲಾ ಸಂಚಾಲಕರಾದ ಉರುಕುಂದಪ್ಪನವರಿಂದ ಬರುತ್ತಿದ್ದ ಪತ್ರ ಕೃಷ್ಣಪ್ಪನವರನ್ನು ತಲ್ಲಣಗೊಳಿಸುತ್ತಿತ್ತು. ಆಸ್ಪತ್ರೆಯ ವಾರ್ಡ್‌ನಲ್ಲಿ ನರಳುತ್ತಿದ್ದ ಬಂಡೆಪ್ಪ, "ಕೃಷ್ಣಪ್ಪನನ್ನು ನೋಡಲು ಹಂಬಲಿಸುತ್ತಿರುವುದಾಗಿ" ಅವರಿಂದ ಪದೇ ಪದೇ ಪತ್ರ ಬರಲಾರಂಭಿಸಿತು. ಉರುಕುಂದಪ್ಪನವರು ಪತ್ರದಲ್ಲಿ "ಕ್ಯಾನ್ಸರ್ ರೋಗದಿಂದ ಬಂಡೆಪ್ಪನ ಪರಿಸ್ಥಿತಿ ಚಿಂತಾಜನಕವಾಗಿದೆ ಅವರು ನಿಮ್ಮನ್ನು ನೋಡಬೇಕು ಎಂದು ಪದೇಪದೇ ನನಗೆ ಒತ್ತಾಯಿಸುತ್ತಿದ್ದಾರೆ. ಆ ವ್ಯಕ್ತಿಯ ಪರಿಸ್ಥಿತಿ ನಾವು ಕಣ್ಣಿನಿಂದ ನೋಡಲಾಗುವುದಿಲ್ಲ, ಅದಕ್ಕೆ ಒಂದು ಸಲ ರಾಯಚೂರಿಗೆ ಬನ್ನಿ ಇಲ್ಲವಾದರೆ ಅವರನ್ನು ದಿ. ೨೧.೯.೮೬ರಂದು ಬೆಂಗಳೂರು ಕಿದ್ವಾಯಿ ಆಸ್ಪತ್ರೆಗೆ ಸೇರಿಸುತ್ತಾರೆ. ನೀವು ಅಲ್ಲಿಯೇ ಕಾಣಿ. ಅವರಿಗೆ ಆರ್ಥಿಕ ನೆರವು ಬಹಳ ಅವಶ್ಯಕವಾಗಿದೆ" ಎಂದು ಒಂದು ಪತ್ರ ಬಂದ ಮತ್ತೆರಡು ದಿನದಲ್ಲಿ ಅವರನ್ನು ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಗೆ ಸೇರಿಸಲಾಗಿದೆ ಎಂಬ ಮತ್ತೊಂದು ಪತ್ರ ಬಂದಿತ್ತು. ತದನಂತರದಲ್ಲೇ "ಈ ವ್ಯಕ್ತಿ ಬಹಳ ಅಂಜಿಕೆಯಿಂದ ಇರುವುದು ಕಂಡು ಬರುತ್ತದೆ. ಆದ್ದರಿಂದ ನೀವು ಇವರಿಗೆ ಸ್ವಲ್ಪ ಧೈರ್ಯ ತುಂಬಿಸಿ ಹಾಗೂ ದಸಂಸದಿಂದ ಹಣ ಸಂಗ್ರಹ ಮಾಡಿ ಕೊಡುವುದು. ನಮ್ಮ ಜಿಲ್ಲೆಯಲ್ಲಿ ಅತ್ಯಂತ ಸ್ವಾಭಿಮಾನಿ ವ್ಯಕ್ತಿ ಈತ. ಇವರನ್ನು ಉಳಿಸಿಕೊಳ್ಳಬೇಕಾಗಿದೆ. ನೀವು ಬೆಂಗಳೂರಿನಲ್ಲಿ ಹೋಗಿ ಅವರನ್ನು ನೋಡುವುದು. ದಯವಿಟ್ಟು ಯಾವ ಕಾರಣಕ್ಕೂ ತಪ್ಪಿಸಬೇಡಿ." ಎಂದು ಇನ್ನೊಂದು ಪತ್ರವೂ ಅವರಿಂದ ಬಂತು.

ರಾಯಚೂರು ಜಿಲ್ಲಾ ಶಾಖೆಯಿಂದ ಮನವಿಪತ್ರವನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಿ, "ವಿಚಾರವಾದಿ – ಪ್ರಗತಿಪರ ಚಿಂತಕರನ್ನು ಉಳಿಸಿಕೊಳ್ಳಲು, ಆರ್ಥಿಕ ನೆರವನ್ನು ಕಳುಹಿಸಬೇಕೆಂದು" ಕೋರಿಕೊಳ್ಳಲಾಗಿತ್ತು. ರಾಜ್ಯ ಸಮಿತಿಯೂ ಈ ಕುರಿತ ಮನವಿಯನ್ನು ಎಲ್ಲಾ ಶಾಖೆಗಳಿಗೂ ಕಳುಹಿಸಿ ಕೊಡಲಾಗಿತ್ತು. 'ಪಂಚಮ' ಪತ್ರಿಕೆಯಲ್ಲೂ ಮನವಿ ಪತ್ರ ಪ್ರಕಟವಾಯಿತು. ಮುಖ್ಯಮಂತ್ರಿಗಳ ನಿಧಿಯಿಂದ ಧನ ಸಹಾಯಕ್ಕೆ, ರಾಯಚೂರು ಜಿಲ್ಲಾಧಿಕಾರಿಗಳೂ ಶಿಫಾರಸ್ಸು ಕಳುಹಿಸಿದ್ದರು.

ಸರ್ ಎಂ.ವಿ. ಕಾಲೇಜಿನ, ಮ್ಯಾನೇಜಿಂಗ್ ಕಮಿಟಿ ಸಭೆ ಮುಗಿಸಿಕೊಂಡು ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಗೆ ಹೋಗಿ ಬಂಡೆಪ್ಪನನ್ನು ನೋಡುವ ತಯಾರಿಯಲ್ಲಿದ್ದ ಕೃಷ್ಣಪ್ಪ, ಆ ದಿನ ರಾತ್ರಿ ಬೆಂಗಳೂರಿಗೆ ಹೋಗಲು ಬ್ಯಾಗ್ ಸಿದ್ಧಗೊಳಿಸಿ ಕಾಲೇಜಿಗೆ ಹೋಗಿದ್ದರು. ಆದರೆ ಸಂಜೆ ಟೆಲಿಗ್ರಾಂ ಕೈಲಿ ಹಿಡಿದು ಮನೆಗೆ ವಾಪಸಾಗಿದ್ದರು. ಕಾಲೇಜಿನ ವಿಳಾಸಕ್ಕೆ ಬಂದಿದ್ದ ಟೆಲಿಗ್ರಾಂನಲ್ಲಿ ಬೋಳ ಬಂಡೆಪ್ಪ ನಿಧನರಾದರು ಎಂದು ಬಾಬು ಬಂಡಾರಿಗಲ್‌ರವರು ತಿಳಿಸಿದ್ದರು. ಕೃಷ್ಣಪ್ಪ ತೀವ್ರ ನೋವಿನಿಂದ ಹತಾಶರಾಗಿ ಕುಳಿತಿದ್ದರು. ಆದಾಗ ತಾನೇ ಕಚೇರಿಯಿಂದ ಬಂದ ನನಗೆ ಏನೂ ತೋಚದಾಗಿ, ನಾನೂ ಮೌನಕ್ಕೆ ಶರಣಾದೆ. ಎದುರಿನ ಟೇಬಲ್ ಮೇಲಿದ್ದ ಪಂಚಮ ಪತ್ರಿಕೆಯ "ಕ್ಯಾನ್ಸರ್ ಚಿಕಿತ್ಸೆಗೆ ನೆರವಾಗಿ" ಮನವಿಯು ನಮ್ಮನ್ನು ಅಣಕಿಸುತ್ತಿತ್ತು.

೧೯೮೩ ಹಾಗೂ ೧೯೮೫ರಲ್ಲಿ ರಾಯಚೂರಿನಲ್ಲಿ ನಡೆದ ಜಿಲ್ಲಾ ಶಾಖೆಯ ಪ್ರಥಮ ಜಿಲ್ಲಾ ಸಮಾವೇಶ ಮತ್ತು ಜಿಲ್ಲಾ ಸಮ್ಮೇಳನದಲ್ಲಿ ದಲಿತ ಕಲಾಮಂಡಳಿ,



ನಾಟಕ – ಹೋರಾಟದ ಹಾಡುಗಳನ್ನು ಸಂಯೋಜಿಸಲು ಪ್ರಮುಖ ಪಾತ್ರವಹಿಸಿದ್ದರು ಬಂಡೆಪ್ಪ. ಕಾಲೇಜಿನಲ್ಲಿ ನಡೆಸಿದ ಕವಿಗೋಷ್ಠಿಯಲ್ಲಿ ಇವರ "ಕಾವ್ಯ ಸುಂದರಿ" ಕವನ ಬಹುಮಾನ ಪಡೆದಿತ್ತು. ಇವರ ಸಣ್ಣಕತೆ, ಲೇಖನಗಳು ಸ್ಥಳೀಯ ಪತ್ರಿಕೆಗಳಲ್ಲಿ ಆಗಾಗ್ಗೆ ಪ್ರಕಟಗೊಳ್ಳುತ್ತಿದ್ದವು. "ಮೀಸಲಾತಿ" ಕುರಿತು ಮೂರು ಪುಟದ ಲೇಖನವನ್ನು ಬರೆದು ಕೃಷ್ಣಪ್ಪನವರಿಗೆ ಕಳುಹಿಸಿದ್ದರು. ಹಾಗೂ ಡಾ. ಬಿ.ಆರ್. ಅಂಬೇಡ್ಕರ್‌ರವರ ಬಗ್ಗೆ ಓದಿಕೊಂಡಿದ್ದ ಬಂಡೆಪ್ಪ ಹಲವಾರು ಸಂದರ್ಭದಲ್ಲಿ ಅವರಿಗೆದುರಾಗುತ್ತಿದ್ದ ಪ್ರಮುಖ ಪ್ರಶ್ನೆಗಳನ್ನು ಕ್ರೋಢೀಕರಿಸಿ, ಎಲ್ಲ ಮಿತ್ರರಿಗೆ ಕಳುಹಿಸಿ ಹೆಚ್ಚಿನ ಅಭ್ಯಾಸಕ್ಕಾಗಿ ನಿಖರವಾದ ಮತ್ತು ವಿವರವಾದ ಉತ್ತರವನ್ನು ಅಪೇಕ್ಷಿಸಿ ಬರೆದ ಮನವಿ ಪತ್ರವೊಂದನ್ನು ಕಳಿಸಿದ್ದರು.

ದೇವಯ್ಯ ಹರವೆ, ಸೋಮಶೇಖರ ಅವರನ್ನು ಕಳೆದುಕೊಂಡಿದ್ದ ಕೃಷ್ಣಪ್ಪನವರಿಗೆ, ಈತನ ಸಾವು ಮನಸ್ಸಿಗೆ ತೀವ್ರ ಅಘಾತವನ್ನು ನೀಡಿತ್ತು. ಅಕ್ಟೋಬರ್ ತಿಂಗಳ 'ಪಂಚಮ'ದಲ್ಲಿ "ಕೊನೆಯಾದ ಕನಸುಗಾರ ಬೋಳೆಬಂಡೆಪ್ಪ" ಎಂಬ ಲೇಖನ ಮತ್ತು ಬಂಡೆಪ್ಪನವರ "ಹುಟ್ಟಿಲ್ಲ? ಹುಟ್ಟಿದರೂ ಎನನ್ನೂ ಮಾಡಲಿಲ್ಲ! ಎಂಬ ಅವರ ಕಟ್ಟಕಡೆಯ ಕವನದೊಂದಿಗೆ ತನ್ನ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿತ್ತು. ಆ ಕವನದ ಆಯ್ದಭಾಗ:

**ಸಾಯುವ ಕೊನೆಗೆ**
**ಒಂದಿಷ್ಟು ಹೃದಯವನ್ನು ಬಿಚ್ಚಲಿಲ್ಲ**
**ನೆಲ ಹಸನುಮಾಡುವ**
**ಸುಗ್ಗಿಯ ಕಾಲ ಇನ್ನೂ ಬಂದಿಲ್ಲ**
**ಹೌದು ಗೆಳೆಯಾ**

ನಾನು ಧಾರವಾಡಕ್ಕೆ ಕಳೆದ ವರ್ಷ ಹೋಗಿದ್ದ ಸಂದರ್ಭದಲ್ಲಿ ಬೋಳ ಬಂಡೆಪ್ಪನವರ ಮಗ ಹಾಗೂ ಅವರ ಚಿಕ್ಕಪ್ಪನ ಮಗ ಭೇಟಿಯಾಗಿದ್ದರು. ಬಂಡೆಪ್ಪನವರ ಹೆಸರಲ್ಲಿ ಸಂಸ್ಥೆಯೊಂದನ್ನು ಕಟ್ಟುವುದು, ಸಾಹಿತ್ಯಿಕ ಮತ್ತು ಸಾಮಾಜಿಕ ಕಾರ್ಯದಲ್ಲಿ ತೊಡಗಿಕೊಳ್ಳುವ ಅಪೇಕ್ಷೆಯನ್ನು ಅವರು ನನ್ನೊಂದಿಗೆ ಹಂಚಿಕೊಂಡಿದ್ದರು. ಕಳೆದ ಡಿಸೆಂಬರ್‌ನಲ್ಲಿ ಅವರೊಡನೆ ಮೊಬೈಲ್‌ನಲ್ಲಿ ಸಂಭಾಷಣೆಗೆ ತೊಡಗಿದಾಗ ಪತ್ನಿ ಗಂಗಮ್ಮ ಹಾಗೂ ಮಗಳು ಶಿಲ್ಪ, ಚಿಕ್ಕಪ್ಪ ಶಾಂತಕುಮಾರ್ ಮಾತನಾಡಿದ್ದರು. ಪ್ರಾಥಮಿಕ ಶಾಲಾ ಶಿಕ್ಷಕಿಯಾದ ಗಂಗಮ್ಮ, ಚಿಕ್ಕವಯಸ್ಸಿನಲ್ಲಿಯೇ ಸಂಗಾತಿಯನ್ನು ಕಳೆದುಕೊಂಡಾಗ್ಯೂ ೩ ಮಕ್ಕಳನ್ನು ಕಷ್ಟಪಟ್ಟು ಓದಿಸಿದರು. ಮೊದಲ ಮಗಳು ಜ್ಯೋತಿ ಸರ್ಕಾರಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾಳೆ. ಎರಡನೇ ಮಗಳು ಶೈಲಜಾ ವಿವಾಹಿತಳು, ೩ನೇ ಮಗಳು ಶಿಲ್ಪಾ ಪದವಿ ವ್ಯಾಸಂಗ ಮಾಡುತ್ತಿದ್ದಾಳೆ. ಮಗ ಮಧುಕಾಂತ, ಕೋರಮಂಗಲ ಸಿಮೆಂಟ್ ಫ್ಯಾಕ್ಟರಿಯಲ್ಲಿ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಆಗಿ ಸೇರಿದ್ದಾರೆ. ಗಂಗಮ್ಮನವರಿಗೆ ಪತಿ ಬೋಳ ಬಂಡೆಪ್ಪ ಶ್ರಮವಹಿಸಿ ಕೊಡಿಸಿದ್ದ 'ಟೀಚರ್' ವೃತ್ತಿಯ ಬಗ್ಗೆ ಬಹಳ ಗೌರವವಿದೆ. ಇನ್ನು ನಾಲ್ಕು ವರುಷಗಳಲ್ಲಿ ನಿವೃತ್ತರಾಗುವ ಗಂಗಮ್ಮ, ಅತಿ ಚಿಕ್ಕ ವಯಸ್ಸಿನಲ್ಲಿಯೇ ಸಂಗಾತಿಯನ್ನು ಕಳಕೊಂಡರೂ, ವ್ಯಸನಗ್ರಸ್ತಳಾಗದೆ ಮಕ್ಕಳನ್ನು ಓದಿಸಿ ಸ್ವಾವಲಂಬಿ ಪ್ರಜೆಗಳಾಗಿಸಿದ ಪರಿ ಎಲ್ಲರಿಗೂ ಮಾದರಿಯಾಗಿದೆ.

(ಮುಂದುವರೆಯುವುದು)

# 'ಗಾಂಧಿ: ಮೂರು ನೋಟಗಳು' : ಭದ್ರಾವತಿಯಲ್ಲಿ ವಿಚಾರ ಕಮ್ಮಟ



**ರಾ**ಜಕಾರಣಿಗಳಿಂದ ಬದಲಾವಣೆ ಅಸಾಧ್ಯ ಎಂಬ ಅರಿವು ಹೆಚ್ಚುತ್ತಿರುವ ಈ ದಿನಗಳಲ್ಲಿ ನಮ್ಮನ್ನು ನಾವೇ ಬದಲಿಸಿಕೊಳ್ಳಬೇಕಾದ ಅನಿವಾರ್ಯತೆಗೆ ಸಿಕ್ಕಿರುವ ನಮಗೆ ಇಂದು ಗಾಂಧಿ ಬದುಕಿನ ಅಧ್ಯಯನ ನೆರವಿಗೆ ಬರಬಲ್ಲುದು ಎಂದು ಬೆಂಗಳೂರಿನ ಗಾಂಧಿ ಸ್ಮಾರಕ ನಿಧಿಯ ಗೌ. ಕಾರ್ಯದರ್ಶಿ ಜಿ.ಬಿ. ಶಿವರಾಜು ಅಭಿಪ್ರಾಯಪಟ್ಟರು. ಅವರು ಮಾರ್ಚ್ ೧೬ರಂದು ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಭದ್ರಾವತಿಯ ಸರ್ ಎಂ.ವಿ. ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹಯೋಗದಲ್ಲಿ ಗಾಂಧಿ ಭಾರತಕ್ಕೆ ಮರಳಿದ ಶತಮಾನೋತ್ಸವದ ಸಂದರ್ಭವಾಗಿ ಏರ್ಪಡಿಸಿದ್ದ 'ಗಾಂಧಿ: ಮೂರು ನೋಟಗಳು' ವಿಚಾರ ಕಮ್ಮಟವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಇಡೀ ಪ್ರಪಂಚವೇ ಇಂದು ಗಾಂಧಿ ಅಧ್ಯಯನದಲ್ಲಿ ತೊಡಗಿರುವಾಗ ನಾವು ಅವರಿಂದ ವಿಮುಖರಾಗುತ್ತಿರುವುದು ವಿಷಾದನೀಯ ಎಂದು ಅವರು ಅಭಿಪ್ರಾಯಪಟ್ಟರು.

ಪ್ರಭಾರ ಪ್ರಾಂಶುಪಾಲ ಪ್ರೊ. ಉಮಾಶಂಕರ್ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಪ್ರೊ. ಶಿವಮೂರ್ತಿ ನಾಯಕ್ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಮೊದಲ ಗೋಷ್ಠಿಯಲ್ಲಿ 'ಗಾಂಧಿ ಮತ್ತು ಕಾಂಗ್ರೆಸ್ ಆಂದೋಲನ' ಕುರಿತು ಮಾತನಾಡಿದ ಮಂಗಳೂರು ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ರಾಜಾರಾಂ ತೋಳ್ಪಾಡಿಯವರು, ಇಂಗ್ಲೆಂಡ್ ಮತ್ತು ದ. ಆಫ್ರಿಕಾಗಳಲ್ಲಿನ ದೀರ್ಘ ಕಾಲದ ವಾಸ್ತವ್ಯದಲ್ಲಿ ಗಾಂಧಿ ಅನುಭವಿಸಿದ ಪರಕೀಯತೆ ಮತ್ತು ಅದನ್ನು ಗೆಲ್ಲಲು ಅವರು ತಮ್ಮ 'ಸ್ವ'ವನ್ನು ಕಂಡುಕೊಳ್ಳಲು ನಡೆಸಿದ ಪ್ರಯತ್ನಗಳು–ಪ್ರಯೋಗಗಳು ಭಾರತದಲ್ಲಿ ಅವರು ನೇತೃತ್ವ ವಹಿಸಿಕೊಂಡ ಕಾಂಗ್ರೆಸ್ ಆಂದೋಲನದಲ್ಲಿ ಅಭಿವ್ಯಕ್ತಿ ಪಡೆದುಕೊಂಡವು ಎಂದರು.

ಎರಡನೇ ಗೋಷ್ಠಿಯಲ್ಲಿ 'ಗಾಂಧಿ–ಅಂಬೇಡ್ಕರ್ ಮುಖಾಮುಖಿ' ವಿಷಯವಾಗಿ ಮಾತನಾಡಿದ ಬಳ್ಳಾರಿಯ ಡಾ. ಕೆ. ಶಿವರಾಮ ಕಾರಂತ ಮೆಮೊರಿಯಲ್ ಪ್ರ.ದ. ಕಾಲೇಜಿನ ಪ್ರೊ.ಐವಾನ್ ಲೋಬೋ ಅವರು, ಗಾಂಧಿ ಜ್ಞಾನೋದಯ (Enlightnment)ದ ಮತ್ತು ಅಂಬೇಡ್ಕರ್ ಸಬಲೀಕರಣ(Empowerment)ದ ಪ್ರತೀಕಗಳಾಗಿದ್ದು, ಇವರೆಡರ ದಂದ್ವ ನಡಿಗೆಯೇ ಭಾರತವನ್ನು ಪ್ರಬುದ್ಧ ಪ್ರಜಾಪ್ರಭುತ್ವವಾಗಿ ಉಳಿಸಿರುವುದರಿಂದ ಇವರಿಬ್ಬರ ವಿಚಾರಗಳ ಒಂದು ಸೃಜನಶೀಲ ಬೆಸುಗೆ ಮಾತ್ರ ಆಧುನಿಕ ಭಾರತವನ್ನು ಮುಂದೊಯ್ಯಬಲ್ಲುದು ಎಂದರು.

ಅಂತಿಮ ಗೋಷ್ಠಿಯಲ್ಲಿ 'ಗಾಂಧಿ ಮತ್ತು ಸಮಾಜವಾದಿಗಳು' ವಿಷಯದ ಬಗ್ಗೆ ಮಾತನಾಡಿದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್. ನಾಗಭೂಷಣ ಅವರು, ಸಂತನ ಜೀವನ ಮೌಲ್ಯಗಳು ಮತ್ತು ಜೀವನ ಕ್ರಮವನ್ನು ಪ್ರತಿಪಾದಿಸುತ್ತಿದ್ದ ಗಾಂಧಿ ವಿಚಾರಧಾರೆಯನ್ನು ಅದರ ಮೂಲ ಭಾವನೆಯ ಸ್ಫೂರ್ತಿಯನ್ನು ಒಪ್ಪಿಕೊಂಡೇ ಸಮಾಜವಾದಿಗಳು ಅವರೊಂದಿಗೆ ನಿರಂತರ ಸಂವಾದ ನಡೆಸುತ್ತ ಅದನ್ನು ಸಾಮಾನ್ಯ ಮನುಷ್ಯನ ಬದುಕಿಗೂ ಅಳವಡುವಂತೆ ಮಾಡುವ ಮಾದರಿಯೊಂದನ್ನು ರೂಪಿಸುವ ಪ್ರಯತ್ನ ಮಾಡಿದರು ಎಂದರು.

(ವರದಿ: **ಸವಿತಾ ನಾಗಭೂಷಣ**)

# 'ಶಿವರಾಮ ಕಾರಂತರ ಸಾಮಾಜಿಕ ದರ್ಶನ' : ಸಾಗರದಲ್ಲೊಂದು ವಿಚಾರ ಕಮ್ಮಟ

**ನ**ವೋದಯದ ನಾಲ್ವರು ದಿಗ್ಗಜಗಳ ಪೈಕಿ ಶಿವರಾಮ ಕಾರಂತರು ವಿಶಿಷ್ಟ ಲೋಕದೃಷ್ಟಿಯ ಅಪ್ಪಟ ಆಧುನಿಕ ಲೇಖಕರಾಗಿದ್ದು ಅವರನ್ನು ಆಧುನಿಕ ಕನ್ನಡ ಬದುಕಿನ ಒಂಟಿ ಸಲಗವೆಂದು ಕರೆಯುವುದು ಉಚಿತವಾಗಿಯೇ ಇದೆಯೆಂದು ಸಾಹಿತ್ಯ ವಿಮರ್ಶಕ ಹಾಗೂ ಲೋಹಿಯಾ ಜನ್ಮ ಶತಾಬ್ಧಿ ಪ್ರತಿಷ್ಠಾನದ ಅಧ್ಯಕ್ಷ ಡಿ. ಎಸ್. ನಾಗಭೂಷಣ ಅಭಿಪ್ರಾಯಪಟ್ಟರು ಅವರು ಕಳೆದ ಫೆಬ್ರುವರಿ ೨೬ರಂದು ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಸಾಗರದ ಇಂದಿರಾಗಾಂಧಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಕನ್ನಡ ವೇದಿಕೆಯ ಸಹಯೋಗದೊಂದಿಗೆ 'ಶಿವರಾಮ ಕಾರಂತರ ಸಾಮಾಜಿಕ ದರ್ಶನ' ಕುರಿತ ಒಂದು ದಿನದ ವಿಚಾರ ಕಮ್ಮಟದ ಆಶಯ ಮಾತುಗಳನ್ನಾಡುತ್ತಿದ್ದರು.

ಲೋಹಿಯಾರ ತತ್ವ ಚಿಂತನೆ, ಕುವೆಂಪು ಅವರ ಕಲಾ ಸೃಷ್ಟಿ, ಕಾರಂತರ ಜೀವನ ದೃಷ್ಟಿ ಮತ್ತು ಪ್ರಯೋಗಶೀಲತೆ ಇವುಗಳು ಕನ್ನಡದ ಯಾವುದೇ ಬರಹಗಾರರನ್ನು ಪ್ರಭಾವಿಸದೆ ಇರಲು ಸಾಧ್ಯವೇ ಇಲ್ಲ ಎಂಬ ಪೂರ್ಣಚಂದ್ರ ತೇಜಸ್ವಿ ಅವರ ಮಾತನ್ನು ಉಲ್ಲೇಖಿಸಿದ ಅವರು ಪೂರ್ವಸಿದ್ಧ ಮಾದರಿಗಳನ್ನು ನಂಬದೆ ತಾವು ಕಂಡುಕೊಂಡ ಲೋಕ ಸತ್ಯದ ಆಧಾರದ ಮೇಲೆ ತಮ್ಮ ಬದುಕನ್ನು ಕಟ್ಟಿಕೊಂಡ ಅವರ ಸಾಹಿತ್ಯ ಸಹಜವಾಗಿಯೇ ನಿರಂತರ ಕುತೂಹಲ ಮತ್ತು ಅಧ್ಯಯನವನ್ನು ಆಹ್ವಾನಿಸಬಲ್ಲುದಾಗಿದೆ ಎಂದು ನಾಗಭೂಷಣ ಹೇಳಿದರು.

ಕಾಲೇಜಿನ ಪ್ರಭಾರ ಪ್ರಾಂಶುಪಾಲ ಉಮೇಶ್ ಕಮ್ಮಟವನ್ನು ಉದ್ಘಾಟಿಸಿದರು. ಕನ್ನಡ ವಿಭಾಗದ ಮುಖ್ಯಸ್ಥ ಜಿ.ಸಣ್ಣಹನುಮಪ್ಪ ಅಧ್ಯಕ್ಷತೆ ವಹಿಸಿದ್ದರು. ಉಪನ್ಯಾಸಕರಾದ ಡಾ.ಕೆ.ಪ್ರಭಾಕರ್‌ರಾವ್, ಎಚ್.ಎಸ್.ರಘುನಾಥ್ ಹಾಜರಿದ್ದರು.

ಮೊದಲ ಗೋಷ್ಠಿಯಲ್ಲಿ 'ಕಾರಂತರ ಕಾದಂಬರಿ ಲೋಕ' ಕುರಿತು ಶಿವಮೊಗ್ಗದ ಸಹ್ಯಾದ್ರಿ ಕಲಾ ಕಾಲೇಜಿನ ಇಂಗ್ಲೀಷ್ ಉಪನ್ಯಾಸಕ ಪ್ರೊ. ಅವಿನಾಶ್ ಮಾತನಾಡಿ ಬಹುಪ್ರಕಾರಗಳಲ್ಲಿ ಬರೆದು ಅನುಭವಗಳನ್ನು ಪರೀಕ್ಷೆಗೆ ಒಡ್ಡಿದ ಕಾರಂತರ ಕಾದಂಬರಿಗಳಲ್ಲಿ ಪ್ರಾಮಾಣಿಕತೆ, ಆತ್ಮಗೌರವ, ಶ್ರಮ ಸಂಸ್ಕೃತಿ – ಇವು ಪ್ರತಿಪಾದಿತವಾಗಿರುವ ಪ್ರಮುಖ ಮೌಲ್ಯಗಳು ಎಂದರು.



'ಕಾರಂತರ ಜೀವನ ದರ್ಶನ' ಕುರಿತ ಗೋಷ್ಠಿಯಲ್ಲಿ ಭದ್ರಾವತಿಯ ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ.ಎಂ.ಚಂದ್ರಶೇಖರಯ್ಯ ಮಾತನಾಡಿ ದೇವರನ್ನೂ ಮನುಷ್ಯನ ಅಳತೆಗಳಲ್ಲಿಯೇ ನೋಡುವ ಚಿಕಿತ್ಸಕ ದೃಷ್ಟಿಯ ಕಾರಂತರ ನಿರಂತರ ಪ್ರವಾಸದ ಬದುಕಿನ ಹಿಂದೆ ಕಲಾತ್ಮಕ ಮೌಲ್ಯಗಳನ್ನು ಅನ್ವೇಷಿಸುವ ತುಡಿತ ಇತ್ತು ಎಂದರು.


ಕವಯತ್ರಿ ಸವಿತಾ ನಾಗಭೂಷಣ, ತಾವು ಕಾರಂತರನ್ನು ಕಂಡಿದ್ದ ಹಲವು ಸಂದರ್ಭಗಳನ್ನು ನೆನಪಿಸಿಕೊಂಡು ಅವರ ವ್ಯಕ್ತಿತ್ವವನ್ನು ಕಟ್ಟಿಕೊಟ್ಟರು.

ಕಮ್ಮಟದ ಸಮಾರೋಪ ಭಾಷಣ ಮಾಡಿದ ರಂಗಕರ್ಮಿ ವೆಂಕಟರಮಣ ಐತಾಳರು, ಕಾರಂತರಿಗೆ ಕಲೆ ಮತ್ತು ಜೀವನ ಬೇರೆ ಬೇರೆ ಆಗಿರಲಿಲ್ಲ ಎಂದರು. ನಿಸರ್ಗ, ನೃತ್ಯ, ಕಲೆ ಅವರಿಗೆ ಹೆಚ್ಚು ಸಮಾಧಾನ ಕೊಡುವ ವಿಷಯಗಳಾಗಿದ್ದು, ಸಣ್ಣ ಸಣ್ಣ ವಿಷಯಗಳ ಬಗ್ಗೆ ಅವರು ಹೊಂದಿದ್ದ ಕುತೂಹಲವೇ ಅವರನ್ನು ಲೇಖಕರನ್ನಾಗಿ ರೂಪಿಸಿತು ಎಂಬುದನ್ನು ವಿವರಿಸಿದರು.

(ವರದಿ: **ಎಂ. ರಾಘವೇಂದ್ರ**)

# ಇಸ್ಲಾಂಗೊಂದು 'ಪುನರುಜ್ಜೀವನ'ದ ಅಗತ್ಯವಿದೆ...

–ಹಸನ್ ಸುರೂರ್



ಇಸ್ಲಾಂ ಹೆಸರಿನಲ್ಲಿ ಜಗತ್ತಿನಾದ್ಯಂತ ನಿರಂತರವಾಗಿ ನಡೆದಿರುವ ಮೈನಡುಗಿಸುವಂತಹ ಶಿರಚ್ಛೇದ ಮತ್ತು ಮಾರಣಹೋಮಗಳು ಇಸ್ಲಾಮೀ ಚಿಂತಕರೂ ಸೇರಿದಂತೆ ಶಾಂತಿಯುತ ಮತ್ತು ಸೌಹಾರ್ದಯುತವಾದ ಜಗತ್ತನ್ನು ಬಯಸುವ ಮತ್ತು ಆ ದಿಸೆಯಲ್ಲಿ ಕ್ರಿಯಾಶೀಲರಾಗಿರುವ ನಾಯಕರನ್ನು ತಲ್ಲಣಗೊಳಿಸಿದೆ. ಯಾವ ಧರ್ಮ ಜನರ ನಡುವೆ ಸ್ನೇಹ ಸಂಬಂಧಗಳ ಸೇತುವೆಯಾಗಬೇಕಿತ್ತೋ ಆ ಧರ್ಮ ಅಸಹನೆಯ, ಕ್ರೋಧದ, ಬರ್ಬರ ಹಿಂಸೆಯ ಪ್ರತೀಕವಾಗುತ್ತಿರುವ ದುರಂತ ಇಸ್ಲಾಮನ್ನು ಒಂದು ಧರ್ಮವಾಗಿ ನೋಡುವ ಬಗೆಗಳ ಬಗ್ಗೆಯೇ ಇಂದು ಚರ್ಚೆಗಳು ಆರಂಭವಾಗಿವೆ. ನಿರ್ದಿಷ್ಟವಾಗಿ ಪ್ಯಾರಿಸ್ಸನ ಚಾರ್ಲಿ ಹೆಬ್ಡೋ ನರಹತ್ಯೆ, ಇವು ದಾರಿ ತಪ್ಪಿದ ಅಥವಾ ತಲೆಕೆಟ್ಟ ಕೆಲವು ಅನುಯಾಯಿಗಳು ಇಸ್ಲಾಂನ ಹೆಸರಿನಲ್ಲಿ ನಡೆಸುತ್ತಿರುವ ಹತ್ಯೆಗಳೋ ಅಥವಾ ಇಸ್ಲಾಂ ನಿರೂಪಿತವಾಗಿರುವ ಬಗೆಯೇ ಇವಕ್ಕೆ ಕಾರಣವೋ ಎಂಬ ಚರ್ಚೆ ಈಗ ಬಿರುಸಾಗಿ ನಡೆದಿದೆ.

ಜಾಗತಿಕ ಇಸ್ಲಾಂ ಕುರಿತು, ನಿರ್ದಿಷ್ಟವಾಗಿ ಭಾರತದ ಮುಸ್ಲಿಂ ಸಮಾಜ ಕುರಿತು ವಿಶೇಷ ಅಧ್ಯಯನ ಮಾಡಿರುವ ಹಸನ್ ಸುರೂರ್(ಇವರು 'ಭಾರತದ ಮುಸ್ಲಿಮರ ವಸಂತಕಾಲ' ಎಂಬ ಗಮನಾರ್ಹ ಪುಸ್ತಕದ ಲೇಖಕರೂ ಹೌದು) ಇಸ್ಲಾಂನ ಓರ್ವ ನಿಷ್ಠಾವಂತ ಅನುಯಾಯಿಯಾಗಿ, ಇಸ್ಲಾಂನ ಓರ್ವ ಧಾರ್ಮಿಕ ಪಂಡಿತರಾಗಿ ಮತ್ತು ಸಾರ್ವಜನಿಕ ಬುದ್ಧಿಜೀವಿಯಾಗಿ ಇಂದು ಯಾವುದನ್ನು ಇಸ್ಲಾಮೀ ಭಯೋತ್ಪಾದನೆ ಎಂದು ಕರೆಯಲಾಗುತ್ತಿದೆಯೇ, ಅದಕ್ಕೆ ಇಸ್ಲಾಂ ಸಾರ್ವಜನಿಕವಾಗಿ ಅಭಿವ್ಯಕ್ತಿಗೊಂಡಿರುವ ಬಗೆಗಳಲ್ಲೇ, ಅದರ ಚರಿತ್ರೆಯಲ್ಲೇ ತೊಂದರೆಗಳಿವೆಯೇ ಎಂಬ ಒಂದು ವಸ್ತುನಿಷ್ಠ ಮತ್ತು ದಿಟ್ಟ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ. ಓದಿ ನಿಮಗೇನನ್ನಿಸಿತು ಬರೆಯಿರಿ–ಸಂ



**ಪ್ರ**ತಿಯೊಂದು ಇಸ್ಲಾಮಿಕ್ ಭಯೋತ್ಪಾದನೆಯ ಕೃತ್ಯದ ನಂತರ, ಇಂಥ ಕೃತ್ಯ ಮಾಡುವವರೆಲ್ಲ ನಿಜವಾಗಿಯೂ ಮುಸ್ಲಿಮರಲ್ಲ, ಅವರದು ನಿಜ ಅರ್ಥದಲ್ಲಿ ಇಸ್ಲಾಮ್ ಆಗಲು ಸಾಧ್ಯವಿಲ್ಲ ಎಂದು ಮುಸ್ಲಿಮರೆಲ್ಲ ಹೇಳಿಕೆ ನೀಡುತ್ತಾರೆ. ನಿಜ, ಇಸ್ಲಾಮ್ ಶಾಂತಿಯನ್ನು ಪ್ರತಿಪಾದಿಸುತ್ತದೆ, ಹಿಂಸೆಯನ್ನಲ್ಲ ಎಂದು ವಿವರಿಸುತ್ತಾರೆ. ಇದಕ್ಕೆ ಸಮರ್ಥನೆಯಾಗಿ ಕುರಾನಿನ ಸೂಕ್ತಿಗಳನ್ನು *ಹದೀಸ್*(ಪ್ರವಾದಿಯವರ ಉಪದೇಶ ಹಾಗೂ ಸಂದೇಶಗಳು) ನೀಡಿ ಅದು ಹೇಗೆ ಹಿಂಸೆಗೆ ವಿರುದ್ಧವಾಗಿದೆ ಎಂದು ತೋರಿಸುತ್ತಾರೆ.

*ಚಾರ್ಲಿ ಹೆಬ್ಡೊ* ಮಾರಣಹೋಮದ ಘಟನೆಯ ನಂತರ 'ಇದು ನೈಜ ಇಸ್ಲಾಮ್ ಅಲ್ಲ' ಎಂಬ ಮಾತುಗಳನ್ನು ಮತ್ತೆ ಮತ್ತೆ ಕೇಳತೊಡಗಿದ್ದೇವೆ. ಹಾಗಿದ್ದರೂ, ಪ್ರವಾದಿಯವರಿಗೆ ಆದ ಅವಮಾನಕ್ಕೆ ಪ್ರತೀಕಾರವಾಗಿ ರಕ್ತದೋಕುಳಿ ಹರಿಸಿದವರು ಬಂದೂಕುಗಳನ್ನು ಹಿಡಿದುಕೊಂಡು 'ಅಲ್ಲಾಹು ಅಕ್ಬರ್' ಎಂದು ಕೂಗುತ್ತಿದ್ದರು ಎಂಬುದನ್ನು ನಾವು ಮರೆಯಲು ಸಾಧ್ಯವಿಲ್ಲ. *ಮುಸ್ಲಿಮ್ ಬ್ರದರ್‌ಹುಡ್* ಸಂಘಟನೆಯ ಸ್ಥಾಪಕ ಹಸನ್ ಅಲ್ ಬಾನಾನ ಮೊಮ್ಮಗ ಹಾಗೂ ಖ್ಯಾತ ಮುಸ್ಲಿಮ್ ಚಿಂತಕ ತಾರೀಖ್ ರಹಮಾನ್ ಈ ಘಟನೆಯನ್ನು ಇಸ್ಲಾಮಿನ ಮೂಲ ತತ್ವಗಳಿಗೆ ಮಾಡಿದ ಮಹಾದ್ರೋಹ ಎಂಬ ಕಟು ಶಬ್ದಗಳಲ್ಲಿ ಖಂಡಿಸಿದ. ಸೌದಿ ಅರೇಬಿಯಾದಲ್ಲಿ ವಹಾಬಿ ಇಸ್ಲಾಮ್ ಎಂಬ ಉಗ್ರವಾದಿ ಸಂಘಟನೆಯು ಇದು ಹೇಡಿಗಳ ಕೃತ್ಯ ಎಂದು ಖಂಡಿಸಿತು.

ಆದರೆ ಇಂಥ ಘಟನೆಗಳನ್ನು ಸುಮ್ಮನೆ ತಳ್ಳಿಹಾಕಲು ಸಾಧ್ಯವಿಲ್ಲ. ಪ್ರಪಂಚದಾತ್ಯಂತ ಇರುವ ಕೋಟಿಗಟ್ಟಲೆ ಮುಸ್ಲಿಮರು ಶಾಂತಿಯಿಂದ ಬದುಕುತ್ತಿದ್ದಾರೆ ಎಂಬುದು ಸುಳ್ಳಲ್ಲ. ಅವರು ತಮ್ಮ ಮೇಲೆ ಆಗುತ್ತಿರುವ ನಿಜವಾದ–ಕಲ್ಪಿತ ದಬ್ಬಾಳಿಕೆಗಳ ಕಾರಣದಿಂದ ಇತರ ಧರ್ಮಗಳ ಮೇಲೆ ಪೂರ್ವಾಗ್ರಹಗಳನ್ನು ಸೃಷ್ಟಿಸಿಕೊಂಡು ಅವರೊಂದಿಗೆ ಬೆರೆತು ಬದುಕಲು ತಿರಸ್ಕರಿಸುತ್ತಿದ್ದರೂ ತಮ್ಮ ನಂಬಿಕೆಗಳಿಗೆ ವಿರುದ್ಧವಾಗಿರುವವರನ್ನೆಲ್ಲ ಕೊಂದು ಹಾಕಬೇಕು ಎಂದು ಹೇಳುವುದಿಲ್ಲ. ಬೇರೆಲ್ಲಾ ಧರ್ಮಗಳಂತೆ ಇಸ್ಲಾಮ್ ಸಹ ಹಿಂಸೆಯನ್ನು ಬೋಧಿಸುವುದಿಲ್ಲ. ಪ್ಯಾರಿಸ್ ಹತ್ಯಾಕಾಂಡವನ್ನು ಖಂಡಿಸುವ ಮುಸ್ಲಿಮರನ್ನು ಹುಡುಕಲು *ಫಾಕ್ಸ್ ನ್ಯೂಸ್* ಕಷ್ಟಪಟ್ಟರೂ ಪ್ರಪಂಚಾದ್ಯಂತ ಮುಸ್ಲಿಮರು ಈ ಘಟನೆಯನ್ನು ಖಂಡಿಸಿದರು. ಆದರೆ ಈ ಹಿಂದೆ ಇಂಥ ಖಂಡನೆಗಳು ಕೆಲವು ಷರತ್ತುಗಳಿಗೆ ಒಳಪಟ್ಟಿರುತ್ತಿದ್ದವು. ಅದಕ್ಕೆ ಹೋಲಿಸಿದರೆ ಇದು ಮುಸ್ಲಿಮ್ ಜನಾಂಗದ ದೃಷ್ಟಿಕೋನದಲ್ಲಿ ಆಗಿರುವ ಬಹಳ ದೊಡ್ಡ ಬದಲಾವಣೆಯನ್ನು ಸೂಚಿಸುತ್ತದೆ.

ಆದರೆ, ನಿಜ ಮುಸ್ಲಿಮರಲ್ಲದವರೆಂದು–ನಿಜ ಇಸ್ಲಾಮನ್ನು ಪ್ರತಿನಿಧಿಸದವರೆಂದು ಹೇಳಲಾಗುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಲೇ ಇದೆ. ಇಂಥವರ ಸಂಖ್ಯೆ ಪಶ್ಚಿಮ ಏಶ್ಯಾದಿಂದ ಹಿಡಿದು ಆಫ್ರಿಕಾ, ದಕ್ಷಿಣ ಏಶ್ಯಾ, ಯೂರೋಪ್, ಅಮೇರಿಕಾದವರೆಗೆ ಹೆಚ್ಚುತ್ತಲೇ ಇದೆ. ಅಷ್ಟೇ ಏಕೆ, ಭಾರತದ ಮುಸ್ಲಿಮ್ ಯುವಕರೂ ಸಹ 'ಜೆಹಾದ್'ನಲ್ಲಿ ಭಾಗಿಯಾಗತೊಡಗಿದ್ದಾರೆ. ೯/೧೧ನ ಸಂದರ್ಭದಲ್ಲಿ ಒಂದೇ ಒಂದು ಅಲ್ ಖೈದಾ ಇದ್ದರೂ ಅದು ಅಮೆರಿಕಾದ ರಾಕ್ಷಸ ರಾಜಕಾರಣದ ವಿರುದ್ಧ ಹೋರಾಡುತ್ತಿತ್ತೇ ಹೊರತು ಅದು ಇಸ್ಲಾಮಿನ ಹೆಸರಿನಲ್ಲಿ ಅಲ್ಲ.

ಆದರೆ ಇಂದು ಪ್ರಪಂಚದ ಎಲ್ಲ ಕಡೆ ಇಸ್ಲಾಮಿಕ್ ಉಗ್ರರ ಸಂಘಟನೆಗಳು ನಾಯಿಕೊಡೆಗಳಂತೆ ಬೆಳೆದಿವೆ. *ಬೋಕೋ ಹರಾಮ್, ಅಲ್ ಶಬಾಬ್, ಇಸ್ಲಾಮಿಕ್ ಸ್ಟೇಟ್, ಅಲ್ ಖೈದಾ,* ನೂರಾರು ತರಹದ *ತಾಲಿಬಾನ್*, ಸಾವಿರಾರು *ಲಷ್ಕರ್*ಗಳು, ಮಿಲಿಟರಿ ತುಕಡಿಗಳು–ಒಂದು ಇನ್ನೊಂದಕ್ಕಿಂತ ಭಯಾನಕವಾಗಿವೆ. ಕಳೆದ ಒಂದು ತಿಂಗಳಲ್ಲೇ ಇಸ್ಲಾಮಿಕ್ ಉಗ್ರರಿಂದ ಹರಿದ ರಕ್ತದ ಹೊಳೆ ಎಲ್ಲರನ್ನೂ ತತ್ತರಿಸುವಂತೆ ಮಾಡಿದೆ– ಪೇಶಾವರದಲ್ಲಿ ನಡೆದ ೧೩೨ ಮುಗ್ಧ ಮಕ್ಕಳ ಮಾರಣಹೋಮ, ಸಿಡ್ನಿ ಕೆಫೆಯ ಮುತ್ತಿಗೆ, ಯೆಮೆನ್ ಮತ್ತು ಇರಾಕ್‌ನಲ್ಲಿ ನಡೆದ ಸಾಲು ಸಾಲು ಆತ್ಮಹತ್ಯಾದಳದ ಪಾತಕಗಳು, ಫಿಲಿಪೈನ್ಸ್‌ನಲ್ಲಿ ಬಸ್ಸೊಂದರ ಮೇಲೆ ನಡೆದ ಬಾಂಬ್ ದಾಳಿ, ನೈಜೀರಿಯಾದ ಬಾಗಾ ಪಟ್ಟಣದಲ್ಲಿ ಸುಮಾರು ೨೦೦೦ಕ್ಕೂ ಹೆಚ್ಚು ಜನರನ್ನು ಸಾಮೂಹಿಕವಾಗಿ ಕೊಂದ ದಾರುಣ ಘಟನೆ, ಐಸಿಸ್ ಉಗ್ರರಿಂದ ಇರಾಕ್–ಸಿರಿಯಾಗಳಲ್ಲಿ ನಡೆಯುತ್ತಿರುವ ನಿರಂತರ ಹತ್ಯಾಕಾಂಡಗಳು–ಹೀಗೆ ಹಿಂಸೆಗೆ ಕೊನೆಯೆಂಬುದೇ ಇಲ್ಲ.

ಒಂದು ಧರ್ಮದವರು ಇನ್ನೊಂದು ಧರ್ಮಕ್ಕೆ ಸೇರಿದವರನ್ನು ಹೀಗೆ ನಿರಂತರವಾಗಿ ಕೊಲ್ಲುತ್ತಿರುವ ಉದಾಹರಣೆಗಳು ಎಲ್ಲಿಯಾದರೂ ಇವೆಯೇ?

ಯಾಕೆ ಇಸ್ಲಾಮ್ ಇಂಥ ಮಹಾಪಾತಕಿಗಳ ಪಡೆಯನ್ನು ಸೃಷ್ಟಿಸುತ್ತಿದೆ?

"ಇಸ್ಲಾಮ್‌ನ ಈ ಸಮಸ್ಯೆಯನ್ನು ಬಡತನ, ಹತಾಶೆಗಳ ಕೂಪದಲ್ಲಿ ಮುಳುಗಿದ ಜನರ ಸಮಸ್ಯೆಯೆಂದು ವಿವರಿಸುವ ಲೆನಿನ್‌ವಾದಿ ಸಮಾಜಶಾಸ್ತ್ರಜ್ಞರೆಂಬ ಪ್ರಯೋಜನಕಾರಿ ಮೂರ್ಖರ ವ್ಯಾಖ್ಯಾನವನ್ನು ಅಲ್ಲಗೆಳೆಯಬೇಕಾದ ಸಮಯವೀಗ ಬಂದಿದೆ" ಎಂದು ಫ್ರೆಂಚ್ ಚಿಂತಕ ಬರ್ನಾಡ್ ಲೆವಿಯವರು *ಸಂಡೇ ಟೈಮ್ಸ್*‌ನಲ್ಲಿ ಬರೆದ ಮಾತುಗಳ ಬಗ್ಗೆ ಗಂಭೀರವಾಗಿ ಆಲೋಚಿಸುವ ಸಂದರ್ಭ ಬಂದಿದೆ.

ಚಾರ್ಲಿ ಹೆಬ್ಡೋ ಹತ್ಯಾಕಂಡದಲ್ಲಿ ಭಾಗಿಯಾದ ಇಬ್ಬರು ಸಹೋದರರ ಉದಾಹರಣೆಯನ್ನೇ ತೆಗೆದುಕೊಳ್ಳಿ. ಮುಖ್ಯವಾದ ಸಂಗತಿಯೇನೆಂದರೆ, ಇಸ್ಲಾಮಿನ ಪಾಲಕರಾದ ಅವರು ತಾವು ಹಿಂಸಾಕೃತ್ಯಗಳನ್ನು ನಡೆಸುವಾಗ *ಅಲ್ಲಾಹು ಅಕ್ಬರ್* ಎಂದು ಕೂಗುತ್ತ ಅದಕ್ಕೆ ಧಾರ್ಮಿಕ ಆಚರಣೆಯ ರೂಪ ನೀಡಿದ್ದಾರೆ. ಬಡ ಹಿಂದೂಗಳು, ಕ್ರಿಶ್ಚಿಯನ್ನರು, ಜ್ಯೂಗಳು ಸಹ ತಮ್ಮ ಕೃತ್ಯಗಳಿಗೆ ಧಾರ್ಮಿಕ

ಸಮ್ಮತಿಯನ್ನಲ್ಲದಿದ್ದರೂ, ಧಾರ್ಮಿಕ ಪಠ್ಯವೊಂದರ ಸಮರ್ಥನೆಯನ್ನು ಮುಂದೊಡ್ಡಬಹುದು. ಆದರೆ ಈಗ ಏನಾಗುತ್ತಿದೆಯೋ ಅದು, ಪೂರ್ಣವಾಗಿ ಮುಸ್ಲಿಂ ಮತ್ತು ಇಸ್ಲಾಂನ ಸಮಸ್ಯೆ ಎಂಬ ಕಟು ಸತ್ಯವನ್ನು ಮುಸ್ಲಿಮರು ಈಗ ಎದುರಿಸಬೇಕಿದೆ.

"ನಾವು ಒಪ್ಪಲಿ ಬಿಡಲಿ ಉಗ್ರರಲ್ಲಿ ಬಹುಪಾಲು ಜನ ನಾವು ಮುಸ್ಲಿಮರು ಎಂದು ಗುರ್ತಿಸಿಕೊಳ್ಳುತ್ತಾರೆ. ಅಂಥವರನ್ನು ನಾವು ನಿಜ ಮುಸ್ಲಿಮರಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಯಾಕೆಂದರೆ ಅವರೇ ಹಾಗೆ ತಮ್ಮನ್ನು ಗುರ್ತಿಸಿಕೊಂಡಿದ್ದಾರೆ" ಎಂದು ಬ್ರಿಟನ್ನಿನ ಸಂಸ್ಕೃತಿ ಕಾರ್ಯದರ್ಶಿ ಸಾಜಿದ್ ಜಾವಿದ್ ಇತ್ತೀಚೆಗೆ ಹೇಳಿರುವುದನ್ನು ಗಮನಿಸಬೇಕು.

ಮುಖ್ಯ ಸಂಗತಿಗೆ ಬರುವುದಾದರೆ: ಇಸ್ಲಾಮಿಕ್ ಉಗ್ರವಾದ ಕೆಲವೇ ಕೆಲವು ಮತಿಹೀನ ಮುಸ್ಲಿಮರ ಕೆಲಸವೇ? ಅಥವಾ ಅದಕ್ಕೂ ಇಸ್ಲಾಮಿಗೂ ಯಾವ ಸಂಬಂಧವೂ ಇಲ್ಲವೇ? ಅಥವಾ *ನ್ಯೂಯಾರ್ಕ್ ಟೈಮ್ಸ್*‌ನ ಉದಾರವಾದಿ ಅಂಕಣಕಾರ ನಿಕೊಲಸ್ ಕ್ರಿಸ್ಟೋಫ್ ಕೇಳಿದಂತೆ "ಹಿಂಸೆ, ಉಗ್ರವಾದ, ಮಹಿಳಾ ಶೋಷಣೆಗೆ ಕಾರಣವಾಗುವ ಅಂಶಗಳು ಇಸ್ಲಾಮಿನಲ್ಲೇ ಇವೆಯೇ?"


ಹಾಗಾದರೆ ಇಸ್ಲಾವ್ ಅಂದರೆ ಏನು? ವಿಶ್ವಾದ್ಯಂತ ಶಾಂತಿಯ ಮಾರ್ಗದಲ್ಲಿ ನಡೆಯುವ ಉಮ್ಮಾ ಯಾವ ಇಸ್ಲಾಮಿನ ತತ್ವಗಳಿಂದ ಸ್ಫೂರ್ತಿ ಪಡೆದಿದೆಯೋ ಅದೇ ಮೂಲದಿಂದ ರಕ್ತಪಿಪಾಸುವಾದ ಅಬೂಬಕರ್ ಅಲ್ ಬಗ್ದಾದಿ ಎಂಬ *ಐಎಸ್‌ಐಎಸ್*‌ನ ಸ್ವಘೋಷಿತ ಖಲೀಫನೂ ಸ್ಫೂರ್ತಿ ಪಡೆದಿರುವಾಗ ಆತನನ್ನು ಮುಸ್ಲಿಂ ಅಲ್ಲ ಎಂದು ಹೇಳುವುದು ಹೇಗೆ? ಒಳ್ಳೆಯ ಹಾಗೂ ಕೆಟ್ಟ ಇಸ್ಲಾಮಿಕ್ ಮೂಲಭೂತವಾದಿಗಳಿಬ್ಬರೂ ಕುರಾನ್–ಹದೀಸ್‌ಗಳಿಂದಲೇ ಪ್ರೇರಣೆ ಪಡೆದಿದ್ದಾರೆ ಎಂದರೆ, ಸಮಸ್ಯೆಯಿರುವುದು ಅವುಗಳ ವ್ಯಾಖ್ಯಾನದಲ್ಲಿ ಹಾಗೂ ಇಂಥ ಸಂದಿಗ್ಧತೆಗಳೆಡೆ ಎಡೆ ಮಾಡಿಕೊಡುವ ಪವಿತ್ರ ಗ್ರಂಥಗಳಲ್ಲಿ.

ಕ್ರಿಸ್ಟೋಫ್‌ರ ಮಾತುಗಳನ್ನೇ ಉಲ್ಲೇಖಿಸುವುದಾದರೆ, "ಕೆಲವರು ಕುರಾನನ್ನು ಓದಿ ಹೆಣ್ಣುಮಕ್ಕಳ ಶಾಲೆಗಳನ್ನು ನಾಶಮಾಡಿದರೆ, ಇನ್ನು ಕೆಲವರು ಅದನ್ನು ಓದಿ ಹೆಣ್ಣುಮಕ್ಕಳ ಶಾಲೆಗಳನ್ನು ಕಟ್ಟಿಸಿದ್ದಾರೆ. ತಾಲಿಬಾನ್‌ಗಳು ಇಸ್ಲಾಮಿನ ಒಂದು ಮುಖವನ್ನು ಪ್ರತಿನಿಧಿಸಿದರೆ, ಅದಕ್ಕೆ ಸಂಪೂರ್ಣ ವಿರುದ್ಧವಾದುದನ್ನು ಮಲಾಲಾ ಮಾಡಿತೋರಿಸುತ್ತಾಳೆ."

ಕುರಾನ್‌ನಲ್ಲಿರುವ ಹಲವು ಭಾಗಗಳು ಕೆಲವೊಮ್ಮೆ ಒಂದೇ ವಿಷಯದ ಬಗ್ಗೆ ಪರಸ್ಪರ ವಿರೋಧಾಭಾಸದ ಹಾಗೂ ಅಸ್ಪಷ್ಟವಾಗಿರುವುದರಿಂದ ಸಾಮಾನ್ಯ ಮನುಷ್ಯನಿಗೆ ಇದರಿಂದ ಗೊಂದಲ ಸೃಷ್ಟಿಯಾಗುತ್ತದೆ. ಇದರಿಂದ ಕೆಲವರು ತಮಗೆ ಅನುಕೂಲವಾದ ರೀತಿಯಲ್ಲಿ ಅದನ್ನು ವ್ಯಾಖ್ಯಾನಿಸುವ ಸಾಧ್ಯತೆ ಇದೆ. ಜೆಹಾದ್ ಅನ್ನು ಕುರಿತು ಏಕಕಾಲಕ್ಕೆ ಧರ್ಮಭ್ರಷ್ಟರು–ನೀಚರ ವಿರುದ್ಧ ಸಾರಬೇಕಾದ 'ಸಶಸ್ತ್ರ ಹೋರಾಟ ಎಂದು ಒಂದು ಕಡೆ ಹೇಳಿದರೆ, ಇನ್ನೊಂದು ಕಡೆ ಅದನ್ನು ತನ್ನನ್ನು ತಾನು ನಿಗ್ರಹಿಸಿಕೊಳ್ಳಲು ನಡೆಯುವ ಶಾಂತಿಯುತ ಆಧ್ಯಾತ್ಮಿಕ ಸಂಘರ್ಷ ಎಂದೂ ಸಹ ಬಣ್ಣಿಸಲಾಗಿದೆ.

ಅಂದರೆ, ಇಸ್ಲಾವ್ ಹೇಳಿದ ವಿಚಾರಗಳನ್ನೇ ಜೆಹಾದಿಗಳು ಕಾರ್ಯಗತಗೊಳಿಸುತ್ತಿರುವುದಾಗಿ ಹೇಳಿಕೊಳ್ಳುವುದರಿಂದ ಅವರು ಮಾಡುತ್ತಿರುವುದು ಅಕ್ಷರಶಃ ತಪ್ಪಲ್ಲ ಮತ್ತು ಹಾಗೆಯೇ ಅದೊಂದು ಆಂತರಿಕ ಆಧ್ಯಾತ್ಮಿಕ ಸಂಘರ್ಷವೆನ್ನುವವರ ವ್ಯಾಖ್ಯಾನವೂ ಸರಿಯೇ. ಇಬ್ಬರೂ ಸಹ ತಮಗೆ ಬೇಕಾದ ಹಾಗೆ ಕುರಾನನ್ನು ವ್ಯಾಖ್ಯಾನಿಸಿಕೊಂಡು ಅದರ ಮೂಲ ಆಶಯವನ್ನು ಮರೆಮಾಚುತ್ತಾರೆ. ಹಾಗಾಗಿ ಇಸ್ಲಾಮ್ ಎಲ್ಲ ನಂಬಿಕೆಗಳು–ಧರ್ಮಗಳಿಗೆ ಸಮಾನ ಗೌರವ ನೀಡುತ್ತದೆ ಎಂಬ ಮಾತನ್ನು ಒಪ್ಪುವುದು ಕಷ್ಟ. ಉದಾಹರಣೆಗೆ ಅಲ್ ಬಖ್ರಾದ ಅಧ್ಯಾಯದಲ್ಲಿ ದೈವ ವಿಶ್ವಾಸಿಗಳು ವಿಶ್ವಾಸಿಗಳಲ್ಲದವರ ನಡುವಿನ ವ್ಯತ್ಯಾಸವನ್ನು ಸ್ಪಷ್ಟಗೊಳಿಸಿದರೆ, ನಂತರ ಅವರಿಗೆ ಅಂತಿಮ ತೀರ್ಮಾನದ ದಿನ ದೊಡ್ಡ ಶಿಕ್ಷೆಯೊಂದು ಕಾದಿದೆ ಎಂಬೆಚ್ಚರಿಕೆಯೂ ಇದೆ. ಮಂದೆ, ದೇವರಿಗೆ ಮಾತ್ರ ಯಾರು ಶಿಕ್ಷಾರ್ಹರು ಎಂದು ನಿರ್ಧರಿಸುವ ಅಧಿಕಾರವಿದೆಯೇ ಹೊರತು ಹುಲುಮಾನವರಿಗೆ ಅಲ್ಲ ಎಂಬ ಮಾತುಗಳು ಇವೆ. ಹಾಗಾಗಿ ಉಗ್ರರು ಹಾಗೂ ಶಾಂತಿಪ್ರಿಯರು ಇಬ್ಬರೂ ಸಹ ತಮಗೆ ಬೇಕಾದ ಹಾಗೆ ಇಂಥ ಉಲ್ಲೇಖಗಳನ್ನು ಬಳಸಿಕೊಳ್ಳುವ ಸಾಧ್ಯತೆಯಿದೆ.

ಅದರಂತೆ, ಹೆಣ್ಣಿನ ಸ್ಥಾನಮಾನದ ಕುರಿತು, *ಅಲ್ ನಿಸಾದ* ಆಧ್ಯಾಯದಲ್ಲಿ ಅವರಿಗೆ ಸಮಾನ ಗೌರವವನ್ನು ನೀಡಬೇಕೆನ್ನುವ ಉಲ್ಲೇಖಗಳು ಇದ್ದರೂ ಅದಕ್ಕೆ ಹೊಂದಿಕೊಂಡಂತೆಯೇ ಹೆಣ್ಣು ಗಂಡಿಗೆ ಸರಿಸಮಾನಳಲ್ಲ ಎಂಬ ಅಭಿಪ್ರಾಯಗಳೂ ಸಹ ದೊರೆಯುತ್ತವೆ. ಗಂಡಿಗೆ ಹೋಲಿಸಿದರೆ, ಅವಳಿಗೆ ದೊರೆಯುವ ಆಸ್ತಿಯ ಪಾಲು ಕಡಿಮೆ ಮತ್ತು ಅವಳ ಹೇಳುವ ಸಾಕ್ಷ್ಯಕ್ಕೆ ಅಷ್ಟು ಬೆಲೆ ನೀಡಬಾರದು ಹಾಗೆಯೇ ವ್ಯಭಿಚಾರದ ಸಂದರ್ಭದಲ್ಲಿ ಆಕೆಗೆ ಗಂಡಿಗಿಂತ ಹೆಚ್ಚಿನ ಶಿಕ್ಷೆ ದೊರೆಯಬೇಕು ಎಂಬ ಮಾತುಗಳು ದೊರೆಯುತ್ತವೆ.




ನಿಜವಾಗಿ, ಕುರಾನಿನ ಸೂಕ್ತಿಗಳನ್ನು ಯಾವುದೇ ಸಂದರ್ಭಕ್ಕೆ ಅನ್ವಯವಾಗುವ ಹಾಗೆ ವಿವಿಧ ಅಧ್ಯಾಯಗಳಲ್ಲಿ ಜೋಡಿಸಿರುವ ಕ್ರಮದಲ್ಲಿಯೇ ಸಮಸ್ಯೆಯಿದೆ. ಹಾಗಾಗಿ ಅವುಗಳನ್ನು ಬಿಡಿಬಿಡಿಯಾಗಿ ಓದಿದಾಗ ಅವು ಪರಸ್ಪರ ವಿರೋಧಾಭಾಸದ ವ್ಯಾಖ್ಯಾನಗಳಿಗೆ ಕಾರಣವಾಗುತ್ತವೆ.

ಭಾರತದ ಬಹಳ ಮುಖ್ಯ ಇಸ್ಲಾಮಿಕ್ ಚಿಂತಕರಾದ ಮೌಲಾನಾ ವಹೀದುದ್ದೀನ್ ಖಾನ್ ಅವರು ಕುರಾನಿನ ಇಂಗ್ಲಿಶ್ ಅನುವಾದಕ್ಕೆ ಬರೆದ ಮುನ್ನುಡಿಯ ಪ್ರಕಾರ "ಮುಖ್ಯವಾದ ಸಂಗತಿಯೇನೆಂದರೆ, ಈಗ ದೊರಕುವ ಕುರಾನ್ ಪೂರ್ಣಪ್ರಮಾಣದಲ್ಲಿ ಒಮ್ಮೆಗೇ ಅವತೀರ್ಣಗೊಳ್ಳಲಿಲ್ಲ. ಅದು ಕಾಲಕಾಲಕ್ಕೆ ವಿವಿಧ ಸಂದರ್ಭಗಳಲ್ಲಿ ಸುಮಾರು ೨೩ವರ್ಷಗಳ ಅವಧಿಯಲ್ಲಿ ಅವತೀರ್ಣಗೊಂಡಿತು". ಅವರ ಪ್ರಕಾರ "ಕುರಾನ್ ಇತರ ಧಾರ್ಮಿಕ ಪಠ್ಯಗಳಂತೆ ಒಂದು ನಿರ್ದಿಷ್ಟ ಸ್ವರೂಪವನ್ನು ಹೊಂದಿರದೆ, ಅದು ಬಿಡಿಬಿಡಿಯಾದ ಹೇಳಿಕೆಗಳನ್ನೊಳಗೊಂಡ ಸಂಗ್ರಹವಾಗಿದೆ. ಓದುಗರು ಈ ಗ್ರಂಥದ ಬಿಡಿ ಪುಟಗಳು, ಸೂಕ್ತಿಗಳನ್ನು ಓದಿಕೊಳ್ಳಲು ಅನುಕೂಲವಾಗುವಂತೆ ಅದರ ಸ್ವರೂಪವನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ".

ಪ್ರವಾದಿಯವರ ಉಪದೇಶಗಳು–ಸಂದೇಶಗಳನ್ನೊಳಗೊಂಡ ಹದೀಸ್‌ನ ಸಮಸ್ಯೆಯೂ ಇದೇ ಆಗಿದೆ. ಈ ಸಂದೇಶಗಳು ಹಲವು ರೂಪಗಳಲ್ಲಿ, ಅವುಗಳು ಹಲವು ಸಂದರ್ಭಗಳಿಗೆ ಸಂಬಂಧಿಸಿದ್ದು ಅವುಗಳನ್ನು ಪ್ರವಾದಿಯವರ ಸಾವಿನ ಹಲವು ವರ್ಷಗಳ ನಂತರ ಸಂಗ್ರಹಿಸಲಾಯಿತು. ಅವುಗಳ ಮೂಲ ಅರ್ಥ ಅನುವಾದ ಮಾಡುವಾಗ ಕಳೆದುಹೋಗಿದೆ. ಆದರೂ ಮೂಲಸಂದರ್ಭವನ್ನು ಕಡೆಗಣಿಸಿ ಅವುಗಳನ್ನು ಬಹಳ ಸಡಿಲವಾಗಿ ಉಲ್ಲೇಖಿಸಲಾಗುತ್ತದೆ. ನಿಜವಾಗಿ ಪ್ರವಾದಿಯವರಿಗೆ ಸಂಬಂಧಿಸದೇ ಇರುವ ಹಲವು ಹದೀಸ್‌ಗಳೂ ಸಹ ಬಳಕೆಯಲ್ಲಿವೆ.

ಮುಖ್ಯವಾದ ಸಂಗತಿಯೇನೆಂದರೆ, ಉಗ್ರರು ತಾವು ಮಾಡುತ್ತಿರುವ ಕೆಲಸಗಳಿಗೆ ಸಮರ್ಥನೆಯಾಗಿ ಇಸ್ಲಾಮ್‌ನ ಹೊಸದೊಂದು ಅವೃತ್ತಿಯನ್ನು ಹುಡುಕಬೇಕಾಗಿ ಬರಲಿಲ್ಲ ಎನ್ನುವುದು. ಅಂಥ ಅಂಶಗಳನ್ನು ಅವರು ಈಗಾಗಲೇ ಇಸ್ಲಾಮಿನಲ್ಲಿ ಹುಡುಕಿಕೊಂಡಿದ್ದರು. ಹಾಗೆ ಅಲ್ಲಿ ಇಲ್ಲಿ ಚದುರಿದಂತಿದ್ದ ಅಂಶಗಳನ್ನು ಅವರು ತಮ್ಮ ಅಜೆಂಡಾಗೆ ಸರಿಯಾಗಿ ಹೊಂದಿಸಿಕೊಂಡು ಅದನ್ನೇ ನೈಜ ಇಸ್ಲಾಮ್ ಎಂದು ಪ್ರತಿಪಾದಿಸಿದರು.


ಮುಸ್ಲಿಮರಿಗೆ ಈ ಸಮಸ್ಯೆಯ ಅರಿವಿದೆಯಾದರೂ, ಅದರ ಜೊತೆಗೇ ಅವರು ಕುರಾನ್ ಯಾವ ಬದಲಾವಣೆಗೂ ಒಳಪಡಿಸಬಾರದ, ಯಾವ ಹಸ್ತಕ್ಷೇಪಕ್ಕೂ ಒಳಗಾಗಕೂಡದ ಗ್ರಂಥ ಎಂದು ಹೇಳಲು ಹಿಂಜರಿಯುವುದಿಲ್ಲ. ಕುರಾನ್ ಸಹ ಇದನ್ನು ಬಹಳ ಸ್ಪಷ್ಟವಾಗಿ ಹೇಳುತ್ತದೆ "ಯಾರಿಗಾಗಿ ಈ ಪುಸ್ತಕವನ್ನು ನೀಡಲಾಗಿದೆಯೋ ಅವರು ಅದನ್ನು ಪಾಲಿಸಬೇಕು. ಅದರಲ್ಲಿ ನಂಬಿಕೆಯಿಡುವವರು ಗೆಲ್ಲುವರು, ನಂಬಿಕೆಯಿಲ್ಲದವರು ಸೋಲುವರು".

ಹೀಗಿರುವಾಗ ಕುರಾನಿನ ಸೂಕ್ತಿಗಳನ್ನು ಸಂದರ್ಭಾನ್ವಯಗೊಳಿಸಿ ಮರುಜೋಡಿಸುವ ಯಾವುದೇ ಪ್ರಯತ್ನವನ್ನು ಧರ್ಮಪಾತಕ ಪ್ರಯತ್ನವೆಂದು ತಿರಸ್ಕರಿಸಲಾಗುತ್ತದೆ. ಹೊಸ ಒಡಂಬಡಿಕೆಯ ಹಾಗೆ ಇಸ್ಲಾಮಿನಲ್ಲೂ ಮರುನಿರೂಪಣೆಯ ಅಗತ್ಯವಿದೆ ಎಂಬ ಮಾತನ್ನು ನಾನು ಲೇಖನವೊಂದರಲ್ಲಿ ಬರೆದಾಗ, ಕೆಲವರು ಇದೇ ಮಾತನ್ನು ಇಸ್ಲಾಮಿಕ್ ದೇಶವೊಂದರಲ್ಲಿ ಹೇಳಿದ್ದರೆ ಧರ್ಮದ್ರೋಹದ ಆಪಾದನೆಯನ್ನು ಎದುರಿಸಬೇಕಾಗಿತ್ತು ಎಂದು ನನಗೆ ಎಚ್ಚರ ನೀಡಿದರು. ಈ ರೀತಿಯ ಸಂಪ್ರದಾಯಸ್ಥ, ಹಿಂಸಾತ್ಮಕವಾದ ಪ್ರತಿಕ್ರಿಯೆಗಳು ಇಸ್ಲಾಮಿಗೆ ಹೊಸದೇನಲ್ಲ. ಕ್ರಿಶ್ಚಿಯಾನಿಟಿಯಲ್ಲಿಯೂ ಒಮ್ಮೆ ಇಂಥ ಬೆಳವಣಿಗೆ ಉಂಟಾಗಿತ್ತು. ಮಧ್ಯಯುಗದಲ್ಲಿ *ಪೇಗನ್* ಸಂಪ್ರದಾಯಕ್ಕೆ ಸೇರಿದ ಯೂರೋಪನ್ನು ಕ್ರಿಶ್ಚಿಯನೀಕರಣಗೊಳಿಸುವಾಗ ಅದಕ್ಕೆ ಹಿಂಸಾತ್ಮಕವಾದ ಪ್ರತಿಕ್ರಿಯೆಗಳು, *ಕ್ರುಸೇಡ್*‌ಗಳು ನಡೆದವು. ಕ್ರಿಶ್ಚಿಯಾನಿಟಿ ಇದನ್ನು ನಿಯಂತ್ರಿಸಿತಾದರೆ, ಇಸ್ಲಾಂ

**(೧೬ನೇ ಪುಟಕ್ಕೆ**

# ಕೇಂದ್ರ ಬಜೆಟ್: ಖಾಸಗಿ ಕಂಪನಿಗಳ ಸೌಲಭ್ಯಗಳಿಗಾಗಿ ಸಾರ್ವಜನಿಕರ ಹಣ!

–ಜೀನ್ ಡ್ರೇಜ್



**ಎ**ರಡನೇ ಮಹಾಯುದ್ಧದ ಅಂತ್ಯದ ವೇಳೆಗೆ ಅಭಿವೃದ್ಧಿ ಎಂದರೆ ಬಂಡವಾಳ ಹೂಡಿಕೆ, ಅಣೆಕಟ್ಟೆ, ರಸ್ತೆ, ರೈಲ್ವೆ ಇತ್ಯಾದಿಗಳ ನಿರ್ಮಾಣ ಎಂಬ ಭಾವನೆಯಿತ್ತು. ಆ ಕಾಲಕ್ಕೆ ಖಾಸಗಿ ವಲಯದ ಶಕ್ತಿ ಸೀಮಿತವಾಗಿದ್ದು ಸಾರ್ವಜನಿಕ ವಲಯವೇ ಪ್ರಮುಖ ಆರ್ಥಿಕ ಪಾತ್ರಧಾರಿಯಾಗಿತ್ತು. ಭಾರತದ ಪ್ರಾರಂಭಿಕ ಪಂಚವಾರ್ಷಿಕ ಯೋಜನೆಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿ ಎಂಬುದು ಸಾರ್ವಜನಿಕ ವಲಯದ ಹೂಡಿಕೆಯೂ ಆಗಿರುತ್ತಿತ್ತು. ಇಂದು ಯಾವುದನ್ನು ಮಾನವ ಬಂಡವಾಳ ಎನ್ನುತ್ತೇವೆಯೋ ಅದು ಆಗ ಸಂಪೂರ್ಣ ನಿರ್ಲಕ್ಷಿಸಲ್ಪಟ್ಟಿತ್ತು.


ಈ ರೀತಿಯ ಆರ್ಥಿಕ ಮಾದರಿ ಅಂದಿನ ಸಾಮಾನ್ಯ ಸಿದ್ಧಾಂತವಾಗಿತ್ತು. ಬಹಳ ಉತ್ಸಾಹದಿಂದ ಈ ಧೋರಣೆಯನ್ನು ಬೆಂಬಲಿಸಿದ ಎಷ್ಟೋ ಅರ್ಥಶಾಸ್ತ್ರಜ್ಞರು ನಂತರದ ದಿನಗಳಲ್ಲಿ ಬದಲಾಗಿ ತಾವೇ ಇದನ್ನು ಟೀಕಿಸತೊಡಗಿದರು.

**ಬಂಡವಾಳ ಬೆಳವಣಿಗೆ ಮತ್ತು ಅಭಿವೃದ್ಧಿ :**

ಮಿಲ್ಟನ್ ಫ್ರೀಡ್‌ಮನ್ ಎಂಬ ನೋಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ ೧೯೫೫ರಲ್ಲಿ ಭಾರತಕ್ಕೆ ಆಗಮಿಸಿದ್ದು ಅವರು ಮಾನವ ಬಂಡವಾಳವನ್ನು ನಿರ್ಲಕ್ಷಿಸಿ ಭೌತಿಕ ಹೂಡಿಕೆಗೆ ಒತ್ತು ನೀಡುವ ನೀತಿಯನ್ನು ಟೀಕಿಸಿದ್ದರು. ಫ್ರೀಡ್‌ಮನ್‌ರ ಸಮರ್ಥಕರಾಗಿದ್ದಂತಹ ಬಿ.ವಿ. ಕೃಷ್ಣಮೂರ್ತಿಯವರಂತಹ ಕೆಲವು ಅರ್ಥಶಾಸ್ತ್ರಜ್ಞರು ಕಿರಾಣಿ ಅಂಗಡಿಗೆ ಸಲ್ಲಬಹುದಾದ ಲೆಕ್ಕಾಚಾರವನ್ನು ಭಾರತದಲ್ಲಿ ಶಿಕ್ಷಣ ನೀತಿಗೆ ಅನ್ವಯಿಸಲಾಗುತ್ತಿದೆ ಎಂಬುದಾಗಿ ಜರಿದಿದ್ದರು. ಸಾರ್ವತ್ರಿಕ ಶಿಕ್ಷಣವು ದಮನಿತರ ಬಿಡುಗಡೆಯ ಸಾಧನವಾಗಬೇಕೆಂದು ಬಯಸುತ್ತಿದ್ದ ಡಾ॥ ಅಂಬೇಡ್ಕರ್ ಸಹ ಅಂದಿನ ಶಿಕ್ಷಣ ನೀತಿಯ ವಿರೋಧಿಯಾಗಿದ್ದರು. ಅಂದು ಈ ಬಗೆಯ ಅರ್ಥಪೂರ್ಣ ಟೀಕೆಯನ್ನು ನಿರ್ಲಕ್ಷಿಸಿದ್ದರ ಪರಿಣಾಮವಾಗಿ ಭಾರತ ಇಂದೂ ಕೂಡ ಅಪಾರವಾದ ಬೆಲೆ ತೆರುತ್ತಿದೆ.

ಅಭಿವೃದ್ಧಿ ಅರ್ಥಶಾಸ್ತ್ರದ ಮುಂದಿನ ದಿನಗಳ ಬೆಳವಣಿಗೆಗಳು ಈ ಚಿಂತಕರ ವಿಚಾರವನ್ನು ಸಮರ್ಥಿಸುವಂತಿದ್ದವು. ಭೌತಿಕ ಬಂಡವಾಳದ ಹಾಗೆ ಮಾನವ ಬಂಡವಾಳ ಮತ್ತು ಇತರೆ ಎಷ್ಟೋ ಸಂಗತಿಗಳು ಸಹ ಅಭಿವೃದ್ಧಿಗೆ ಅನಿವಾರ್ಯವೆಂಬುದನ್ನು ಮನಗಾಣಲಾಯಿತು. ಹಾಗೆಯೇ ಜೀವನದ ಗುಣಮಟ್ಟ ಮತ್ತು ಮಾನವ ಸ್ವಾತಂತ್ರ್ಯದ ವಿಸ್ತರಣೆಗಳ ವಿಶಾಲಾರ್ಥದಲ್ಲಿ ಬೆಳವಣಿಗೆ ಮತ್ತು ಅಭಿವೃದ್ಧಿಗಳ ಅರ್ಥ ಒಂದೇ ಅಲ್ಲ; ಬೆಳವಣಿಗೆಯು ಅಭಿವೃದ್ಧಿಗೆ ಪೂರಕವಾಗಬಹುದು. ಬೆಳವಣಿಗೆಯು ಎಷ್ಟರ ಮಟ್ಟಿಗೆ ಅಭಿವೃದ್ಧಿಗೆ ಪೂರಕವೆಂಬುದು ಬೆಳವಣಿಗೆಯ ಪ್ರಕ್ರಿಯೆಯ ಮತ್ತು ಸಾರ್ವಜನಿಕ ಚಟುವಟಿಕೆಗಳ ವಿವಿಧ ರೂಪಗಳನ್ನಾಧರಿಸಿರುತ್ತದೆ. ಉದಾ : ಉತ್ತಮ ಜೀವನಕ್ಕೆ ಮುಖ್ಯವಾಗುವ ಪೌಷ್ಠಿಕತೆಯೆಂಬುದು, ಪೌಷ್ಟಿಕ ಶಿಕ್ಷಣ, ಶುದ್ಧ ನೀರು, ಆರೋಗ್ಯ ಸೇವೆಯಂತಹ ಕ್ಷೇತ್ರಗಳಲ್ಲಿನ ಸಾರ್ವಜನಿಕ ಚಟುವಟಿಕೆಗಳ ರೀತಿ ನೀತಿಗಳನ್ನು ಅವಲಂಬಿಸಿರುತ್ತದೆ.

**ಮೂಲ ಸೌಕರ್ಯದ ಮೇಲೆ ಒತ್ತು :**



ಮೊನ್ನೆಯ ಮೋದಿ ಸರ್ಕಾರದ ಆಯವ್ಯಯವು ಈ ಒಳನೋಟಗಳನ್ನು ನಿರ್ಲಕ್ಷಿಸಿ, ಬೆಳವಣಿಗೆ ಮತ್ತು ಅಭಿವೃದ್ಧಿ ಒಂದೇ, ಭೌತಿಕ ಬಂಡವಾಳವೇ ಮುಖ್ಯ ಎಂಬ ನಂಬಿಕೆಯೊಂದಿಗೆ ಮಾನವ ಬಂಡವಾಳದ ಪ್ರಾಮುಖ್ಯತೆಯನ್ನು ನಿರ್ಲಕ್ಷಿಸಿದ ನೆಹರೂ ಯುಗಕ್ಕೆ ಹಿನ್ನಡೆದಿದೆ. ಆರ್ಥಿಕ ನೀತಿಯ ಗುರಿ ಬೆಳವಣಿಗೆ, ಬೆಳವಣಿಗೆ ಇದ್ದರೆ ಮಿಕ್ಕೆಲ್ಲವೂ ತಂತಾನೆ ಆಗುವುದು. ಬೆಳವಣಿಗೆಯ ಮುಖ್ಯ ಸಾಧನ ಮೂಲ ಸೌಕರ್ಯ ಅಥವಾ ಕಾರ್ಪೋರೇಟ್ ವಲಯ ಬಯಸುವ ಮೂಲ ಸೌಕರ್ಯ ಈ ಮೂಲ ಸೌಕರ್ಯ ವೃದ್ಧಿಗೆ ಸರ್ಕಾರವೇ ಬಂಡವಾಳ ಹೂಡಬೇಕು. ಹಾಗಾಗಿ ರೈಲ್ವೆ ಮತ್ತು ರಸ್ತೆಗೆ ಭಾರೀ ಬಂಡವಾಳ ಹರಿಯುತ್ತದೆ. ರಕ್ಷಣಾ ವಲಯವನ್ನು ಹೊರತುಪಡಿಸಿ ಮಿಕ್ಕೆಲ್ಲ ವಲಯದ ಖರ್ಚಿಗೆ ಕತ್ತರಿ ಬೀಳುತ್ತದೆ. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಹಿಂದೆಂದೂ ಕಂಡಿರದಂತಹ ಆಘಾತ ನೀಡಲಾಗಿದೆ.

ಈ ಮೂಲ ಸೌಕರ್ಯದ ಬಗೆಗಿನ ಒಲವು NDA ಪ್ರಣೀತವಲ್ಲ. ಹಿಂದಿನ UPA ಸರ್ಕಾರದ ಆರ್ಥಿಕ ಯೋಜನಾ ಆಧಾರ ಸ್ಥಂಭ ಮಾಂಟೆಕ್ ಸಿಂಗ್ ಅಹ್ಲುವಾಲಿಯಾರ ಪ್ರಕಾರ ೧೨ನೇಯ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಒಂದು ಟ್ರಿಲಿಯನ್ ಡಾಲರ್‌ಗಳನ್ನು ಈ ಮೂಲ ಸೌಕರ್ಯಕ್ಕಾಗಿ ಸುರಿಯಬೇಕಾಗಿತ್ತು. ಆದರೆ ಅಹ್ಲುವಾಲಿಯಾ ಪ್ರಕಾರ ಈ ಹೂಡಿಕೆ PPP ವಿಧಾನದಲ್ಲಿ (ಸಾರ್ವಜನಿಕ, ಖಾಸಗಿ ಭಾಗವಹಿಸುವಿಕೆ) ಆಗಬೇಕಿತ್ತು. ಆದರೆ ಪ್ರಸ್ತುತ NDA ಅರ್ಥನೀತಿಯ ಪ್ರಕಾರ ಸರ್ಕಾರವೇ ಈ ಹಣದ ಹೂಡಿಕೆ ಮಾಡಬೇಕು.

**ಕಾರ್ಪೋರೇಟ್ ಹಿತಾಸಕ್ತಿ :**

ಮೂಲ ಸೌಕರ್ಯ ವಲಯಕ್ಕೆ ಹಣಕಾಸು ಒದಗಿಸಲು ಬ್ಯಾಂಕಿಂಗ್ ವಲಯಕ್ಕೆ ಆಸಕ್ತಿಯೂ ಇಲ್ಲ ಅದು ಸಾಧ್ಯವೂ ಅಲ್ಲ. ಈಗಾಗಲೇ ೧೮ ಲಕ್ಷ ಕೋಟಿಯಷ್ಟು ಹಣ ಅರ್ಧಕ್ಕೆ ನಿಂತ ಅಥವಾ ಸೋತ PPP ವಿಧಾನದ ಮೂಲ ಸೌಕರ್ಯ ಯೋಜನೆಗಳಲ್ಲಿ ಪೋಲಾಗಿ ಹೋಗಿದೆ. ೨೦೧೪–೧೫ರ ಮಧ್ಯಂತರ ಆರ್ಥಿಕ ವಿಶ್ಲೇಷಣೆಯ ಪ್ರಕಾರ ಬೆಳವಣಿಗೆಯ ಮುಖ್ಯ ಸಾಧನೆಗಳಿಗಾಗಿ ಸಾರ್ವಜನಿಕ ಹೂಡಿಕೆ ಮಾಡಬೇಕಾದುದು ಕಡ್ಡಾಯ. ಸಾರ್ವಜನಿಕ ವಲಯದ ಬ್ಯಾಂಕುಗಳ ಮೇಲೆ ಸವಾರಿ ಮಾಡಿ ಲಾಭದಾಯಕವಲ್ಲದ ಖಾತೆಗಳಿಂದಾದ (NPA) ನಷ್ಟದ ಹೊರೆಯನ್ನು ತೆರಿಗೆದಾರರ ಮೇಲೆ ಹೊರಿಸಿ ಕಾರ್ಪೋರೇಟ್ ವಲಯವು ಮತ್ತೊಮ್ಮೆ ತೆರಿಗೆದಾರರ ಹಣದಿಂದ ತಮಗೆ ಜಾಗತಿಕ ಮಟ್ಟದ ರಸ್ತೆ, ಇತರೆ ಸೌಕರ್ಯಗಳನ್ನು ನಿರ್ಮಿಸಿಕೊಡಬೇಕೆಂದು ನಿರೀಕ್ಷಿಸುತ್ತದೆ.



RBIನ ಗೌರ್ನರ್ ರಘುರಾಮ್ ರಾಜನ್ ಕಾರ್ಪೋರೇಟ್ ವಲಯದ ಧೋರಣೆಯನ್ನು ಖಂಡಿಸಿದ್ದಾರೆ. ಈವರೆಗೆ ಯಾವ ತೊಂದರೆಯನ್ನೂ ತೆಗೆದುಕೊಳ್ಳದೆ ವ್ಯವಹಾರ ನಡೆಸುತ್ತಾ ಬಂದಿರುವ ಈ ವಲಯವು ತನ್ನ ಮನಸ್ಥಿತಿಯನ್ನು ಬದಲಾಯಿಸಿಕೊಳ್ಳಬೇಕು. ಬ್ಯಾಂಕ್ ಸಾಲ ಹಿಂದಿರುಗಿಸದೆ ಇಚ್ಛಾಪೂರ್ವಕವಾಗಿ ಅಸಹಕಾರ ತೋರುವ ಸುಸ್ತಿದಾರರನ್ನು ಹೀರೋಗಳಂತೆ ಕಾಣದೆ ಜನಸಾಮಾನ್ಯರನ್ನು ಹೀರುವ ಪರೋಪಜೀವಿಗಳೆಂದು ಪರಿಗಣಿಸಿ ಅವರನ್ನು ದಂಡಿಸಬೇಕು ಎಂಬ ಕರೆ ನೀಡಿದ್ದಾರೆ. ಆದರೆ ಅರ್ಥಮಂತ್ರಿಗಳಿಗೆ ಈ ಬಗ್ಗೆ ಸಮ್ಮತಿಯಿಲ್ಲ. ಕಾರ್ಪೋರೇಟ್ ವಲಯದ ಬಗ್ಗೆ ಸಹಾನುಭೂತಿಯನ್ನು ಹೊಂದಿರುವ ಅವರು ಸಾರ್ವಜನಿಕ ಹಣದಿಂದ ಜಾಗತಿಕ ಗುಣಮಟ್ಟದ ಮೂಲ ಸೌಕರ್ಯವನ್ನು ನಿರ್ಮಿಸಬೇಕೆಂಬ ಬೇಡಿಕೆಗೆ ಮಣಿದಿದ್ದಾರೆ. ಸರ್ಕಾರವೇ ಹೆಚ್ಚಿನ ಹೊರೆಯನ್ನು ಹೊರಲು ಸಿದ್ಧವಿರುವ ಹೊಸ PPP ಮಾದರಿಯನ್ನು ಪುನಃ ಅನುಷ್ಠಾನಗೊಳಿಸಬೇಕೆಂದು ಅವರು ಕರೆ ನೀಡಿದ್ದಾರೆ.

(೧೫ನೇ ಪುಟಕ್ಕೆ

**ಯುವ ಸಮಾಜವಾದಿ ಚಿಂತನ ವೇದಿಕೆ**

# ಸಮಾಜವಾದದ ಗುರಿ: ಜಾತಿ ವಿನಾಶವೋ, ಜಾತಿ ಸಮಾನತೆಯೋ?: ಸ್ಪಷ್ಟತೆ ಬೇಕಿದೆ

**-ಬಿ. ರಾಜೇಶ್**

**ಹಿ**ರಿಯ ಸಮಾಜವಾದಿಗಳ ಸಂಪರ್ಕ ಸಿಕ್ಕಿದಾಗಿನಿಂದ ನಿರಂತರವಾಗಿ ಅವರ ಮಾತುಗಳನ್ನು ಕೇಳುತ್ತಾ ಬೆಳೆದ ನನಗೆ 'ಜಾತಿ' ಸೃಷ್ಟಿಸಿದ ಸಾಮಾಜಿಕ ಅನಿಷ್ಟಗಳ ಬಗ್ಗೆ ನಿಜವಾದ ಅರಿವು ಮೂಡತೊಡಗಿತ್ತು. ಆಗಾಗ ಸಮಾಜವಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದ ನನಗೆ ಅಲ್ಲಿ ನಡೆಯುವ ಚರ್ಚೆಗಳು ನನ್ನ ಮೇಲೆ ಪ್ರಭಾವ ಬೀರುತಿತ್ತು. ಬಹುಶಃ ನನ್ನ ಗೆಳತಿ ಸರಿತಾಳೊಂದಿಗೆ ನಡೆದ ನನ್ನ ಪ್ರೇಮವಿವಾಹದ ಹಿಂದೆಯೂ ಆ ಚಿಂತನೆಗಳು ಪರೋಕ್ಷವಾಗಿ ಕೆಲಸ ಮಾಡಿವೆ. ಹಿರಿಯ ಸಮಾಜವಾದಿಗಳಾದ ಡಿ.ಎಸ್.ನಾಗಭೂಷಣ ಅವರು ಅಂತರ್ಧರ್ಮೀಯ ಪ್ರೇಮ ವಿವಾಹವಾದದ್ದೊಂದೆ ಸಮಾಜವಾದಿಯಾಗಿ ನಾನು ಮಾಡಿದ ಏಕೈಕ ಕೆಲಸ ಎಂದು ಇಂದಿಗೂ ನನ್ನನ್ನು ಆಗಾಗ ಛೇಡಿಸುತ್ತಿರುತ್ತಾರೆ.

ಒಮ್ಮೆ ನಾನು ನನ್ನ ದೊಡ್ಡ ಮಗ ಸರಹನನ್ನು ಶಾಲೆಗೆ ಸೇರಿಸಲು ಹೋದಾಗ ನನಗೆ ಜಾತಿ ಮತ್ತೊಮ್ಮೆ ಸಮಸ್ಯೆಯನ್ನು ತಂದಿಟ್ಟಿತ್ತು. ಶಾಲೆಯ ಪ್ರಾಂಶುಪಾಲರು ಜಾತಿ ಹಾಗು ಧರ್ಮದ ಕಾಲಂ ಅನ್ನು ಕಡ್ಡಾಯವಾಗಿ ತುಂಬಬೇಕೆಂದು ಸೂಚಿಸಿದ್ದರು. ನಾನು ಆ ಕಾಲಂಗಳಲ್ಲಿ 'ಭಾರತೀಯ' ಎಂದು ಬರೆದಿದ್ದೆ. ನಂತರ ಅವರಿಗೆ, ನನಗೆ ಹಾಗು ನನ್ನ ಹೆಂಡತಿ ಸರಿತಳಿಗೆ ಜಾತಿಯ ಆಚರಣೆಯಲ್ಲಿ ನಂಬಿಕೆ ಇಲ್ಲದ ಕಾರಣ ಜಾತಿಯನ್ನು ಮತ್ತು ಧರ್ಮವನ್ನು ನಮೂದಿಸುವುದಿಲ್ಲ ಎಂದು ತಿಳಿಸಿದೆವು ಹಾಗೂ ನಮಗೆ ನಾವು ಹುಟ್ಟಿದ ಜಾತಿ ಧರ್ಮಗಳನ್ನು ನಮೂದಿಸದಿರುವ ಹಕ್ಕು ಇದೆ ಎಂದು ವಾದಿಸಿದೆವು. ಇಷ್ಟೆಲ್ಲ ವಾದ ಮಾಡಿದರೂ ಒಪ್ಪದ ಅವರು ಸರಕಾರದ ಮೀಸಲಾತಿಯನ್ನು ಬಳಸಿಕೊಳ್ಳಲು ಅನುಕೂಲ ಆಗುವುದೆಂಬ ಆಮಿಷ ಒಡ್ಡಿದರು. ಆಗ, ನಮ್ಮ ಮಕ್ಕಳಿಗೂ ಮೀಸಲಾತಿ ಬೇಡ ಎಂದು ತಿಳಿಸಿ, ಈಗಾಗಲೇ ನಮ್ಮ ಹಿರಿಯ ಸಮಾಜವಾದಿಗಳು ತುಂಬಾ ಜನ ತಮ್ಮ ಮಕ್ಕಳಿಗೆ ಜಾತಿ ಹಾಗೂ ಧರ್ಮದ ವಿವರ ನೀಡದೆ 'ಭಾರತೀಯ' ಎಂದು ನಮೂದಿಸಿರುವ ಕುರಿತು ಹೇಳಿದಾಗ ಒಲ್ಲದ ಮನಸ್ಸಿನಿಂದ ಆ ಎರಡು ಕಾಲಂಗಳಲ್ಲಿ 'ಭಾರತೀಯ' ಎಂದು ನಮೂದಿಸಲು ಒಪ್ಪಿಕೊಂಡರು.

ಮತ್ತೆ ನನಗೆ ಈ 'ಜಾತಿ' ಎಂಬ ಪದ ತುಂಬ ತೊಂದರೆಕೊಟ್ಟದ್ದು, ಇತ್ತೀಚೆಗೆ ಒಲವಿನ ವಿವಾಹ ವೇದಿಕೆ 'ಮಾನವ ಮಂಟಪ'ದ ಒಂದು ಸಭೆಯಲ್ಲಿ ಭಾಗವಹಿಸಿದಾಗ. ಬಿಸಿಬಿಸಿ ವಾಗ್ವಾದಕ್ಕೂ ಕಾರಣವಾದ ಸಭೆಯಲ್ಲಿ, ಸರಕಾರ ನಡೆಸಲು ಉದ್ದೇಶಿಸಿರುವ 'ಜಾತಿ ಸಮೀಕ್ಷೆ' ಸಂದರ್ಭದಲ್ಲಿ ಅಂತರ್ಜಾತಿ ವಿವಾಹಿತರ ಮುಂದಿನ ನಡೆ ಏನಾಗಿರಬೇಕು? ಯಾವ ಕಾಲಂಗಳಲ್ಲಿ ಏನು ನಮೂದಿಸಬೇಕು ಇತ್ಯಾದಿ ಪ್ರಶ್ನೆಗಳನ್ನು ಚರ್ಚಿಸಲು ಈ ಸಭೆ ಕರೆಯಲಾಗಿತ್ತು. ಸಭೆಯಲ್ಲಿ ಹಿರಿಯ ಹಾಗೂ ಕಿರಿಯ ಸಮಾಜವಾದಿಗಳು ಹಾಗೂ ಮಾನವ ಮಂಟಪದ ಟ್ರಸ್ಟಿಗಳು ಹಾಜರಿದ್ದರು.

ಈ ಸಂದರ್ಭದಲ್ಲಿ ಮಾನವ ಮಂಟಪದ ಅಧ್ಯಕ್ಷರು ಮಾತನಾಡಿ, ಮುಂಬರುವ ಜಾತಿ ಸಮೀಕ್ಷೆಯಲ್ಲಿ ಎಲ್ಲಾ ಅಂತರ್ಜಾತಿ ವಿವಾಹಿತರು ಸಮೀಕ್ಷೆಯ ಫಾರಂ ಭರ್ತಿ ಮಾಡುವಾಗ 'ಅಂತರ್ಜಾತಿ ವಿವಾಹಿತರು' ಎಂದು ತುಂಬಬೇಕೆಂದು ಕರೆಕೊಡುವ ಕುರಿತು ಚರ್ಚಿಸಿ ನಿರ್ಣಯ ಕೈಕೊಳ್ಳಲು ಸಭೆ ಕರೆದಿರುವುದಾಗಿ ತಿಳಿಸಿದರು. ಆಗ ಕೆಲ ಹಿರಿಯ ಸಮಾಜವಾದಿಗಳು "ಅಂತರ್ಜಾತಿ ವಿವಾಹಿತರು, ಎಂದು ನಮೂದಿಸುವುದಲ್ಲದೇ, 'ತಮ್ಮತಮ್ಮ ಜಾತಿಗಳನ್ನೂ ನಮೂದಿಸಿ' ಎಂದು ಕರೆ ನೀಡಬೇಕೆಂದು" ಸಲಹೆಯಿತ್ತರು. ಟ್ರಸ್ಟಿಗಳು, ತಾವು ಯಾವುದೇ ಕಾರಣಕ್ಕೂ ಅಂತರ್ಜಾತಿ ವಿವಾಹಿತರಿಗೆ ಜಾತಿ ನಮೂದಿಸಲು ಸೂಚಿಸುವುದಿಲ್ಲ ಹಾಗು ಅದರಿಂದ ಮಾನವ ಮಂಟಪದ ಆಶಯಕ್ಕೆ ಧಕ್ಕೆ ಆಗುತ್ತದೆ ಮತ್ತು ಜಾತಿ ನಮೂದಿಸುವುದು ಅವರವರ ಇಚ್ಛೆಗೆ ಬಿಟ್ಟ ವಿಚಾರ ಎಂದು ತಿಳಿಸಿದರು. ಇದು ಟ್ರಸ್ಟಿಗಳ ನಡುವೆ ಹಾಗು ಸಭೆಗೆ ಹಾಜರಾಗಿದ್ದ ಹಿರಿಯ ಕಿರಿಯ ಸಮಾಜವಾದಿಗಳ ನಡುವಿನ ವಾಗ್ವಾದಕ್ಕೆ ಕಾರಣವಾಯಿತು.

ಇಂದು ಜಾತಿ ವಿನಾಶ ಸಾಧ್ಯವಿಲ್ಲ ಎಂಬುದು ವಾಸ್ತವಕ್ಕೆ ಹತ್ತಿರವಾದ ಸತ್ಯ ಇದನ್ನು ಒಪ್ಪಿಕೊಳ್ಳಬೇಕೆಂದು ಹಾಗೂ ನಾವು ಜಾತಿಗಳ ಸಮಾನತೆಗೆ ಶ್ರಮಿಸಬೇಕೆಂದು, ಜಾತಿ ನಮೂದಿಸದಿದ್ದರೆ ದಲಿತ ಹಾಗೂ ಹಿಂದುಳಿದ ಜಾತಿಗಳು ತಮ್ಮ ಮೀಸಲಾತಿಯನ್ನು ಪಡೆಯಲು ಕಷ್ಟವಾಗುವುದಾಗಿಯೂ, ಜಾತಿ ಜನಗಣತಿಯಲ್ಲಿ ಸರಿಯಾಗಿ ಜಾತಿಗಳ ಸಾಮಾಜಿಕ, ಆರ್ಥಿಕ ಹಾಗು ಸಾಂಸ್ಕೃತಿಕ



ಮಾಹಿತಿ ಸಿಗಲಾರದೆಂದು, ಹಾಗಾಗಿ ಕಡ್ಡಾಯವಾಗಿ ಅಂತರ್ಜಾತಿ ವಿವಾಹಿತರು ತಮ್ಮ ಜಾತಿಗಳನ್ನು ನಮೂದಿಸಲೇಬೇಕೆಂದು ಕೆಲ ಸದಸ್ಯರು ಒತ್ತಾಯಿಸತೊಡಗಿದರು. ಇದನ್ನು ವಿರೋಧಿಸಿದ ಕೆಲ ಸದಸ್ಯರು ನಾವು ಮಾನವ ಮಂಟಪದಲ್ಲಿ ಮದುವೆ ಮಾಡಿಸುವಾಗ ಎಲ್ಲೂ ಜಾತಿಗಳ ಹೆಸರನ್ನು ಹೇಳಿ ಮಾಡಿಸುವುದಿಲ್ಲವೆಂದೂ, ಯಾವುದೇ ಕಾರಣಕ್ಕೂ ಜಾತಿಯನ್ನು ನಮೂದಿಸಬಾರದೆಂದು, ತಮಗೆ ಜಾತಿ ಆಧಾರಿತ ಮೀಸಲಾತಿಯ ಅವಶ್ಯಕತೆಯೂ ಇಲ್ಲವೆಂದು, ತಾವು ಜಾತಿಮುಕ್ತ ಸಮಾಜದೆಡೆಗೆ ಮುನ್ನಡೆಯುವ ಉದ್ದೇಶದಿಂದ ಮಾನವ ಮಂಟಪದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದಾಗಿ ತಿಳಿಸಿದರು. ಜಾತಿಯನ್ನು ನಮೂದಿಸಿದರೆ ಜಾತಿ ವಿನಾಶವನ್ನು ನಮ್ಮ ಆದರ್ಶವಾಗಿ ಇಟ್ಟುಕೊಂಡು ಬದುಕುತ್ತಿರುವ ನಮ್ಮೆಲ್ಲರ ಕನಸು ಮತ್ತು ಆಶಯ ನುಚ್ಚುನೂರಾಗುವುದೆಂದು ಅವರು ತಿಳಿಸಿದರು.

ಈ ಮಧ್ಯೆ ಅಂತರ್ಜಾತಿ ವಿವಾಹಿತರಿಗೆ ೧% ಮೀಸಲಾತಿ ನೀಡುವ ಕುರಿತು ಸರಕಾರದ ಪರಿಶೀಲನೆಯಲ್ಲಿ ಇರುವುದರ ಕುರಿತು ಮಾನವ ಮಂಟಪದ ಟ್ರಸ್ಟಿಗಳಲ್ಲಿ ಒಬ್ಬರು ಪ್ರಸ್ತಾಪಿಸಿದಾಗ, "ಇವೆಲ್ಲಾ ಎಂದೂ ಜಾರಿಗೆ ಬಾರದ ಪ್ರಸ್ತಾವನೆಗಳು. ಇಂತಹ ಜಾರಿಯಾಗದ ಪ್ರಸ್ತಾವನೆಗಳ ಕುರಿತು ಮಾತನಾಡುವುದರ ಬದಲು, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಅಂತರ್ಜಾತಿ ವಿವಾಹಿತರು, ಮೀಸಲಾತಿ ಬೇಕಾಗಿರುವವರು ಅವರವರ ಜಾತಿಗಳ ಮೀಸಲಾತಿಯ ಉಪಯೋಗ ಪಡೆದುಕೊಳ್ಳುವ ಕುರಿತು ಚರ್ಚಿಸೋಣ ಮತ್ತು ಎಂದೂ ಬದಲಾಗದ ಹಾಗೂ ಶತಶತಮಾನಗಳಿಂದ ದಾರ್ಶನಿಕರ ಕೈಯಲ್ಲೆ ನಿರ್ಮೂಲನೆ ಮಾಡಲಾಗದ ಜಾತಿ ವ್ಯವಸ್ಥೆಯನ್ನು ನಾವು ನಿರ್ಮೂಲನೆ ಮಾಡಲು ಸಾಧ್ಯವಿಲ್ಲ ಎಂಬ ಕಟು ಸತ್ಯವನ್ನು ಅರ್ಥ ಮಾಡಿಕೊಳ್ಳಬೇಕು" ಎಂದು ಕೆಲ ಸದಸ್ಯರು ವಾದಿಸತೊಡಗಿದರು.

ಇದನ್ನೆಲ್ಲ ಕೇಳಿಸಿಕೊಳ್ಳುತ್ತ ಕುಳಿತ ಮಾನವ ಮಂಟಪದ ಟ್ರಸ್ಟಿಗಳು ತಮ್ಮ ನಿಲುವಿಗೆ ಬದ್ಧರಾಗಿ ಜಾತಿ ಜನಗಣತಿಯಲ್ಲಿ ಜಾತಿ ನಮೂದಿಸದೇ ಇರುವ ಒಂದು ಕಾಲಂ ಕೂಡ ಇದೆ ಎಂದು, ಅಲ್ಲಿ ಜಾತಿ ನಮೂದಿಸಲು ಇಚ್ಚಿಸದವರು ಆ ಕಾಲಂ ಅನ್ನು ಭರ್ತಿ ಮಾಡಬಹುದೆಂದು ಹಾಗು ಜಾತಿ ಕಾಲಂನಲ್ಲಿ ತಮ್ಮ ಜಾತಿ ನಮೂದಿಸುವವರು ಅವರಿಷ್ಟಾನುಸಾರ ತುಂಬಬಹುದು ಎಂದು ತಿಳಿಸಿದರು. ಆದರೆ ಮಾನವ ಮಂಟಪ ಮಾತ್ರ 'ಅಂತರ್ಜಾತಿ ವಿವಾಹಿತರು' ಎಂಬುದನ್ನು ಫಾರಂನಲ್ಲಿ ಮರೆಯದೆ ತುಂಬಬೇಕೆಂದು ಪತ್ರಿಕಾ ಹೇಳಿಕೆ ಕೊಡುವುದಾಗಿ ಸ್ಪಷ್ಟಪಡಿಸಿದರು. ಕೂಡಲೇ ಕೆಲವರು ಸಭಾತ್ಯಾಗ ಮಾಡಿದರು. ಸಭೆಯಲ್ಲಿ ಗೊಂದಲ ಸೃಷ್ಟಿಯಾಗಿ ಜಾತಿಯ ಬಗೆಗೆ ಯಾವುದೇ ಸ್ಪಷ್ಟತೆಗೆ ಬರದೇ ಸಭೆ ಮುಕ್ತಾಯವಾಯಿತು. ಇದನ್ನೆಲ್ಲ ನೋಡುತ್ತ ಕುಳಿತ ನನಗೆ ಗೊಂದಲವೂ ಉಂಟಾಯಿತು.

'ಮಾನವ ಮಂಟಪ'ದಡಿಯಲ್ಲಿ ಒಲವಿನ ವಿವಾಹವಾಗಿ ಜಾತಿಯನ್ನು ಪ್ರಜ್ಞಾಪೂರ್ವಕವಾಗಿ ಮೀರುತ್ತಾ ನನ್ನನ್ನು ಮತ್ತು ನನ್ನ ಮಕ್ಕಳನ್ನು ಜಾತಿ ವ್ಯವಸ್ಥೆಯಿಂದ ಬೇರ್ಪಡಿಸಿಕೊಳ್ಳುತ್ತ ಜಾತಿರಹಿತ ಸಮಾಜದ ಕನಸು ಕಾಣುತ್ತಿರುವ ನನಗೆ, ಜಾತಿ ವಿನಾಶ ಕೂಡ ಸಮಾಜವಾದದ ಉದ್ದೇಶ ಎಂಬ ನಂಬಿಕೆಯಿದೆ. ನನ್ನ ಹಾಗೆ ಆಲೋಚಿಸುವವರು ಸಮಾಜದಲ್ಲಿ ಸಾಕಷ್ಟು ಜನರಿದ್ದಾರೆಂಬುದು ನನ್ನ ಭಾವನೆ. ದಲಿತರು ಮತ್ತು ಹಿಂದುಳಿದವರ ಮೀಸಲಾತಿಯ ಬೆಂಬಲಿಗನಾಗಿ ಕೂಡ ಜಾತಿ ಮುಕ್ತ ವ್ಯವಸ್ಥೆಯಡೆಗೆ ಹೆಜ್ಜೆ ಇಡಬೇಕೆಂದು ನಂಬಿ ನನ್ನ ಹಾಗೆ ಹಲವರು ನಮ್ಮ ನಡುವೆ ಬದುಕುತಿದ್ದಾರೆ. ಅವರೆಲ್ಲ ಜಾತಿ ವಿನಾಶವನ್ನು ತಮ್ಮ ಆಶಯವಾಗಿಸಿಕೊಂಡಿದ್ದಾರೆ. ಇಂಥ ಸಂದರ್ಭದಲ್ಲಿ ಜಾತಿ ವಿನಾಶ ಸಾಧ್ಯವಿಲ್ಲ ಇನ್ನು ನಾವು ಜಾತಿ ಸಮಾನತೆಯಡೆ ಹೆಜ್ಜೆಇಡಬೇಕೆಂಬ ಅಭಿಪ್ರಾಯಗಳು ನಮ್ಮನ್ನೆಲ್ಲ ಗೊಂದಲಕ್ಕೆ ದೂಡುತ್ತಿದೆ. ಇನ್ನಾದರು ಸಮಾಜವಾದವನ್ನು ಸ್ಪಷ್ಟತೆಯಿಂದ ಹೊಸ ಹುರುಪಿನೊಂದಿಗೆ ಯುವಪೀಳಿಗೆಗೆ ಮರುವ್ಯಾಖ್ಯಾನ ಮಾಡದಿದ್ದರೆ, ಸಮಾಜವಾದವೂ ಪಳೆಯುಳಿಕೆಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

(೧೬ನೇ ಪುಟಕ್ಕೆ

# ಸಮಕಾಲೀನ

## ಇಂದಿಗೆ ಬೇಕಾದ ಅಂಬೇಡ್ಕರ್



**ಮ**ತ್ತೊಮ್ಮೆ ಏಪ್ರಿಲ್ ೧೪ ಬರುತ್ತಲಿದೆ, ಬಾಬಾ ಸಾಹೇಬರ ಗುಣಗಾನದ ಮತ್ತೊಂದು ಹಬ್ಬ ನಡೆಯಲಿದೆ. ಆದರೆ ಬಾಬಾ ಸಾಹೇಬರನ್ನು ನಾವು ಅರ್ಥ ಮಾಡಿಕೊಳ್ಳುವ, ಇಂದಿಗೆ ಅವರ ಪ್ರಸ್ತುತತೆಯನ್ನು ಕಂಡುಕೊಳ್ಳುವ, ಇಂದಿಗೆ ಬೇಕಾದ ಅಂಬೇಡ್ಕರ್‌ರನ್ನು ಮರು ನಿರೂಪಿಸಿಕೊಳ್ಳುವ ಕೆಲಸ ನಡೆಯುತ್ತಿದೆಯಾ? ಎಂಬ ಪ್ರಶ್ನೆಯನ್ನು ಕೇಳಿಕೊಂಡಾಗ ನಿರಾಶೆಯೇ ಹುಟ್ಟುತ್ತದೆ. ನಿಜ, ಎಲ್ಲೆಲ್ಲೂ ಅಂಬೇಡ್ಕರ್ ಅಧ್ಯಯನ ಕೇಂದ್ರಗಳು, ಪೀಠಗಳು ಸ್ಥಾಪನೆಯಾಗಿವೆ. ಕೆಲವೆಡೆ ನಿಜವಾಗಿಯೂ ಗಂಭೀರ ಸಂಶೋಧನೆ–ಅಧ್ಯಯನಗಳು ನಡೆದಿವೆ. ಆದರೆ ಈ ಅಧ್ಯಯನಗಳಿಗೂ ಸಮಕಾಲೀನ ದಲಿತ ರಾಜಕಾರಣಕ್ಕೂ ಯಾವುದೇ ಸಾವಯವ ಸಂಬಂಧವಿಲ್ಲದೇ ಹೋಗಿದೆ. ದಲಿತ ರಾಜಕಾರಣ ಜನಪ್ರಿಯ ಘೋಷಣೆ ಮತ್ತು ಬೇಡಿಕೆಗಳ ಮೇಲೇ ಮುಂದುವರೆದಿದ್ದು, ದಲಿತ ರಾಜಕಾರಣ ಮತ್ತು ಆ ಮೂಲಕ ದಲಿತ ಸಮುದಾಯವನ್ನು ಮುಖ್ಯ ವಾಹಿನಿಯ ರಾಜಕಾರಣ ಮತ್ತು ಚಿಂತನ ಮಾರ್ಗದೊಳಕ್ಕೆ ಲೀನಗೊಳಿಸಿಕೊಳ್ಳುವ ಪ್ರಯತ್ನಗಳೇ ನಡೆದಿಲ್ಲ. ಬದಲಿಗೆ ದಲಿತರು ಮತ್ತು ಅವರ ರಾಜಕಾರಣವನ್ನು ಪ್ರತ್ಯೇಕತೆಯಲ್ಲೇಯೇ ಇಟ್ಟುಕೊಳ್ಳುವ ಪಟ್ಟಭದ್ರ ಹಿತಾಸಕ್ತಿಗಳನ್ನು ಎಲ್ಲೆಲ್ಲೂ ನಾವು ಕಾಣಬಹುದು.


ಇದಕ್ಕೆ ಮುಖ್ಯ ಕಾರಣ, ಹಿಂದೊಮ್ಮೆ ಲೋಹಿಯಾ ಹೇಳಿದ್ದಂತೆ, ಅಂಬೇಡ್ಕರ್ ವ್ಯಕ್ತಿತ್ವದಲ್ಲಿ ಅಂತರ್ಗತವಾದಂತಿದ್ದ ಕಹಿ ಮತ್ತು ಪ್ರತ್ಯೇಕತೆಯನ್ನು ದಲಿತ ರಾಜಕಾರಣ ಮತ್ತು ಚಳುವಳಿಗಳು ಈಗಲೂ ಅಮೂಲ್ಯ ಆಸ್ತಿಗಳಂತೆ ಕಾಪಾಡಿಕೊಂಡು ಹೋಗುತ್ತಿರುವುದೇ ಆಗಿದೆ. ಇದಕ್ಕೆ ಪ್ರತಿಕ್ರಿಯೆಯೆಂಬಂತೆ ಸಮಕಾಲೀನ ಸಮಾಜವೂ ಅಂಬೇಡ್ಕರ್‌ರನ್ನು ದಲಿತ ನಾಯಕ ಪಟ್ಟದಾಚೆ ನೋಡಲು ನಿರಾಕರಿಸುತ್ತಿರುವುದೂ ಆಗಿದೆ. ಈ ವಿಷವ್ಯೂಹದಿಂದ ಅಂಬೇಡ್ಕರ್‌ರನ್ನು ಬಿಡುಗಡೆಗೊಳಿಸುವ ಏಕೈಕ ಮಾರ್ಗವೆಂದರೆ, ದಲಿತ ರಾಜಕಾರಣದ ಆಚೆಗೂ ವಿಸ್ತರಿಸುವ ಅವರ ರಾಜಕೀಯ ಚರಿತ್ರೆ ಮತ್ತು ಪಾಂಡಿತ್ಯವನ್ನು ಮುಖ್ಯವಾಹಿನಿ ರಾಜಕಾರಣದೊಂದಿಗೆ ಅನುಸಂಧಾನಗೊಳಿಸುವುದು ಮತ್ತು ಅವರ ರಾಜಕಾರಣದ ಕೇಂದ್ರ ಕಾರ್ಯಕ್ರಮವಾಗಿದ್ದ 'ಜಾತಿ ವಿನಾಶ'ವನ್ನು ನಮ್ಮ ಸಂವಿಧಾನದ ಮುಖ್ಯ ಉದ್ದೇಶಗಳಲ್ಲೊಂದನ್ನಾಗಿ ಮಾಡುವುದು. ಇದಕ್ಕೆ ಮುಖ್ಯವಾಗಿ ಇಂದಿನ ದಲಿತ ರಾಜಕೀಯ ನಾಯಕರು ಮೊದಲ ಹೆಜ್ಜೆ ಇಡಬೇಕಿದೆ. ಆದರೆ ಅದು ಸಾಧ್ಯವೇ? ಈ ಮುಂದಿನ ಪಟಗಳಲ್ಲಿನ ಬರಹಗಳು ಈ ಪ್ರಶ್ನೆಯ ಸುತ್ತ ತನ್ನ ಗಮನವನ್ನು ಕೇಂದ್ರೀಕರಿಸಿವೆ. ಓದಿ, ಬರೆಯಿರಿ.–ಸಂ.

## ಅಂಬೇಡ್ಕರ್ ಚಿಂತನೆಗೆ ಇಂದು ಪರ್ಯಾಯವಿಲ್ಲ

–ಡಾ. ರಾಜೇಂದ್ರ ಚೆನ್ನಿ


**ಜಾ**ತಿ ವ್ಯವಸ್ಥೆಯನ್ನೇ ಕೇಂದ್ರವಾಗಿಟ್ಟುಕೊಂಡ ಸಾಮಾಜಿಕ ಹೋರಾಟಗಳಿಗೆ ಈಗ ಏನಾದರೂ ಪ್ರಸ್ತುತತೆಯಿದೆಯೇ ಎನ್ನುವುದು ಮುಖ್ಯವಾದ ಪ್ರಶ್ನೆ. ಸ್ವತಃ ಅಂಬೇಡ್ಕರ್ ಅವರ ಸಿದ್ಧಾಂತ ಹಾಗೂ ಹೋರಾಟಗಳನ್ನು ಜಾತಿಕೇಂದ್ರಿತವೆಂದು ವಿವರಿಸಲಾಗಿದೆಯಾದರೂ ಅದು ಸಮರ್ಪಕವಲ್ಲ. ಮೊದಲನೇಯದಾಗಿ ಅವರ ಸಿದ್ಧಾಂತಗಳು ಅಸ್ಪೃಶ್ಯತೆ, ಅಸಮಾನತೆ, ವಸಾಹತುಶಾಹಿ, ಭೂಮಾಲೀಕತ್ವ, ಹಿಂದೂ ಧರ್ಮದ ಆತ್ಯಂತಿಕವಾದ ನಿರಾಕರಣೆ, ಸಂವಿಧಾನಾತ್ಮಕವಾದ ಸವಲತ್ತುಗಳಿಗಾಗಿ ಒತ್ತಾಯ– ಇವೆಲ್ಲವುಗಳನ್ನು ಒಳಗೊಂಡಿವೆ. ಅದೇ ರೀತಿ, ಅವರ ಹೋರಾಟಗಳು ಅಹವಾಲುಗಳನ್ನು ಸಲ್ಲಿಸುವುದರಿಂದ, ದಲಿತರ ನಾಗರಿಕ ಹಕ್ಕುಗಳಿಗಾಗಿ ಹೋರಾಟ(ಸಾರ್ವಜನಿಕ ಕೆರೆಯ ಉಪಯೋಗ ಹಾಗೂ ದೇವಾಲಯ ಪ್ರವೇಶಗಳು ಸೇರಿದಂತೆ), ರಾಜಕೀಯ ಪ್ರತಿನಿಧೀಕರಣಕ್ಕಾಗಿ ಹೋರಾಟ, ಸಂವಿಧಾನಾತ್ಮಕ ಹೋರಾಟ ಮತ್ತು ಆಧ್ಯಾತ್ಮಿಕವೆಂದು ಕರೆಯಬಹುದಾದ ತಾತ್ವಿಕ ಹೋರಾಟ(metaphysical rebellion ಎನ್ನುವ ಅರ್ಥದಲ್ಲಿ) ಇವೆಲ್ಲವುಗಳನ್ನು ಒಳಗೊಂಡಿವೆ.

ಭಾರತೀಯ ಸಮಾಜದ ಅತ್ಯಂತ ಮುಖ್ಯ ಹಾಗೂ ಪ್ರಭಾವಿಯಾದ ಸಾಮಾಜಿಕ ರಚನೆಯೆಂದರೆ ಜಾತಿವ್ಯವಸ್ಥೆಯೆನ್ನುವ ಮೂಲ ಸಿದ್ಧಾಂತದಲ್ಲಿಯ ನಂಬಿಕೆಯಿಂದಾಗಿ ಅವರು ಜಾತಿವ್ಯವಸ್ಥೆಯನ್ನು ತಮ್ಮ ಸಾಮಾಜಿಕ, ಚಾರಿತ್ರಿಕ ವಿಶ್ಲೇಷಣೆಯ ಅತಿಮುಖ್ಯ ಸಾಧನವಾಗಿ ಬಳಸಿಕೊಂಡರು. ಹಾಗೂ ಹಲವರು ತಪ್ಪಾಗಿ ನಂಬುವಂತೆ ಇದು ದಲಿತರಾಗಿ ಅವರು ಅನುಭವಿಸಿದ ಅನ್ಯಾಯದಲ್ಲಿ ಹುಟ್ಟಿದ ತಿಳುವಳಿಕೆಯಾಗಿರಲಿಲ್ಲ. ವಿಶಾಲವಾದ ಅಧ್ಯಯನ ಹಾಗೂ ಸಮಾಜಶಾಸ್ತ್ರೀಯ ತರಬೇತಿ ಪಡೆದಿದ್ದ ಅಂಬೇಡ್ಕರ್ ಜಾತಿಕೇಂದ್ರಿತ ವಿಶ್ಲೇಷಣೆಯ ವೈಚಾರಿಕ ಚೌಕಟ್ಟನ್ನು ನಿರ್ಮಿಸಿಕೊಂಡರು. ಆದರೆ ಅವರ ಚಿಂತನೆಯು ಈ ಚೌಕಟ್ಟಿಗೆ ಸೀಮಿತವಾಗಿರಲಿಲ್ಲ. ಹೋರಾಟವೂ ಹಾಗೆ ಆಗಿರಲಿಲ್ಲ. ಇಲ್ಲದಿದ್ದರೆ ಸಂವಿಧಾನವನ್ನು ರಚಿಸಿದ, ಅದರ ಮೂಲಕ ದಲಿತ ಜನಾಂಗಗಳ ಕಲ್ಯಾಣಕ್ಕಾಗಿ ಪ್ರಯತ್ನಿಸಿದ ಅಂಬೇಡ್ಕರ್ ಅವರಿಗೂ, ಮನುಸ್ಮೃತಿಯನ್ನು ಸುಟ್ಟ ಅಂಬೇಡ್ಕರ್ ಅವರಿಗೂ ಸಂಬಂಧವೇ ಇಲ್ಲವೆಂದು ಹೇಳಬೇಕಾಗುತ್ತದೆ. ಇಷ್ಟೆಲ್ಲವನ್ನು ಒಪ್ಪಿಕೊಂಡರೂ ದಲಿತಜಾತಿ, ಸಮುದಾಯಗಳನ್ನು ಒಂದುಗೂಡಿಸಿ ಅವರಿಗೆ ಒಂದು ಅಸ್ಮಿತೆಯನ್ನು ಕಟ್ಟಿಕೊಟ್ಟು ಅಂಬೇಡ್ಕರ್ ಆರಂಭಿಸಿದ ಒಂದು ದೊಡ್ಡ ಹೋರಾಟದ ಧ್ಯೇಯವು ಜಾತಿವಿನಾಶವಾಗಿತ್ತು. ಈ ಅಂತಿಮ ಉದ್ದೇಶಕ್ಕೆ ಬದ್ಧವಾಗಿದ್ದ ಮತ್ತು ಸಹಕಾರಿಯಾಗಿದ್ದ ಅನೇಕ ಹೋರಾಟಗಳನ್ನು ಅವರು ರೂಪಿಸುತ್ತ ಬಂದರು. ಇದಕ್ಕೆ ಮುಖ್ಯವಾದ ಅಸ್ತ್ರವಾಗಿದ್ದು ದಲಿತ ಜಾತಿಗಳನ್ನು ಒಗ್ಗೂಡಿಸಿ ಅಂದಿನ ಬ್ರಿಟಿಷ್ ವಸಾಹತುಶಾಹಿಯು ನಿರ್ಮಿಸಿದ್ದ ಸರಕಾರ ಹಾಗೂ ಪ್ರಜಾಪ್ರಭುತ್ವದಲ್ಲಿ ಪ್ರತಿನಿಧೀಕರಣವನ್ನು ಕೇಳಲು ಆರಂಭಿಸಿದ ಹಲವಾರು ಹೋರಾಟಗಳು.



ಗಾಂಧೀಯವರ ವಿರೋಧ ಹಾಗೂ ಪೂನಾ ಒಪ್ಪಂದದ ನಂತರವೂ ಈ ವಿಷಯದಲ್ಲಿ ವಿಜಯಿಯಾದವರು ಅಂಬೇಡ್ಕರ್ ಅವರೇ. ಯಾಕೆಂದರೆ ದಲಿತ ಹಾಗೂ ಹಿಂದುಳಿದ ಸಮುದಾಯಗಳಿಗೆ ಸಮರ್ಪಕವಾದ ರಾಜಕೀಯ ಪ್ರತಿನಿಧೀಕರಣವು ಇರಲೇಬೇಕೆನ್ನುವುದು ಭಾರತೀಯ ರಾಜಕೀಯದ ಎಂದೂ ಬದಲಾಗದ ಲಕ್ಷಣವಾಗಿಬಿಟ್ಟಿದೆ. ಇಂದು ಪ್ರಬಲವಾಗಿರುವ ಬಲಪಂಥೀಯ ಸಿದ್ಧಾಂತಗಳು, ರಾಜಕೀಯ ಪಕ್ಷಗಳು ಇದನ್ನು ತಿರಸ್ಕರಿಸುವ ಸಾಧ್ಯತೆಯೇ ಇಲ್ಲ, ಅದೇ ರೀತಿ ಭಾರತೀಯ ರಾಜಕಾರಣದ ಇನ್ನೊಂದು ಲಕ್ಷಣವನ್ನು ಅಂತಿಮವಾಗಿ ನಿರ್ಧರಿಸಿಕೊಟ್ಟವರೂ ಅಂಬೇಡ್ಕರ್ ಅವರೇ. ಇದು ಮೀಸಲಾತಿಯ ಮೂಲಕ ಸಾಮಾಜಿಕ ನ್ಯಾಯವನ್ನು ದೊರಕಿಸಬಹುದು ಎನ್ನುವ ಚಿಂತನೆ. ಹೀಗಾಗಿ ಆಧುನಿಕ ಭಾರತೀಯ ರಾಜಕಾರಣದ ಎರಡು ಅತಿಮುಖ್ಯ ಅಂಶಗಳನ್ನು ರೂಪುಗೊಳಿಸಿದ್ದು ಅಂಬೇಡ್ಕರ್ ಚಿಂತನೆಯೆ ಹೊರತು ಗಾಂಧಿವಾದಿ ಚಿಂತನೆಯಲ್ಲ. ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ಗಾಂಧಿ ರಾಜಕಾರಣ ಸಾಧಿಸಿದ ವಿಜಯವು ಅಸಾಮಾನ್ಯವಾದುದು. ಹೀಗಾಗಿ ಅದು ಈಗಲೂ ವಿಶ್ವದ ಹಲವು ಮೂಲೆಗಳಲ್ಲಿ ಪ್ರಸ್ತುತವಾಗಿದೆ. ಆದರೆ ಇದನ್ನು ಹೊರತುಪಡಿಸಿದರೆ ಆಧುನಿಕ ಭಾರತೀಯ ರಾಜಕಾರಣದಲ್ಲಿ ಗಾಂಧೀ ರಾಜಕಾರಣವು ಇಲ್ಲವೇ ಇಲ್ಲ. 'ಹಿಂದ್ ಸ್ವರಾಜ್'ದಲ್ಲಿ ಗಾಂಧೀ ನಿರೂಪಿಸಿದ ಆಧುನಿಕ ಯಂತ್ರ ನಾಗರೀಕತೆ ಹಾಗೂ ಬಂಡವಾಳಶಾಹಿಯ ಪ್ರಬುದ್ಧ ವಿರೋಧದ ರಾಜಕಾರಣವನ್ನು ಭಾರತೀಯ ರಾಜಕಾರಣವು ಒಪ್ಪಿಕೊಂಡ ಉದಾಹರಣೆಯೇ ಇಲ್ಲ. ನೆಹರೂ ಮಾದರಿಯ 'ಸಮಾಜವಾದ'(?) ಅಂಬೇಡ್ಕರ್ ಒಪ್ಪಿಕೊಂಡಿದ್ದ State Socialism ಗೆ ಹತ್ತಿರವಾಗಿದೆಯೇ ಹೊರತು ಅದರಲ್ಲಿ ಗಾಂಧಿವಾದದ ಸುಳಿವೇ ಇಲ್ಲ.

ಇದೆಲ್ಲ ನಿಜವಾದರೂ ಭಾರತೀಯ ರಾಜಕಾರಣದ ನಿರಂತರ ದ್ವಂದ್ವ ಸ್ಥಿತಿಯಲ್ಲಿ ಅಂಬೇಡ್ಕರ್ ರಾಜಕಾರಣವನ್ನು ಅತ್ಯಂತ ಕುಬ್ಜ ಹಾಗೂ ಹೀನಾಯವನ್ನಾಗಿ ಮಾಡಲಾಯಿತು. ಈ ದ್ವಂದ್ವ ಸ್ಥಿತಿಯೆಂದರೆ ಇಡೀ ಭಾರತೀಯ ರಾಜಕಾರಣವು ಬಳಸುವ ನುಡಿಗಟ್ಟು ಅಥವಾ rhetoric ಒಂದು ಕಡೆಗಿದ್ದರೆ ಈ ರಾಜಕಾರಣದ ವಾಸ್ತವವಾದ ಉದ್ದೇಶಗಳು ಹಾಗೂ ಕ್ರಿಯೆಗಳು ಅದರ

ಸಂಪೂರ್ಣವಾದ ವಿರೋಧಿ ನೆಲೆಯಲ್ಲಿರುತ್ತವೆ. ಈಗಾಗಲೇ ಹೇಳಿದ ಹಾಗೆ ಭಾರತೀಯ ರಾಜಕಾರಣದ ನುಡಿಗಟ್ಟು ಅಂಬೇಡ್ಕರ್ ಚಿಂತನೆಯಿಂದ ಬಂದಿದೆ. ಅದು ದಲಿತ ಹಾಗೂ ಹಿಂದುಳಿದ ಸಮುದಾಯಗಳಿಗೆ ಪ್ರತಿನಿಧೀಕರಣದ ನುಡಿಗಟ್ಟನ್ನು ಬಳಸುತ್ತದೆ. ಅಲ್ಲದೇ ಮೀಸಲಾತಿಯೇ ಸಾಮಾಜಿಕ ನ್ಯಾಯದ ಏಕಮಾತ್ರ ಸಾಧನವೆಂದು ಹೇಳುತ್ತದೆ. ಆದರೆ ಅವರ ನೈಜ ಉದ್ದೇಶಗಳೆಂದರೆ ಇವೆರಡೂ ಆಗದಂತೆ ಅಥವಾ ಆದಂತೆ ಕಂಡರೂ ಅವು ಭಾರತೀಯ ಸಮಾಜದ ರಚನೆಗಳ ಮೇಲೆ ಯಾವುದೇ ಮೂಲಭೂತವಾದ ಪರಿಣಾಮವನ್ನು ಮಾಡದಂತೆ ನೋಡಿಕೊಳ್ಳುವುದು. ಹೀಗಾಗಿ ದಲಿತ ಹಾಗೂ ಹಿಂದುಳಿದ ಜಾತಿಗಳ ರಾಜಕಾರಣಿಗಳು ಭಾರತೀಯ ರಾಜಕೀಯ ವ್ಯವಸ್ಥೆಯಲ್ಲಿ ಸಂಖ್ಯೆಯಲ್ಲಿ ಹೆಚ್ಚಾಗುತ್ತ ಬಂದಿದ್ದರೂ ಅವರ ರಾಜಕಾರಣ ಬಲಿಷ್ಠ ಜಾತಿಗಳ ರಾಜಕಾರಣದಲ್ಲಿ ಶಾಮೀಲಾಗುತ್ತದೆಯೆ ಹೊರತು ಅದರಲ್ಲಿ ಯಾವ ಬದಲಾವಣೆಯನ್ನು ತರುವುದಿಲ್ಲ.

ಅಂಬೇಡ್ಕರ್ ಅವರ ಪ್ರಬುದ್ಧವಾದ ಜಾತಿಕೇಂದ್ರಿತ ರಾಜಕಾರಣವನ್ನು ಜಾತಿ ರಾಜಕಾರಣಕ್ಕೆ ಇಳಿಸಿಬಿಟ್ಟು ಅದರಿಂದ ಅತ್ಯಂತ ಹೆಚ್ಚು ಪ್ರಾಬಲ್ಯ, ಶ್ರೀಮಂತಿಕೆ, ಅಧಿಕಾರವನ್ನು ಪಡೆದದ್ದು ಇಲ್ಲಿಯ ಶೂದ್ರ, ಮಧ್ಯಮ ಜಾತಿಗಳು ಮಾತ್ರ. ಉದಾಹರಣೆಗೆ ಕರ್ನಾಟಕದಲ್ಲಿ ಲಿಂಗಾಯಿತರು ಮತ್ತು ಒಕ್ಕಲಿಗರು. ಇವೆರಡೂ ಭೂಮಾಲೀಕ ಬಲಾಢ್ಯ ಜನಾಂಗಗಳು ಹಾಗೂ ಗ್ರಾಮೀಣ ಕರ್ನಾಟಕ ಸಮಾಜದಲ್ಲಿ ಶೋಷಕ ವರ್ಗಗಳು. ಜಾತೀಯತೆ ಹಾಗೂ ಸುಪ್ತವಾದ ಅಸ್ಪೃಶ್ಯತೆ ಈ ವರ್ಗಗಳ ಮೂಲ ಸ್ವಭಾವವಾಗಿವೆ. ಇದೇ ಗುಂಪಿಗೆ ಈಗ ಕುರುಬ ಹಾಗೂ ಇತರ ಜನಾಂಗಗಳು ಸೇರುತ್ತಿವೆ. ಇವು ಅಂಬೇಡ್ಕರ್ ಚಿಂತನೆಯಲ್ಲಿ ಹುಟ್ಟಿಕೊಂಡ ಜಾತಿ ಆಧಾರಿತ ಹಿಂದುಳುವಿಕೆಯನ್ನು ತಮ್ಮ ರಾಜಕೀಯ ಭಾಷೆಯಾಗಿ ಉಪಯೋಗಿಸಿ, ಅಸಮರ್ಥನೀಯವಾದ ಮೀಸಲಾತಿಯ ಪ್ರಯೋಜನ ಪಡೆದುಕೊಂಡು ಪ್ರಬಲವಾಗಿವೆ. ಇನ್ನು ಇಷ್ಟು ಬಲಾಢ್ಯವಲ್ಲದ ಜಾತಿಗಳು ಕೂಡ ಅತ್ಯಂತ ಕುಬ್ಜ ಹಾಗೂ ಹೀನಾಯವಾದ ಮಟ್ಟಕ್ಕೆ ತಂದಿರುವ ಸಾಮಾಜಿಕ ನ್ಯಾಯದ ಕಲ್ಪನೆಯನ್ನು ಬಳಸಿಕೊಂಡು ಹೆಚ್ಚಿನ ಮೀಸಲಾತಿಯನ್ನು ಕೇಳುತ್ತವೆಯೇ ಹೊರತು ಇನ್ನಾವುದೇ ಮೂಲಭೂತ ಬದಲಾವಣೆಯನ್ನು ಬಯಸುವುದಿಲ್ಲ. ಸಾಂಸ್ಕೃತಿಕವಾಗಿ ಕೂಡ ಬ್ರಾಹ್ಮಣೀಕರಣಗೊಂಡಿರುವ ಈ ಸಮುದಾಯಗಳು ಬಹು ಬೇಗನೇ ಬಲಪಂಥೀಯ ಧೋರಣೆಗಳನ್ನು ಒಪ್ಪಿಕೊಂಡುಬಿಟ್ಟಿವೆ. ಇನ್ನು ಉಳಿದಿರುವುದು ಅಂಬೇಡ್ಕರ್ ಅವರ ಕೊಡುಗೆಯಾದ ಮೀಸಲಾತಿಯ ಪ್ರಯೋಜನವನ್ನು ಪಡೆದುಕೊಂಡು, ಉದ್ಯೋಗವನ್ನು ಪಡೆದುಕೊಂಡು ಈಗ ಮಧ್ಯಮವರ್ಗವಾಗಿ ಪರಿವರ್ತನೆಗೊಂಡಿರುವ ದಲಿತ ಮಧ್ಯಮವರ್ಗ. ಇದು ತನ್ನ ಸೀಮಿತ ಆಸೆಗಳ ಆಚೆಗೆ ಯಾವುದೇ ಸಮಾನತೆಯ ಆಶಯವನ್ನು ಹೊಂದಿಲ್ಲ. ಶಿಕ್ಷಣ ಉದ್ಯೋಗಗಳಿಗಾಗಿ ದಲಿತ ಗುರುತನ್ನು ಬಳಸಿಕೊಳ್ಳುವ ಈ ವರ್ಗವು ಇನ್ನಿತರ ಎಲ್ಲಾ ವಿಷಯಗಳಲ್ಲಿ ಈ ಗುರುತನ್ನು ಕಳಚಿಕೊಂಡು ಭಾರತೀಯ ಮಧ್ಯಮವರ್ಗದಲ್ಲಿ ಲೀನವಾಗಲು ಬಯಸುತ್ತದೆ.

ಈ ಹಿನ್ನೆಲೆಯಲ್ಲಿ ಎರಡು ಪ್ರಶ್ನೆಗಳು ಮತ್ತೆ ಮತ್ತೆ ಎದ್ದು ಬರುತ್ತವೆ. ಈ ದೇಶದ ಪ್ರಧಾನಮಂತ್ರಿ ಅಥವಾ ಈ ರಾಜ್ಯದ ಮುಖ್ಯಮಂತ್ರಿ ದಲಿತನೊಬ್ಬ ಏಕೆ ಆಗಲಾರ ಎನ್ನುವುದು ಒಂದು ಪ್ರಶ್ನೆ. ನಿಜ ಹೇಳುವುದಾದರೆ ಈ ದೇಶದಲ್ಲಿ ಪ್ರಬಲ ಜಾತಿಗಳ ರಾಜಕಾರಣ ಬದಲಾಗುವುದಿಲ್ಲವಾದ್ದರಿಂದ ಇದು ಅಸಾಧ್ಯವಾಗಿದೆ. ಅಂದರೆ ಭಾರತೀಯ ರಾಜಕಾರಣದ ನುಡಿಗಟ್ಟು ಏನೇ ಇರಲಿ, ಅದು ವಾಸ್ತವವಾಗಿ ಅಸಮಾನತೆಯ ಪರವಾಗಿದೆ. ಅಲ್ಲದೇ ಈಗ ಅಧಿಕಾರದ ಭಾಗವಾಗಿರುವ ದಲಿತ ರಾಜಕಾರಣಿಗಳು ಈ ಅಸಮಾನತೆಯನ್ನು ಒಪ್ಪಿಕೊಂಡಿದ್ದಾರೆ. ಇವರಿಂದ ಭಾರತೀಯ ಸಮಾಜದ ಬದಲಾವಣೆಯನ್ನು ನಿರೀಕ್ಷಿಸುವುದು ಮೂರ್ಖತನವಾಗುತ್ತದೆ. ರಾಜ್ಯದ ಮುಖ್ಯಮಂತ್ರಿ ದಲಿತನೇಕೆ ಆಗಬಾರದು ಎಂದು ಕೇಳುತ್ತಿರುವವರಿಗೆ ಕರ್ನಾಟಕ ಸಮಾಜದ ರಚನೆಯನ್ನು ಬದಲಾಯಿಸಬಲ್ಲ ದಲಿತ ಮುಖ್ಯಮಂತ್ರಿ ಬೇಕಾಗಿಲ್ಲ. ಅವರ ಪ್ರಕಾರ ದಲಿತ ವ್ಯಕ್ತಿಯು ಮುಖ್ಯಮಂತ್ರಿಯಾಗುವುದೇ ಒಂದು ಸಾಮಾಜಿಕ ಕ್ರಾಂತಿ.

ಹಾಗೆಂದುಕೊಂಡು ನಾವು ಈ ಜನರನ್ನು ವಿರೋಧಿಸಲು ಹೊರಟರೆ ಅದರ ಪ್ರಯೋಜನವಾಗುವುದು ರಾಜಕೀಯ ಅಧಿಕಾರವನ್ನು ಆರು ದಶಕಗಳಿಂದ ಅನುಭವಿಸಿ, ಅದು ಶಾಶ್ವತವಾಗಬೇಕೆನ್ನುವ ಬಲಾಢ್ಯ ಜಾತಿಗಳಿಗೆ. ಒಂದು ವೇಳೆ ದಲಿತ ವ್ಯಕ್ತಿಯೇ ಮುಖ್ಯಮಂತ್ರಿಯಾಗಬೇಕೆನ್ನುವ ಸೂತ್ರವನ್ನು ಅನುಷ್ಠಾನಕ್ಕೆ ತಂದರೆ ಆ ಸ್ಥಾನಕ್ಕೆ ಬರುವ ವ್ಯಕ್ತಿ ಸದ್ಯದ ರಾಜಕೀಯ ವ್ಯವಸ್ಥೆಯನ್ನು ಕಿಂಚಿತ್ತು ಬದಲಿಸಲಾರದ, ಅದರಲ್ಲಿ ಮೊದಲೇ ಶಾಮೀಲಾದ ವ್ಯಕ್ತಿಯಾಗಿರುತ್ತಾನೆ. ಇದೇನು ಭವಿಷ್ಯವಾಣಿಯಲ್ಲ. ಅಂಬೇಡ್ಕರ್ ಅವರ ಪ್ರಬುದ್ಧವಾದ ರಾಜಕಾರಣವನ್ನು ಅತ್ಯಂತ ಹೀನಾಯ ಸ್ಥಿತಿಗೆ ತಂದಿರುವ ಭಾರತೀಯ ರಾಜಕಾರಣದಲ್ಲಿ ಒಬ್ಬನೇ ಒಬ್ಬ 'ಅಂಬೇಡ್ಕರ್ ದಲಿತ' ಇಲ್ಲವೇ ಇಲ್ಲ. ಹೋಗಲಿ ಬಿಡಿ. ಈ ಲೇಖನ ಪ್ರಕಟವಾಗುವ ಹೊತ್ತಿಗೆ ಇನ್ನೊಂದು ರಾಜೀಕಬೂಲಿ ರಾಜಕೀಯ ಹೊಂದಾಣಿಕೆ ಆಗಿರುತ್ತದೆ. ಏಕೆಂದರೆ ಅಂಬೇಡ್ಕರ್ ಅವರ ರಾಜಕೀಯವು ನಿಗಿ ನಿಗಿ ಕೆಂಡದಂತೆ. ಬೊಗಸೆಯಲ್ಲಿ ಹಿಡಿಯುವವರು ಸುಡಿಸಿಕೊಳ್ಳಲು ತಯಾರಾಗಿರಬೇಕು. ಅಂಥವರೂ ಯಾರೂ ಇಲ್ಲ. ಕರ್ನಾಟಕದಲ್ಲಿ ಅಂಬೇಡ್ಕರ್ ಸಿದ್ಧಾಂತದ ವಿಷಯದಲ್ಲಿ ಎಲ್ಲರೂ ಮಾಜಿಗಳೇ. ಪಿಂಚಣಿ ಪಡೆದುಕೊಂಡು ಓಡಾಡುತ್ತಿರುವ ನಡೆವೆಣಗಳೆ.


ಆದರೆ ಈ ವೈಫಲ್ಯಗಳ ಆಚೆಗೆ ಸದ್ದುಗದ್ದಲವಿಲ್ಲದೇ ಅನೇಕ ಬೆಳವಣಿಗೆಗಳಾಗುತ್ತಿವೆ. ಹೊಸ ತಲೆಮಾರಿನವರು ಅಂಬೇಡ್ಕರ್ ಅವರನ್ನು ಮತ್ತೆ ಕಂಡುಕೊಳ್ಳುತ್ತಿದ್ದಾರೆ. ಹೊಸ ತಲೆಮಾರಿನ ವಿದ್ವಾಂಸರು ಅಂಬೇಡ್ಕರ್ ಚಿಂತನೆಯನ್ನು ಕುರಿತು ಧೀಮಂತವಾಗಿ ಬರೆಯುತ್ತಿದ್ದಾರೆ. ಆಗಬೇಕಾದದ್ದು ಏನೆಂದರೆ ಇವರೆಲ್ಲರೂ ಜಾಗತೀಕರಣವು ಸೃಷ್ಟಿಸಿದ ವೈಚಾರಿಕ ಮಾಯಾಬಜಾರ್‌ನಿಂದ ಹೊರಬಂದು ಇಂದಿಗೂ ಬಹುಸಂಖ್ಯಾತ ದಲಿತರ ಬದುಕು ಅಮಾನವೀಯವಾಗಿದೆನ್ನುವುದನ್ನು ಅರಿತುಕೊಳ್ಳಬೇಕಾಗಿದೆ. ಈ ಜನರು ಮಾನವ ಹಕ್ಕುಗಳೇ ಇಲ್ಲದ ಸ್ಥಿತಿಯಲ್ಲಿದ್ದಾರೆಂದು ತಿಳಿಯಬೇಕಿದೆ. ಈ ಜನ ಬದುಕಬೇಕೆಂದರೆ ಅಂಬೇಡ್ಕರ್ ಚಿಂತನೆಗೆ ಪರ್ಯಾಯವಾದ ಚಿಂತನೆ ಇಲ್ಲವೆನ್ನುವುದನ್ನು ಅರಿಯಬೇಕಾಗಿದೆ.

**(ಕುವೆಂಪು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿರುವ ಡಾ. ರಾಜೇಂದ್ರ ಚೆನ್ನಿಯವರು ನಮ್ಮ ನಡುವಿನ ಮುಖ್ಯ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಿಂತಕರಲ್ಲೊಬ್ಬರಾಗಿದ್ದಾರೆ)**

# ದಾರಿ ತಪ್ಪಿರುವ ದಲಿತ ರಾಜಕಾರಣ

**–ಡಾ.ರಾಮ್ ಪುನಿಯನಿ**

**ಕ**ಳೆದ ಲೋಕಸಭಾ ಚುನಾವಣೆಗಳಿಗೆ ಸ್ವಲ್ಪ ಮುನ್ನ ಅಂದರೆ, ೨೦೧೪ನೇ ಫೆಬ್ರವರಿ ೨೭ರಂದು LJP(ಲೋಕ್‌ತಾಂತ್ರಿಕ್ ಜನ್ ಪಾರ್ಟಿ)ಯ ರಾಮ್ ವಿಲಾಸ್ ಪಾಸ್ವಾನ್‌ರವರು NDA ಮೈತ್ರಿಕೂಟವನ್ನು ಸೇರಿಕೊಂಡರು. ಇದೇ ಪಾಸ್ವಾನ್, ಹನ್ನೆರಡು ವರ್ಷಗಳ ಹಿಂದೆ "ಗುಜರಾತ್‌ನಲ್ಲಿ ಹಿಂಸೆ–ಗಲಭೆ ನಡೆಯುತ್ತಿರುವಾಗ NDA ಜೊತೆಗಿರುವುದು ಇನ್ನು ಸಾಧ್ಯವಿಲ್ಲ" ಎಂಬ ಹೇಳಿಕೆ ಕೊಟ್ಟು NDA ಮೈತ್ರಿಕೂಟದಿಂದ ಹೊರನಡೆದಿದ್ದರು. ಈಗ ಪಾಸ್ವಾನ್‌ರ ಮಗ "ಗುಜರಾತ್ ಹತ್ಯಾಕಾಂಡದ ವಿಷಯದಲ್ಲಿ ಮೋದಿಯವರು ಪರಿಶುದ್ಧರೆಂದು ಸಾಬೀತಾಗಿದೆ." ಎಂದು ಹೇಳುವ ಮೂಲಕ ತಂದೆಯ ವರ್ಚಸ್ಸನ್ನು ಉಳಿಸುವ ಪ್ರಯತ್ನ ಮಾಡಿದ್ದಾರೆ. ಸ್ವಲ್ಪ ದಿನಗಳ ಹಿಂದೆ, ದಲಿತ ನಾಯಕರಾದ ಉದಿತ್ ರಾಜ್, ಮುಂಬರುವ ಚುನಾವಣೆಯಲ್ಲಿ ಟಿಕೆಟ್ ಸಿಗುವ ಭರವಸೆಯೊಂದಿಗೆ ನೇರವಾಗಿ ಬಿಜೆಪಿಯನ್ನು ಸೇರಿದ್ದಾರೆ. ಮಹಾರಾಷ್ಟ್ರದ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಮ್‌ದಾಸ್ ಅಠಾವಳೆ ಈ ಮುಂಚೆಯೇ NDAಯ ಭಾಗವಾಗಿಹೋಗಿದ್ದು, ಆಗಲೇ ರಾಜ್ಯಸಭೆಗೆ ನಾಮನಿರ್ದೇಶಿತರಾಗುವಲ್ಲಿ ಸಫಲರೂ ಆಗಿದ್ದಾರೆ. ಇನ್ನೂ ಅನೇಕ ದಲಿತ ನಾಯಕರು ನೇರವಾಗಿ ಬಜೆಪಿಯ ತೆಕ್ಕೆಗೆ ಬಂದಿದ್ದಾರೆ ಅಥವಾ ಚುನಾವಣಾ ಪೂರ್ವ ಮೈತ್ರಿಯಾಗಿ NDAಯ ಭಾಗವಾಗಿದ್ದಾರೆ. ಈ ನಾಯಕರಲ್ಲಿ ಹೆಚ್ಚಿನವರು ತಾವು ಡಾ. ಬಿ.ಆರ್.ಅಂಬೇಡ್ಕರ್ ಹಾಕಿಕೊಟ್ಟ ದಾರಿಯಲ್ಲೇ ನಡೆಯುತ್ತಿರುವುದಾಗಿ ಹೇಳಿಕೊಂಡಿದ್ದಾರೆ. ಆದರೆ RSS-BJP ಪ್ರತಿಪಾದಿಸುವ ಹಿಂದೂ ರಾಷ್ಟ್ರೀಯತೆಯ





ರಾಂ ವಿಲಾಸ್‌ಪಾಸ್ವಾನ್ ಉದಿತ್ ರಾಜ್, ರಾಮ್‌ದಾಸ್ ಅಠಾವಳೆ

ಕಲ್ಪನೆಯನ್ನು ಅಂಬೇಡ್ಕರ್‌ರವರು ಸಂಪೂರ್ಣವಾಗಿ ವಿರೋಧಿಸಿದ್ದರು ಮತ್ತು ಜಾತಿ ವಿನಾಶಕ್ಕಾಗಿ ಬದ್ಧರಾಗಿದ್ದರು.

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಚಾಲ್ತಿಯಲ್ಲಿದ್ದ ಭಾರತೀಯ ರಾಷ್ಟ್ರೀಯತೆ, ಹಿಂದೂ ರಾಷ್ಟ್ರೀಯತೆ ಮತ್ತು ಮುಸ್ಲಿಂ ರಾಷ್ಟ್ರೀಯತೆ ಎಂಬ ಮೂರು ತೆರನ ರಾಷ್ಟ್ರೀಯತೆಗಳಲ್ಲಿ ಭಾರತೀಯ ರಾಷ್ಟ್ರೀಯತೆಯ ಕಲ್ಪನೆಯನ್ನು ಬಹುತೇಕ ಎಲ್ಲ ಭಾರತೀಯರು ಒಪ್ಪಿಕೊಂಡಿದ್ದರು ಮತ್ತು ಬೆಂಬಲಿಸುತ್ತಿದ್ದರು. ಅಂದರೆ ಬಹುತೇಕ ಹಿಂದೂಗಳೂ, ಮುಸ್ಲಿಮರೂ ಭಾರತೀಯ ರಾಷ್ಟ್ರೀಯತೆಯನ್ನು ಒಪ್ಪಿಕೊಂಡಿದ್ದರು. ಕೋಮುವಾದಿ ಧಾರೆಗಳನ್ನು ಮೊದಲು ಆರಂಭಿಸಿದ್ದು ಸಮಾಜದ ಕೆಲವು ಗಣ್ಯರು, ಭೂಮಾಲೀಕರು, ರಾಜರುಗಳು. ಆನಂತರ ಆಯಾ ಕೋಮಿನ ಶ್ರೀಮಂತ ಮೇಲ್ಜಾತಿಗಳಲ್ಲಿನ ಕೆಲವು ಗುಂಪುಗಳು ಇದರಲ್ಲಿ ಸೇರಿಕೊಂಡವು. ಬ್ರಿಟಿಷರ ಜಾಣ್ಮೆ ಈ ಮತೀಯ ರಾಷ್ಟ್ರೀಯತೆಯೆಂಬ ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡುತ್ತಲೇ ಇತ್ತು. ಇದೇ ಸಮಯದಲ್ಲಿ ಮುಸ್ಲಿಂ ರಾಷ್ಟ್ರೀಯತೆ ಪ್ರತ್ಯೇಕತೆಯ ಮಾರ್ಗವನ್ನು ಹಿಡಿದದ್ದರಿಂದ ಪಾಕಿಸ್ತಾನದ ಬೇಡಿಕೆ ಮುನ್ನೆಲೆಗೆ ಬಂತು. ಇತ್ತ ಹಿಂದೂ ರಾಷ್ಟ್ರೀಯವಾದಿಗಳು ಮತೀಯ ರಾಷ್ಟ್ರೀಯತೆಯನ್ನು ಒಪ್ಪಿಕೊಳ್ಳುತ್ತಲೇ ಪಾಕಿಸ್ತಾನದ ಬೇಡಿಕೆಯನ್ನು ಇದು ಅನಾದಿಕಾಲದಿಂದಲೂ ಹಿಂದೂ ರಾಷ್ಟ್ರವಾಗಿತ್ತೆನ್ನುವ ಆಧಾರದ ಮೇಲೆ ತಿರಸ್ಕರಿಸಿತು. ಪ್ರಾಚೀನ ಕಾಲದಿಂದಲೂ ಇದು ಹಿಂದೂ ರಾಷ್ಟ್ರವಾಗಿತ್ತೆಂಬುದೇ ತುಂಬಾ ದುರ್ಬಲವಾದ ಕಲ್ಪನೆ. ಏಕೆಂದರೆ, ರಾಷ್ಟ್ರ ಅಥವಾ ರಾಜ್ಯ ಕಲ್ಪನೆಯೇ ಆಧುನಿಕ ಪರಿಕಲ್ಪನೆ. ಆದ್ದರಿಂದ, ಡಾ. ಅಂಬೇಡ್ಕರ್‌ರವರು ತಮ್ಮ 'Partition of India' ಪುಸ್ತಕದ ಪರಿಷ್ಕೃತ ಆವೃತ್ತಿಯಲ್ಲಿ ಪಾಕಿಸ್ತಾನ ರಚನೆಯನ್ನು, ಅದು ಹಿಂದೂ ರಾಜ್ ರಚನೆಗೆ ದಾರಿ ಮಾಡಿಕೊಡುತ್ತದೆ ಎಂಬ ಕಾರಣದಿಂದ ವಿರೋಧಿಸುತ್ತಾರೆ ಮತ್ತು "ನಿಜವಾಗಿ ಏನಾದರೂ ಹಿಂದೂ ರಾಜ್ ರಚನೆಯಾಗಿಬಿಟ್ಟರೆ, ಅದು ಇಡೀ ದೇಶಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸುತ್ತದೆ. ಹಿಂದೂಗಳು ಏನೇ ಹೇಳಿದರೂ ಹಿಂದುತ್ವದಿಂದ ಸ್ವಾತಂತ್ರ್ಯಕ್ಕೂ, ಸಮಾನತೆಗೂ ಮತ್ತು ಸೋದರತ್ವಕ್ಕೂ ಅಪಾಯವಿದೆ ಎಂಬುದರಲ್ಲಿ ದೊಡ್ಡ ವ್ಯತ್ಯಾಸವೇನೂ ಆಗುವುದಿಲ್ಲ. ಆದ್ದರಿಂದ ಅದು ಪ್ರಜಾಪ್ರಭುತ್ವದ ಶತ್ರು ಮತ್ತು ಹಿಂದೂ ರಾಜ್ ರಚನೆಯಾಗುವುದನ್ನು ತಡೆಯಲು ನಾವು ಸಾಧ್ಯವಾದ ಎಲ್ಲ ಪ್ರಯತ್ನಗಳನ್ನು ಮಾಡಬೇಕು" ಎಂದು ಹೇಳಿದ್ದಾರೆ(Pakistan or Partion of India, Page 358). ಇಲ್ಲಿ ಅಂಬೇಡ್ಕರ್ ಪ್ರಸ್ತಾಪಿಸುತ್ತಿರುವ ಹಿಂದುತ್ವ, RSS ಒಕ್ಕೂಟದ ಅಜೆಂಡಾ ಆದ ಬ್ರಾಹ್ಮಣ ಸಿದ್ಧಾಂತದ ತಳಹದಿಯಿರುವ ಹಿಂದುತ್ವ.

ಅಂಬೇಡ್ಕರ್‌ರವರು *ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ*ವನ್ನು ಪರಿಕಲ್ಪಿಸಿಕೊಳ್ಳುವ ಮೊದಲೇ ದಲಿತ ಚಳುವಳಿಗೆ ಅಡಿಗಲ್ಲು ಹಾಕಿದ್ದರು ಮತ್ತು ಮುಂದುವರಿದು Scheduled Caste Federationನ್ನೂ (SCF) ಕಟ್ಟಿದ್ದರು. ೧೯೫೨ರಲ್ಲಿ ವಯಸ್ಕರೆಲ್ಲ ತಮ್ಮ ವೋಟಿನ ಹಕ್ಕನ್ನು ಚಲಾಯಿಸುವ ಮೊಟ್ಟಮೊದಲ ಸಾರ್ವತ್ರಿಕ ಚುನಾವಣೆಯ ಮುನ್ನಾದಿನ SCF, ಜಯಪ್ರಕಾಶ್ ನಾರಾಯಣ್ ಮುನ್ನಡೆಸುತ್ತಿದ್ದ ಪ್ರಜಾ ಸೋಷಲಿಸ್ಟ್ ಪಾರ್ಟಿಯೊಂದಿಗೆ ಮೈತ್ರಿಯ ಒಪ್ಪಂದಕ್ಕೆ ಸಹಿ ಹಾಕಿತು. SCFನ ಪ್ರಣಾಳಿಕೆಯ ಪ್ರಕಾರ ಯಾವುದೇ ಪ್ರತಿಗಾಮಿ ಪಾರ್ಟಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವಂತಿಲ್ಲ. ಹಿಂದೂ ರಾಷ್ಟ್ರವನ್ನು ಪ್ರತಿಪಾದಿಸುವ ಜನಸಂಘ ಮತ್ತು ಹಿಂದೂ ಮಹಾಸಭಾಗಳ ದೀರ್ಘಾವಧಿ ಕಾರ್ಯಸೂಚಿಯ ದಿಕ್ಕನ್ನು ಕಾಣಬಲ್ಲವರಾಗಿದ್ದ ಅಂಬೇಡ್ಕರ್‌ರ ಪ್ರಕಾರ, ಆ ಪರಿಕಲ್ಪನೆಯು ಭಾರತದ ಮತಾತೀತ ಪ್ರಜಾಪ್ರಭುತ್ವಕ್ಕೆ ಸಂಪೂರ್ಣ ವಿರೋಧಿಯಾಗಿತ್ತು. ಅಂಬೇಡ್ಕರರ ಮೂಲ ಉದ್ದೇಶ, ಜಾತಿ ವಿನಾಶಕ್ಕಾಗಿ ಮತ್ತು ಮಹಾನ್ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಾಗಿ 'ಶಿಕ್ಷಣ, ಸಂಘಟನೆ ಮತ್ತು ಹೋರಾಟ' ಆಗಿತ್ತು. ಮತಾತೀತ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮಾತ್ರ ಇದೆಲ್ಲ ಸಾಧ್ಯವಾಗುವುದು ಎಂಬುದು ಅವರಿಗೆ ಗೊತ್ತಿದ್ದರಿಂದಲೇ ಹಿಂದುತ್ವದ ಅಜೆಂಡಾ ಇರುವ ರಾಜಕೀಯ ಪಕ್ಷಗಳೊಂದಿಗೆ ಮೈತ್ರಿ ಸಾಧ್ಯವಿಲ್ಲವೆಂದು ತಿರಸ್ಕರಿಸಿದ್ದು.

ಇವತ್ತು ಏನಾಗುತ್ತಿದೆ? ಕಳೆದ ಹಲವಾರು ವರ್ಷಗಳಿಂದ ಹೊಸ ದಲಿತ ನಾಯಕತ್ವ ಬೆಳೆದುಬಂದಿದೆ. ಒಂದು ಕಡೆ ಇದು SCFನ ಒಂದು ಬಣವನ್ನು ಪ್ರತಿನಿಧಿಸಿದರೆ, ಮತ್ತೊಂದು ಕಡೆ ಚುನಾವಣೆಗೆ ಸಂಬಂಧಿಸಿದಂತೆ ವೈಯಕ್ತಿಕ–ಕೌಟುಂಬಿಕ ಮಹತ್ವಾಕಾಂಕ್ಷೆಗಳನ್ನು ಹೊಂದಿದಂತೆ ಕಾಣುತ್ತದೆ. ಆದ್ದರಿಂದಲೇ ಮರಾಠಿಯ ಖ್ಯಾತ ಕವಿ ನಾಮದೇವ ಢಸಾಳ್, ಅಂಬೇಡ್ಕರರ 'Riddles of Hinduism' ಪುಸ್ತಕ ಪ್ರಕಟಣೆಯಾದಾಗ ಮಹಾರಾಷ್ಟ್ರಾದ್ಯಂತ ನರಕವನ್ನು ಸೃಷ್ಟಿಸಿದ್ದ ಶಿವಸೇನಾದೊಂದಿಗೆ ಗುರುತಿಸಿಕೊಂಡರು. ಈ ದಲಿತ ರಾಜಕಾರಣಿಗಳಿಗೆ ಸದ್ಯದಲ್ಲೇ ಒಳ್ಳೆಯ ಲಾಭವಾಗಬಹುದು. ಆದರೆ ಅದೇ ಸಮಯಕ್ಕೆ ಅವರು ಹಿಂದುತ್ವ ರಾಜಕಾರಣವನ್ನು ಬಲಪಡಿಸುತ್ತಾರೆ. ಜಾತಿ ಮತ್ತು ಲಿಂಗ ಅಸಮಾನತೆಯ ಶ್ರೇಣೀಕೃತ ವ್ಯವಸ್ಥೆಯನ್ನು ತನ್ನಲ್ಲಡಗಿಸಿಕೊಂಡಿರುವ ಹಿಂದುತ್ವವನ್ನು ಬಲಪಡಿಸುತ್ತಾರೆ.

ದಲಿತ ಪ್ರಶ್ನೆಯನ್ನು ಬಿಜೆಪಿ ಹೇಗೆ ನಿರ್ವಹಿಸುತ್ತದೆಂಬುದಕ್ಕೆ ಈ ಒಂದು ಉದಾಹರಣೆಯೇ ಸಾಕು. ಈ ಹಿಂದೆ ಪ್ರಧಾನಮಂತ್ರಿ ನರೇಂದ್ರ ಮೋದಿಯುವರು ಬರೆದಿರುವ ಪುಸ್ತಕ 'ಕರ್ಮ ಯೋಗ' ವನ್ನು ಹಿಂತೆಗೆದುಕೊಳ್ಳಲಾಯಿತು. ಆ ಪುಸ್ತಕದಲ್ಲಿ ಅವರು ಹೀಗೆ ಹೇಳುತ್ತಾರೆ: "ಅವರು(ವಾಲ್ಮೀಕಿಗಳು) ತಮ್ಮ ಹೊಟ್ಟೆ ಹೊರೆದುಕೊಳ್ಳಲು ಈ ಕೆಲಸ ಮಾಡುತ್ತಿದ್ದಾರೆಂದು ನಾನು ನಂಬುವುದಿಲ್ಲ. ಇಲ್ಲದಿದ್ದರೆ ಅವರು ತಲೆಮಾರಿನಿಂದ ತಲೆಮಾರಿಗೆ ಈ ಕೆಲಸವನ್ನು ಮುಂದುವರೆಸುತ್ತಿರಲಿಲ್ಲ. ಯಾವುದೋ ಒಂದು ಘಟ್ಟದಲ್ಲಿ ಇಡೀ ಸಮಾಜದ ಸಂತೋಷಕ್ಕಾಗಿ ಮತ್ತು ದೇವರಿಗಾಗಿ ತಾವು(ವಾಲ್ಮೀಕಿಗಳು) ಇಂಥಾ ಕೆಲಸಗಳನ್ನು ಕಾಲಾನುಕಾಲಕ್ಕೆ ಮಾಡಬೇಕೆಂಬ; ದೇವರೇ ತಮಗೆ ಕರುಣಿಸಿರುವ ಕೆಲಸವೆಂಬ; ಶತಶತಮಾನಗಳಿಂದ ಶುಚಿಗೊಳಿಸುವ ಕಾರ್ಯವು ಆಂತರಿಕ ಆಧ್ಯಾತ್ಮಿಕ ಕ್ರಿಯೆಯಾಗಿದೆಯೆಂಬ ಜ್ಞಾನೋದಯವಾಗಿರಬೇಕು. ಅದ್ದರಿಂದಲೇ ಇದು ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುತ್ತಾ ಬಂದಿದೆ. ಅವರ ಪೂರ್ವಜರಿಗೆ ಬೇರೆ ಕೆಲಸದ ಅಥವಾ ವ್ಯಾಪಾರದ ಆಯ್ಕೆಯೇ ಇರಲಿಲ್ಲ ಎಂಬುದು ನಂಬಲಸಾಧ್ಯ"

ಇದೇ ವಿಚಾರದಲ್ಲಿ ಡಾ. ಅಂಬೇಡ್ಕರ್, ಕೆಲವು ಪಂಗಡಗಳು ಮಾತ್ರ ಇಂಥಾ ಕೀಳು ಮತ್ತು ಅವಮಾನಕರ ಕೆಲಸವನ್ನು ಮಾಡಬೇಕೆಂಬ ಸಾಮಾಜಿಕ ವ್ಯವಸ್ಥೆಯನ್ನು ತುಂಬಾ ತೀಕ್ಷ್ಣವಾಗಿ ಟೀಕಿಸುತ್ತಾರೆ. ಅಭಿವೃದ್ಧಿ ಹೊಂದಿದೆ ಮತ್ತು ಎಲ್ಲ ಸಮುದಾಯಗಳ ಬಗೆಗೆ ಕಾಳಜಿ ಇದೆ ಎನ್ನಲಾಗುವ ಗುಜರಾತಿನಲ್ಲಿ ದಲಿತರ ಪರಿಸ್ಥಿತಿ ಶೋಚನೀಯವಾಗಿದೆ. ಕೆಲವೆಡೆ ದೇವಾಲಯ ಪ್ರವೇಶಾವಕಾಶವಿಲ್ಲ. ದಲಿತರ ಮೇಲಿನ ದೌರ್ಜನ್ಯದ ಕೇಸುಗಳಲ್ಲಿ ಶೇಕಡಾವಾರು ಅತಿ ಕಡಿಮೆ ಸಂಖ್ಯೆಯಲ್ಲಿ ಅಪರಾಧ ನಿರ್ಣಯವಾಗುತ್ತದೆ. ಹೊಲಸನ್ನು ಇನ್ನೂ ಕೈಯಿಂದ ಶುಚಿಗೊಳಿಸುವ ಕೆಲಸ ಅಸ್ತಿತ್ವದಲ್ಲಿದೆ ಮತ್ತು ಅದನ್ನು ಮೋದಿಯವರು ವೈಭವೀಕರಿಸುತ್ತಾರೆ. ಕೆಲವು ಮುಖ್ಯ ಸ್ಥಳಗಳಲ್ಲಿ ನೀರನ್ನು ಪಡೆಯುವ ಅವಕಾಶವನ್ನು ನಿರಾಕರಿಸಲಾಗಿದೆ. ಗುಜರಾತಿನಲ್ಲಿ ಬೌದ್ಧ ಧರ್ಮಕ್ಕೆ ಸೇರಲಿಚ್ಛಿಸುವ ದಲಿತರಿಗೆ ಬೆದರಿಕೆ ಒಡ್ಡಿರುವ ಬಗ್ಗೆ ವರದಿಯಾಗಿದೆ. ಇವೆಲ್ಲ ಹಿಂದೂ ರಾಷ್ಟ್ರದ ಪ್ರಯೋಗಶಾಲೆ ಎನಿಸಿಕೊಂಡಿರುವ ಗುಜರಾತಿನಲ್ಲಿ ನಡೆಯುತ್ತಿರುವ ಕೆಲವು ವಿದ್ಯಮಾನಗಳು. ಅಲ್ಪಾವಧಿಯ ಅಧಿಕಾರದ ದುರಾಸೆಯಿಂದ ಡಾ. ಅಂಬೇಡ್ಕರರ ದೀರ್ಘಾವಧಿಯ ಗುರಿಗಳಾದ ಸಾಮಾಜಿಕ ನ್ಯಾಯ ಮತ್ತು ಜಾತಿ ವಿನಾಶಗಳೆಂಬ ಮಹಾನ್ ಮೌಲ್ಯಗಳೊಂದಿಗೆ ರಾಜಿ ಮಾಡಿಕೊಳ್ಳುವ ದಲಿತ ನಾಯಕತ್ವದ ಬಗ್ಗೆ ಏನನ್ನು ಹೇಳಲಿಕ್ಕಾಗುತ್ತದೆ? ಸಮುದಾಯಗಳನ್ನು ಮುನ್ನಡೆಸುವ ಸ್ಥಾನಗಳಲ್ಲಿರುವವರ ಅವಕಾಶವಾದಿತನ ಮತ್ತು ಮೌಲ್ಯಗಳ ಕೊರತೆಯ ಬಗ್ಗೆ ಈ ನಾಯಕರುಗಳು ಮತ್ತು ಅವರ ಅನುಯಾಯಿಗಳು ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ.

**(ಮೂಲತಃ ವೈದ್ಯವಿಜ್ಞಾನಿಯಾಗಿದ್ದ ರಾಂ ಪುನಿಯಾನಿಯವರು ಇತ್ತೀಚಿನ ವರ್ಷಗಳಲ್ಲಿನ ಕೋಮು ಅಶಾಂತಿಯನ್ನು ಕಂಡು, ಸಾಮಾಜಿಕ ಮತ್ತು ರಾಜಕೀಯ ಚಿಂತಕರಾಗಿ ಮಾಪಾರ್ಪಾಡಾದವರು.ಅವರೀಗ ಮುಂಬೈನಲ್ಲಿನ 'ಸಮಾಜ ಮತ್ತು ಧರ್ಮನಿರಪೇಕ್ಷತೆಅ ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿದ್ದಾರೆ)**

(ಕನ್ನಡಕ್ಕೆ: **ಟಿ.ಎಲ್. ರೇಖಾಂಬ**
ಕೃಪೆ: ***ಜನತಾ,*** ಮಾರ್ಚ್ ೯, ೨೦೧೪)

# ಅಂಬೇಡ್ಕರ್ ಆಶಯವನ್ನು ಮರೆತ ದಲಿತ ಸಂಘಟನೆಗಳು

–ಡಾ. ವಾಸುದೇವ ಬೆಳ್ಳಿ





**ಕ**ರ್ನಾಟಕದ ದಲಿತರಲ್ಲಿ ಬಹುಪಾಲು ದಲಿತರು ಇವತ್ತಿಗೂ ಹಳ್ಳಿಯ ಬದುಕಿನಲ್ಲೇ ಇದ್ದಾರೆ. ಇವತ್ತಿಗೂ ದಲಿತ ಜಾತಿಗಳು ಅಂಚಿನ ಜಾತಿಗಳೇ. ಇನ್ನೂ ಅವರು ಕೆಳಹಂತದ ಬದುಕನ್ನು ಬದುಕುತ್ತಿದ್ದಾರೆ. ಶಿಕ್ಷಣ, ಆರೋಗ್ಯದಲ್ಲಿ ಹಿಂದಿದ್ದಾರೆ. ಬಹುಪಾಲು ಜನರು ಕೃಷಿಕೂಲಿಯಾಳುಗಳು ಹಾಗೂ ಕಾರ್ಮಿಕರಾಗಿದ್ದಾರೆ. ಕೆಲವು ಅಸ್ಪೃಶ್ಯ ಜಾತಿಗಳಿಗೆ ದಿನಕೂಲಿ ಮತ್ತು ಫ್ಯಾಕ್ಟರಿಗಳಲ್ಲಿ ಅಸ್ಪೃಶ್ಯತೆಯ ಕಾರಣದಿಂದ ಕೆಲಸ ನೀಡದಂತ ಸ್ಥಿತಿ ಈಗಲೂ ಇದೆ. ಇಂದಿಗೂ ಹಲವಾರು ದಲಿತ ಜಾತಿಗಳು ತಮ್ಮ ಹಿಂದಿನ ಪಾರಂಪರಿಕ ಕುಲ ಕಸುಬುಗಳನ್ನು ಮಾಡುತ್ತಿದ್ದಾರೆ. ಬಿಟ್ಟಿ ಚಾಕರಿ ಮಾಡುವವರೂ ಇದ್ದಾರೆ. ಹಲವಾರು ಮಂದಿ ನಗರದ ನೈರ್ಮಲ್ಯದ ಕೆಲಸಗಳನ್ನು ಮಾಡುತ್ತಿದ್ದಾರೆ. ದಲಿತರಲ್ಲಿ ಒಂದಷ್ಟು ಜನರು ಆಧುನಿಕ ಶಿಕ್ಷಣ ಪಡೆದು ಸ್ವಪ್ರತಿಭೆಯಿಂದ ಮತ್ತು ಮೀಸಲಾತಿಯಿಂದ ಉದ್ಯೋಗ ಪಡೆದು ಪ್ರಗತಿ ಹೊಂದಿದ್ದಾರೆ.

ಸಾಂಪ್ರದಾಯಿಕ ಜಾತಿ ತಾರತಮ್ಯದ ಶೋಷಣೆಯ ಜೊತೆಗೆ, ಮಾತ್ರವಲ್ಲ ಆಧುನಿಕ ಹಕ್ಕುಗಳ ಬೇಡಿಕೆ ಹಾಗೂ ದಲಿತರ ಬದುಕಿನಲ್ಲಿ ಉಂಟಾದ ಬದಲಾವಣೆಯ ಕಾರಣದಿಂದ ದಲಿತರ ಮೇಲೆ ದೌರ್ಜನ್ಯಗಳು, ಬಹಿಷ್ಕಾರಗಳು, ಹಿಂಸೆ ಕೊಲೆಗಳು, ಅತ್ಯಾಚಾರ ಅವಮಾನಗಳು ನಿರಂತರ ನಡೆಯುತ್ತಿರುವುದು ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ವರದಿಯಾಗುತ್ತಲೇ ಇವೆ.

ದಲಿತ ಸಮಸ್ಯೆಗಳನ್ನು ಎದುರಿಸುವ ಕೆಲವು ಪ್ರಯತ್ನಗಳು ನಮ್ಮಲ್ಲಿ ನಡೆದಿಲ್ಲ ಎಂದಲ್ಲ. ಆದರೂ ಇಲ್ಲಿ ಯಾಕೆ ಪ್ರಬಲವಾದ ಚಿಂತನೆಗಳು ಹುಟ್ಟಿಕೊಳ್ಳಲಿಲ್ಲ?

೨೦ನೇ ಶತಮಾನದ ಪೂರ್ವಾರ್ಧದಲ್ಲಿ ಮೈಸೂರು ಸಂಸ್ಥಾನದಲ್ಲಿ ಗಾಂಧಿಯವರ ಅಸ್ಪೃಶ್ಯರ ಕುರಿತ ಕಾರ್ಯಕ್ರಮಗಳು ಪ್ರಭಾವ ಬೀರಿದ್ದವು. ಮೈಸೂರಿನಲ್ಲಿ ಹರಿಜನ ಸೇವಕ ಸಂಘ ಸ್ಥಾಪನೆಯಾದದ್ದಲ್ಲದೇ, ಅಸ್ಪೃಶ್ಯರನ್ನು ಹಿಂದೂ ಪದ್ಧತಿಯ ಮಾದರಿಯಲ್ಲಿ ಗೌರವದ ಬದುಕಿಗೆ ತರುವ ಕಾರ್ಯಕ್ರಮಗಳು ನಡೆದವು. ಈ ನೆಲೆಯಲ್ಲಿ ವಿಶೇಷವಾಗಿ ತೊಡಗಿಸಿಕೊಂಡ ಇಬ್ಬರು ಬ್ರಾಹ್ಮಣ ಸುಧಾರಕರೆಂದರೆ ಆರ್.ಗೋಪಾಲಸ್ವಾಮಿ ಅಯ್ಯರ್ ಹಾಗೂ ಅಲ್ಕೊಂಡವಿಲ್ಲ ಗೋವಿಂದಾಚಾರ್ಯ ಸ್ವಾಮಿ. ಈ ಕಾರ್ಯಕ್ರಮಗಳಿಂದ ದಲಿತರ ಸಾಮಾಜಿಕ, ಆರ್ಥಿಕ ಶೋಷಣೆಯ ಕುರಿತು ವಿಶೇಷ ಚರ್ಚೆ ನಡೆಯಲಿಲ್ಲ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಅಂಬೇಡ್ಕರ್ ಅವರ ಅನುಯಾಯಿ ಆಗಿದ್ದ ಶ್ಯಾಮ ಸುಂದರ್ ಅವರು ೧೯೬೮ರಲ್ಲಿ ಭೀಮಸೇನ ಎಂಬ ಸಂಘಟನೆಯನ್ನು ಸ್ಥಾಪಿಸಿ, ಅಸ್ಪೃಶ್ಯರ ಪ್ರಮುಖ ಬೇಡಿಕೆಗಳನ್ನು ಇಟ್ಟುಕೊಂಡು ತೀವ್ರ ಸ್ವರೂಪದ ಹೋರಾಟವನ್ನು ಮಾಡಿದರು. ದೇವರಾಜ ಅರಸು ಕಾಲದಲ್ಲಿ ಅವಮಾನಿತ ಹೀನ ಕೆಲಸಗಳ ನಿಷೇಧ ಕುರಿತು ಕೈಗೊಂಡ ಕ್ರಮಗಳು ಹಾಗೂ ಭೂಸುಧಾರಣೆಯ ಕಾನೂನು ದಲಿತರಲ್ಲಿ ಶಕ್ತಿ, ಧೈರ್ಯವನ್ನು ತುಂಬಿತು.

ಭಾರತದ ಸ್ವಾತಂತ್ರ್ಯೋತರ ಕಾಲಘಟ್ಟದಲ್ಲಿ ನಿರ್ದಿಷ್ಟವಾಗಿ ೧೯೭೦ರ ಹೊತ್ತಲ್ಲಿ ದಲಿತ ಚಿಂತನೆ, ಸಂಘಟನೆಗಳು ಆಧುನಿಕ ಶಿಕ್ಷಣ ಪಡೆದ ಯುವಕರಿಂದ ಆರಂಭವಾಯಿತು. ಶಿಕ್ಷಣದ ಜೊತೆಗೆ ಆಧುನಿಕ ಉದ್ಯೋಗಳು, ನಗರೀಕರಣ, ಹೊಸಬಗೆಯ ಸಂಪರ್ಕ ಸಾಧನಗಳು, ಪ್ರಜಾಪ್ರಭುತ್ವ, ಹಕ್ಕು, ಕಾನೂನುಗಳು ಈ ಹೊಸ ಬಗೆಯ ಸಂಘಟನೆ, ಹೋರಾಟ, ಚಿಂತನೆಗಳಿಗೆ ಕಾರಣವಾಗಿವೆ. ಸಮಾನತೆ ಮತ್ತು ಗೌರವಯುತ ಬದುಕಿನ ಕುರಿತು ಹೊರ ದೇಶಗಳಿಂದ ಬಂದ ಚಿಂತನೆಗಳ ಜೊತೆಗೆ ಫುಲೆ, ಪೆರಿಯಾರ್, ಅಂಬೇಡ್ಕರ್‌ರಂತ ಮಹಾನ್ ನಾಯಕರ ಚಿಂತನೆಗಳು ಈ ಚಳುವಳಿಗಳಿಗೆ ಕಾರಣವಾದವು. ೧೯೭೩ರಿಂದಲೇ ಆರಂಭಗೊಂಡು, ೧೯೭೮ಕ್ಕೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯೆಂದು ಹೆಸರಾದ ಸಂಘಟನೆ ಕರ್ನಾಟಕದಲ್ಲಿ ಪ್ರಬಲ ಸಮುದಾಯಗಳ ದರ್ಪ ದೌರ್ಜನ್ಯದ ವಿರುದ್ಧದ ಶಕ್ತಿಯಾಗಿ ಬೆಳೆಯಿತು. ಅದು ಪ್ರಬಲ ಜಾತಿಗಳ ವಿರುದ್ಧದ ಸಂಘಟನೆಯಾಗಿ ಮಾತ್ರ ಇರಲಿಲ್ಲ. ದಲಿತರಿಗೆ ಶಿಕ್ಷಣ, ತಿಳುವಳಿಕೆ, ಹೋರಾಟವನ್ನು ಕಲಿಸುವ ಕೆಲಸವನ್ನು ಮಾಡಿತು. ದಸಂಸ ಕೈಗೊಂಡ ದೌರ್ಜನ್ಯದ ವಿರುದ್ಧದ ಪ್ರತಿಭಟನೆ ಮತ್ತು ಭೂಹೋರಾಟಗಳು ಇಂದಿಗೂ ನೆನಪಿಸಿಕೊಳ್ಳುವಂತದ್ದು.



ದಲಿತ ವರ್ಗದ ಶಿಕ್ಷಣವಂತರಿಂದ ಆರಂಭವಾದ ಈ ಚಳುವಳಿ ವಿಶೇಷವಾಗಿ ಅಂಬೇಡ್ಕರರಿಂದ ಪ್ರಭಾವಿತವಾಗಿತ್ತು. ಫುಲೆ, ಪೆರಿಯಾರ, ಲೋಹಿಯ, ಮಾರ್ಕ್ಸ್ ಈ ಚಿಂತಕರ ಬಗ್ಗೆ ಒಲವು ಇತ್ತು. ಉದ್ಯೋಗಿಗಳು, ಉಪನ್ಯಾಸಕರು, ಪ್ರಾಧ್ಯಾಪಕರಿಂದ ಆರಂಭಗೊಂಡ ಈ ಸಂಘಟನೆ ಯಾಕೆ ಬೆಳೆಯಲಿಲ್ಲ? ಕರ್ನಾಟಕದ ಜಾತಿಯ ಸಾಮಾಜಿಕ ಸಮಸ್ಯೆಗಳನ್ನು ಯಾಕೆ ಒಳಗೊಳ್ಳಲು ಸೋತಿತು? ಮುಖ್ಯ ಸ್ಫೂರ್ತಿ, ಪ್ರೇರಣೆಯಾಗಿ ಒದಗಿ ಬಂದ ಅಂಬೇಡ್ಕರ್ ಚಿಂತನೆಗಳನ್ನು ಇಟ್ಟುಕೊಂಡು ಕರ್ನಾಟಕದ ಜಾತಿಯ ಹಿಂಸೆ, ದೌರ್ಜನ್ಯ, ಬಹಿಷ್ಕಾರ, ಬಡತನ, ಸಾಮಾಜಿಕ ಗೌರವ, ರಾಜಕಾರಣದ ಪ್ರಶ್ನೆಗಳನ್ನು ಯಾಕೆ ರೂಪಿಸಲು ಅದಕ್ಕೆ ಸಾಧ್ಯವಾಗಲಿಲ್ಲ?

ಇದಕ್ಕೆ ಒಂದೆರಡು ಕಾರಣಗಳನ್ನು ಹೀಗೆ ಗುರುತಿಸಬಹುದು.

೧. ಅದು ಸ್ಪಷ್ಟ ಸೈದ್ಧಾಂತಿಕ ನೆಲೆ ಮತ್ತು ಚೌಕಟ್ಟುಗಳನ್ನು ರೂಪಿಸಿಕೊಳ್ಳುವ ಮೊದಲು ಇತರ ರಾಜಕೀಯ ಪಕ್ಷಕ್ಕೆ ಬೆಂಬಲ ನೀಡಲು ಮುಂದಾಯಿತು. ದಲಿತ ಸಮಸ್ಯೆಗಳನ್ನು ಪರಿಹರಿಸಲು ರಾಜಕೀಯ ಶಕ್ತಿ ಬೇಕು. ಆದರೆ, ದಸಂಸವೇ ರಾಜಕೀಯ ಶಕ್ತಿಯಾಗಿ ಬೆಳೆಯಬೇಕಿತ್ತು. ತನ್ನ ಅಜೆಂಡಾಗಳನ್ನು ಇನ್ನೊಂದು ರಾಜಕೀಯ ಪಕ್ಷ ಪ್ರತಿನಿಧಿಸಲಾರದು ಮತ್ತು ಪರಿಹರಿಸಲಾರದು. ಮೂಲತ: ಕರ್ನಾಟಕದಲ್ಲಿ ಇದ್ದ ಪಕ್ಷಗಳು ಶೋಷಣೆಗೆ ಕಾರಣವಾಗಿದ್ದ ಪ್ರಬಲ ಜಾತಿಗಳ ಹಿಡಿತದಲ್ಲಿತ್ತು. ಹಾಗಾಗಿ ರಾಜಕೀಯ ಪಕ್ಷವನ್ನು ಬೆಂಬಲಿಸುವ ವಿಚಾರದಲ್ಲಿ ದಸಂಸ ಸಂಘಟನೆಯೊಳಗಡೇನೇ ಒಮ್ಮತ ಇರಲಿಲ್ಲ. ಇದರಿಂದ ಸಂಘಟನೆ ಹೋಳಾಯಿತು. ಒಮ್ಮೆ ಹೋಳಾದ ಸಂಘಟನೆ ನಂತರ ನಿರಂತರ ಛಿದ್ರಗೊಳ್ಳುತ್ತಾ ಹೋಯಿತು. ಇದರಿಂದ ಸಾಮುದಾಯಿಕ ಆಸಕ್ತಿಗಳು ಹಿಂದಕ್ಕೆ ಸರಿದು ವೈಯಕ್ತಿಕ ಆಸಕ್ತಿಗಳು ಮುಖ್ಯವಾದವು. ಸಂಘಟನೆಯು ಸೈದ್ಧಾಂತಿಕ ನೆಲೆ ಹೊರಟುಹೋಯಿತು. ವೈಯಕ್ತಿಕ ಗುಂಪುಗಳಾಗಿ ಒಡೆಯಲು ಶುರುವಾದ ನಂತರ ಒಂದೊಂದು ರಾಜಕೀಯ ಪಕ್ಷದೊಂದಿಗೆ ಸಂಪರ್ಕ ಬೆಳೆಸಿ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುವ ಹಂತಕ್ಕೆ ಇಳಿದವು. ಪ್ರತಿಯೊಂದು ಗುಂಪುಗಳು ಅಂಬೇಡ್ಕರರ ಭಿನ್ನ ಹೆಸರುಗಳನ್ನು ಮತ್ತು ದಸಂಸದ ನಾಯಕರ ಹೆಸರುಗಳನ್ನು ಇಟ್ಟುಕೊಂಡವು. ಇಲ್ಲಿಯ ಭಿನ್ನತೆಗೆ ಯಾವುದೇ ತಾತ್ವಿಕ ಕಾರಣಗಳಿಲ್ಲ. ಕೆಲವೊಮ್ಮೆ ಯಾವುದಾದರೂ ಒಂದು ವಿಷಯದ ಮೇಲೆ ಪ್ರತಿಭಟನೆ ಮಾಡುವುದು, ಅಂಬೇಡ್ಕರ್ ಜಯಂತಿ ಆಚರಿಸುವುದು. ಸಂವಿಧಾನ ದಿನ ಆಚರಿಸುವುದು ಹೀಗೆ ಕೆಲವು ಕಾರ್ಯಕ್ರಮಗಳನ್ನು ಬಿಟ್ಟು ವಿಶಾಲ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲಿಲ್ಲ. ಅಂಬೇಡ್ಕರರು ಖಂಡಿತಾ ಇದನ್ನು ಬಯಸಿರಲಿಲ್ಲ.

೨. ದಲಿತ ಸಾಹಿತಿ ಮತ್ತು ಬುದ್ಧಿಜೀವಿ ವರ್ಗ. ದಸಂಸ ಶಿಕ್ಷಣ ಪಡೆದ ಜನರ ಸಂಘಟನೆಯಾಗಿದ್ದರೂ ಅದರ ನಿಯಂತ್ರಕ ಶಕ್ತಿ ಸಾಹಿತಿ ಬುದ್ಧಿಜೀವಿ ವರ್ಗ ಆಗಿತ್ತು. ಸಾಹಿತ್ಯ ಬರವಣಿಗೆಯನ್ನು ಹೊಸ ಕಸುಬಾಗಿ ಗಳಿಸಿಕೊಂಡ ಈ ವರ್ಗ ಆರಂಭದಲ್ಲಿ ಸಂಘಟನೆಯಲ್ಲಿ ತೊಡಗಿದ್ದರೂ ಸಾಹಿತ್ಯವೇ ಅದರ ಆಸಕ್ತಿಯ ಮತ್ತು ಐಡೆಂಟಿಟಿಯ ಕ್ಷೇತ್ರವಾಗಿತ್ತು. ಹಾಗಾಗಿ ದಲಿತಾನುಭವದ ಮಾನದಂಡದಲ್ಲಿ ದಲಿತೇತರರಿಂದ ತನ್ನನ್ನು ಪ್ರತ್ಯೇಕಿಸಿಕೊಳ್ಳುವ ಕನ್ನಡ ದಲಿತ ಸಾಹಿತ್ಯ ಪಂಥ ಸಿಟ್ಟಿನ, ಶೋಷಣೆಯ, ಹಸಿವಿನ, ದೌರ್ಜನ್ಯದ, ಸಂಸ್ಕೃತಿಯನ್ನು ಬಿಂಬಿಸುವ ಕವನ ಕಥನಗಳನ್ನು ಕಟ್ಟುತ್ತದೆ. ಹಾಗಾಗಿ ಸಾಹಿತ್ಯವೂ ಸಮಾಜದ ಧ್ವನಿ. ಇಷ್ಟು ವರ್ಷಗಳಲ್ಲಿ ದಲಿತ ಸಾಹಿತ್ಯವನ್ನು ದಲಿತ ಚಳುವಳಿ ಎಂಬ ಅರ್ಥದಲ್ಲಿಯೇ ಪರಿಭಾವಿಸಿಕೊಂಡು ಬರಲಾಗಿದೆ. ಅಂದರೆ ಇದರ ತಾತ್ಪರ್ಯ ದಲಿತ ವರ್ಗ ಸಾಹಿತಿ ವರ್ಗವಾಗಿ ಗುರುತಿಸಿಕೊಳ್ಳುವುದು ತಪ್ಪು ಎಂದಲ್ಲ.

ಮಾತ್ರವಲ್ಲ ಕನ್ನಡದ ದಲಿತ ಲೇಖಕರು ಕೆಲವು ಉತ್ತಮವಾದ ಕೃತಿಗಳನ್ನು ಬರೆದಿದ್ದಾರೆ. ಆದರೆ ಕನ್ನಡ ದಲಿತ ಸಾಹಿತ್ಯ ಕಟ್ಟುವ ಕಥನಗಳು ಒಂದು ಸಾಹಿತ್ಯಿಕ ಕಸುಬಾಗಿ ಬರುವಂತದ್ದು. ಸಿಟ್ಟು, ಪ್ರತಿರೋಧ, ಶೋಷಣೆ, ಬಡತನದ ಚಿತ್ರಣಗಳು ಕೃತಿಯಲ್ಲಿ ಹೇಗೆ ಮೂಡಿಬಂದಿದೆ ಎಂಬ ಕಲಾ ವಿಮರ್ಶೆಯೇ ಇಲ್ಲಿ ಮುಖ್ಯವಾಗುತ್ತದೆ. ಅಂದರೆ ದಲಿತಪರ ನೆಲೆಯಲ್ಲಿ ಗುರುತಿಕೊಳ್ಳುವ ದಲಿತ ಸಾಹಿತ್ಯ ಮತ್ತು ವಿಮರ್ಶೆ ಕರ್ನಾಟಕದಲ್ಲಿ ಜೀವಂತವಾಗಿರುವ ದಲಿತರ ಸಮಸ್ಯೆಗಳನ್ನು ವಿವರಿಸಿಕೊಳ್ಳಲಿಲ್ಲ. ಈ ದೃಷ್ಟಿಯಿಂದ ದಸಂಸದಲ್ಲಿ ನಿಯಂತ್ರಕ ಶಕ್ತಿಯಾಗಿದ್ದ ಈ ಬುದ್ಧಿಜೀವಿ ವರ್ಗ ತನ್ನ ವರ್ಗ ಆಸಕ್ತಿಯನ್ನು ಬೆಳೆಸುವುದರಿಂದ ಈ ಸಂಘಟನೆಯ ಬೆಳವಣಿಗೆಗೆ ತೊಡಕಾಯಿತು. ಇವತ್ತಿಗೂ ಕೂಡಾ ಕರ್ನಾಟಕದ ದಲಿತ ಚಳುವಳಿ ಎಂದರೆ ದಲಿತ ಸಾಹಿತ್ಯ ಎಂದು ಭಾವಿಸುತ್ತೇವೆ. ಇದು ದಲಿತ ಚಳುವಳಿಯನ್ನು ದಲಿತ ಸಾಹಿತ್ಯ ಅಪಹರಿಸಿದಂತೆ ಆಗಿದೆ. ಆದ್ದರಿಂದ ಸಾಹಿತ್ಯದ ನಿಯಂತ್ರಣವನ್ನು ಮೀರಿ ದಲಿತ ಚಳುವಳಿ ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರಗಳಿಗೆ ಬರಬೇಕು. ಈ ವಿಶಾಲ ನೆಲೆಯಲ್ಲಿ ದಲಿತ ಚಳುವಳಿಯನ್ನು ವಿವರಿಸಿಕೊಳ್ಳುವ ಅಗತ್ಯವಿದೆ.

೩. ದಲಿತ ಸಂಘಟನೆಗಳು ದುರ್ಬಲವಾಗಲು ಇನ್ನೊಂದು ಕಾರಣ ಆಧುನಿಕ ವಿದ್ಯಾವಂತರಲ್ಲಿ ಇರುವ ವ್ಯಕ್ತಿವಾದಿ ಪ್ರಜ್ಞೆ. ಆಧುನಿಕ ಶಿಕ್ಷಣ ಮತ್ತು ಪಾಶ್ಚಾತ್ಯ ಮಾದರಿಯ ಬದುಕು ವೈಯಕ್ತಿಕ ನೆಲೆಯ ಪ್ರಜ್ಞೆಗೆ ಕರೆತರುತ್ತದೆ. ಮನುಷ್ಯ ತಾನು ತನ್ನ ಕುಟುಂಬ ಎನ್ನುವ ಸೀಮಿತ ಚೌಕಟ್ಟಿನೊಳಗೆ ಚಲಿಸುತ್ತಾನೆ. ಹೀಗೆ ಸಾಮುದಾಯಿಕ ಭಾವನೆಯ ಶಿಥಿಲತೆ ಕೂಡ ದಲಿತ ಚಳುವಳಿ ಬೆಳೆಯದಿರಲು ಕಾರಣವಾಗಿರಬಹುದು.

೪. ದಲಿತ ಜಾತಿಗಳಲ್ಲಿಯೇ ಇರುವ ಮೇಲು ಕೀಳು ಭಾವನೆ ಸಂಘಟನೆಗೆ ಮಾರಕ. ಈ ಜಾತಿ ಭಾವನೆಯನ್ನು ಹೋಗಲಾಡಿಸುವ ಕೆಲಸವನ್ನು ಸಂಘಟನೆಗಳು ಮಾಡಿದರೆ ಒಗ್ಗಟ್ಟು ಸಾಧ್ಯ. ಮೂಲತ: ಆರ್ಯ ನೆಲೆಯಿಂದ ಹುಟ್ಟಿಕೊಳ್ಳುವ ಜಾತಿ ಭಾವನೆ ಒಗ್ಗಟ್ಟಿಗೆ ಹೇಗೆ ತೊಡಕು ಎಂಬುದನ್ನು ಅಂಬೇಡ್ಕರ್ ವಿವರಿಸಿದ್ದಾರೆ.

ಅಂಬೇಡ್ಕರ್ ತಮಗೆ ಸೈದ್ಧಾಂತಿಕವಾಗಿ ಸರಿಕಾಣುವ ರಾಜಕೀಯ ಶಕ್ತಿಯೊಂದನ್ನು ರೂಪಿಸಲು ಪ್ರಯತ್ನ ಪಟ್ಟರು ಮತ್ತು ಜನಸಾಮಾನ್ಯ ದಲಿತರ ಸಮಸ್ಯೆಗಳನ್ನು ನಿವಾರಿಸುವ ಚಿಂತನೆಗಳನ್ನು ಮಾಡುತ್ತಿದ್ದರು. ಬ್ರಿಟಿಷ್ ಕಾಲ ಮತ್ತು ನಂತರದ ಸಂಸದೀಯ ವ್ಯವಸ್ಥೆಯಲ್ಲಿ ದಲಿತರಿಗೆ ಭಿನ್ನ ಅವಕಾಶ ಹಾಗೂ ರಕ್ಷಣೆಗಾಗಿ ಕಾನೂನು ರೂಪಿಸಲು ಪಟ್ಟ ಪ್ರಯತ್ನ, ರಾಜಕೀಯ ಶಕ್ತಿಗಾಗಿ ಮಾಡಿದ ಹೋರಾಟ, ದಲಿತರ ಸಾಮಾಜಿಕ ಗೌರವದ ಐಡೆಂಟಿಟಿಗಾಗಿ ಅವರು ಮಾಡಿದ ಚಿಂತನೆ ಈ ಮುಂತಾದ ಕೆಲಸಗಳು ಶೋಷಿತರ ಉದ್ಧಾರಕ್ಕಾಗಿ ಮಾಡಿದವುಗಳು. ಮುಖ್ಯವಾಗಿ ದಲಿತ ಪರಿಕಲ್ಪನೆ ಹುಟ್ಟಿ ವಿವಿಧ ಹೆಸರು ಮತ್ತು ಹಂತಗಳಲ್ಲಿ ಬೆಳೆದು ಬಂದದ್ದು–ಯಾರು ಈ ಸಮಾಜದಲ್ಲಿ ಜಾತಿಯ ಕಾರಣಕ್ಕಾಗಿ ಅವಕಾಶ ವಂಚಿತರಾಗಿ ದೌರ್ಜನ್ಯಕ್ಕೆ ಒಳಗಾಗಿ ಅವಮಾನಿತರಾಗಿ ಬದುಕುತ್ತಿದ್ದಾರೋ ಅವರನ್ನು ಮೇಲೆತ್ತುವ ಕಾರಣಕ್ಕಾಗಿ. ದಲಿತ ಪರಿಕಲ್ಪನೆಯ ಹುಟ್ಟಿನ ಚಾರಿತ್ರಿಕ ಕಾರಣಗಳನ್ನು ಇಂದು ಮರೆಯಲಾಗಿದೆ. ಅದೊಂದು ರಾಜಕೀಯ ಪರಿಕಲ್ಪನೆಯಾಗಿ ಬಂತೇ ಹೊರತು ಸಾಹಿತ್ಯಿಕ ಪರಿಕಲ್ಪನೆಯಾಗಿ ಅಲ್ಲ.

ಅಂಬೇಡ್ಕರ್ ಬರೀ ದಲಿತರ ನಾಯಕ, ಹೋರಾಟಗಾರ ಮಾತ್ರ ಅಲ್ಲ. ಅವರು ಅಸಮಾನ ವ್ಯವಸ್ಥೆಯಲ್ಲಿ ಕೊನೆಯಲ್ಲಿರುವವರನ್ನು ಮೊದಲ್ಗೊಂಡು ಎಲ್ಲ ವಂಚಿತ ಜನರನ್ನು ಕುರಿತು ಚಿಂತನೆ ಮಾಡಿದ್ದಾರೆ. ಆರ್ಥಿಕ, ಕಾರ್ಮಿಕ, ಕಾನೂನು, ಪ್ರಜಾಪ್ರಭುತ್ವ ಈ ಮುಂತಾದ ಕ್ಷೇತ್ರದಲ್ಲಿ ಅವರ ಕೊಡುಗೆ ಗಣನೀಯವಾದುದು. ಅವರು ದಲಿತ, ಹಿಂದುಳಿದ, ಬಡವ, ಅಲ್ಪಸಂಖ್ಯಾತ, ಮಹಿಳೆ ಎಲ್ಲರನ್ನು ಒಳಗೊಳ್ಳುವ ಚಿಂತನೆಯನ್ನು ನಡೆಸಿದರು.

ಅಂಬೇಡ್ಕರ್ ಯಾವುದೇ ಟೀಕೆಗಳಿಗೆ ಆಳವಾದ ತಿಳುವಳಿಕೆಯಿಂದ ಉತ್ತರ ನೀಡುತ್ತಿದ್ದರು. ಅವರಲ್ಲಿದ್ದ ಪಾಂಡಿತ್ಯ, ಗಂಭೀರತೆ ಮತ್ತು ಬದ್ಧತೆ ಅವರನ್ನು ನಾಯಕನನ್ನಾಗಿ ಮಾಡಿತು. ಯಾವುದೇ ವಿಷಯದ ಮೇಲೆ ಹಕ್ಕು ಸ್ಥಾಪನೆ ಮಾಡಬಾರದು. ದಲಿತ ಸಂಘಟನೆ ಬೆಳೆಯದಿರಲು ಇದು ಒಂದು ಕಾರಣ. ಯಾವ ಸಂಘಟನೆ ತನ್ನನ್ನು ಟೀಕೆಯಿಂದ ರಕ್ಷಿಸಿಕೊಳ್ಳುತ್ತದೊ ಅದು ಬೆಳೆಯಲಾರದು.

**(ಮಂಗಳೂರಿನ ಸರ್ಕಾರಿ ಪ.ಪೂ. ಕಾಲೇಜೊಂದರಲ್ಲಿ ಕನ್ನಡ ಉಪನ್ಯಾಸಕರಾಗಿರುವ ಡಾ. ವಾಸುದೇವ ಬೆಳ್ಳೆಯವರು ದಲಿತ ಚಿಂತನೆ ಮತ್ತು ರಾಜಕಾರಣ ಕ್ಷೇತ್ರಗಳಲ್ಲಿ ವ್ಯಾಪಕ ಅಧ್ಯಯನ ನಡೆಸಿದ್ದಾರೆ)**

# ದಲಿತ ಸಿ.ಎಂ. ಪ್ರಶ್ನೆಯ ಸುತ್ತಮುತ್ತ


**–ರುದ್ರಪ್ಪ ಹನಗವಾಡಿ**





**ಕ**ಳೆದ ಎರಡು ತಿಂಗಳುಗಳಿಂದ ಕರ್ನಾಟಕದಲ್ಲಿ ದಲಿತ ಮುಖ್ಯಮಂತ್ರಿ ಬೇಕು ಎಂಬ ವಾದವನ್ನು ಮುಂದಿಟ್ಟುಕೊಂಡು ಕೆಲವು ದಲಿತ ಮುಖಂಡರು ವಾದ ಮಾಡುತ್ತಿದ್ದಾರೆ. ಇದೆಲ್ಲ ಚರ್ಚೆಗಳು ನಡೆಯುತ್ತಿರುವಾಗಲೇ ದಲಿತ ಮಹಿಳಾ ಸಿ.ಎಂ. ಬೇಕೆಂಬ ವಾದವನ್ನು ತೇಲಿಬಿಟ್ಟಿದ್ದಾರೆ. ಈ ಚರ್ಚೆ ನಡೆಯುತ್ತಿರುವಾಗಲೇ ಸಿ.ಎಂ. ಕುರ್ಚಿ ಖಾಲಿ ಇಲ್ಲ ಎಂದು ಕಾಂಗ್ರೆಸ್ ಪಕ್ಷದ ವರಿಷ್ಟರಲ್ಲಿ ಒಬ್ಬರು ಸ್ಪಷ್ಟಪಡಿಸಿದ್ದಾರೆ. ಈಗ ಈ ರೀತಿಯ ಬೇಡಿಕೆಗಳಲ್ಲಿ ಹಾಲಿ ಇರುವ ಮುಖ್ಯಮಂತ್ರಿಯವರನ್ನು ಅಭದ್ರಗೊಳಿಸುವ ಹುನ್ನಾರವಡಗಿದೆ ಎಂದು ದಲಿತ ಮುಖಂಡರನೇಕರು ಹೇಳಿರುವುದನ್ನ ಕೂಡ ಕೇಳಿಸಿಕೊಳ್ಳುತ್ತಿದ್ದೇವೆ.

ಈ ಹಿನ್ನೆಲೆಯನ್ನು ಗಮನಿಸಿದರೆ ಆಯಾ ಜಾತಿಯ ನಾಯಕರು ಬಂದಾಗ ಆಯಾ ಜಾತಿಯ ಜನರ ಅಭಿವೃದ್ಧಿ ಸಾಧ್ಯವೆನ್ನುವ ವಾದವನ್ನು ಒಪ್ಪಿಕೊಂಡಂತಾಗುತ್ತದೆ. ಅದು ಪೂರ್ಣ ಸತ್ಯವೂ ಅಲ್ಲ ಸತ್ವದ್ದೂ ಅಲ್ಲ. ಸರ್ಕಾರದ ಅಧಿಕಾರಿಗಳಾಗಲೀ, ಮಂತ್ರಿಗಳಾಗಲೀ, ಮುಖ್ಯಮಂತ್ರಿಯಾಗಲಿ ರಾಜ್ಯದ ಎಲ್ಲ ಜನರ ಹಿತ ಕಾಯುವ ಹೊಣೆಹೊತ್ತು ಪ್ರತಿಜ್ಞಾ ವಿಧಿಯನ್ನು ಸಂವಿಧಾನದ ಅಡಿಯಲ್ಲಿ ಪ್ರಮಾಣವಚನ ಸ್ವೀಕರಿಸಿರುತ್ತಾರೆ. ಆದರೆ ಇಂದು ಅಂಬೇಡ್ಕರ್ ಹೋರಾಟದ ಹೆಸರಿನಲ್ಲಿ ಸಂಘಟಿತರಾದ ಕೆಲವು ವ್ಯಕ್ತಿಗಳು ಸಂವಿಧಾನ ಬಾಹಿರವಾದ ಬಾಲಿಷ ವಾದಗಳನ್ನು ಮಾಡುತ್ತಾ ದಲಿತ ಮುಖ್ಯಮಂತ್ರಿ ಚರ್ಚೆ ಮುಂದಿಟ್ಟುಕೊಂಡು ಜನರನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ.



ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕ ಪ್ರೊ. ಬಿ. ಕೃಷ್ಣಪ್ಪನವರು ರೂಪಿಸಿದ ಹೋರಾಟದ ಮೂಸೆಯಲ್ಲಿ ಬಂದವರು ಅಂಬೇಡ್ಕರ್ ಆಶಯಗಳನ್ನು ದಲಿತರು, ಬಡವರ ಏಳೆಗೆಗೆ ದುಡಿಯುವ ನಾಯಕರ ಅಗತ್ಯವನ್ನು ಮನಗಂಡಿದ್ದಾರೆ. ಅಂತಹ ನಾಯಕರಾಗಿ ಪ್ರಸ್ತುತ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಾರ್ಯನಿರ್ವಹಿಸುತ್ತಿದ್ದಾರೆ.

ಮುಖ್ಯಮಂತ್ರಿಯಾಗಿ ಹಣಕಾಸಿನ ಜವಾಬ್ದಾರಿ ಹೊತ್ತ ಸಿಎಂ. ನೀಡಿದ ಹಣದ ಸದ್ಬಳಕೆಯ ಬಗ್ಗೆ ಜನಮಾನಸದಲ್ಲಿನ ಹೋರಾಟಗಾರರು ಸಂಘ ಸಂಸ್ಥೆಗಳು ಪ್ರಯತ್ನಿಸಬೇಕಾಗಿದೆ. ಕಳೆದ ಬಜೆಟ್‌ನಲ್ಲಿ ನೀಡಿದ ಹಣದಲ್ಲಿ ಹಾಲಿ ಎಷ್ಟು ಹಣ ಬಿಡುಗಡೆಯಾಗಿದೆ, ಎಷ್ಟು ಹಣ ಯಾವ ಕಾರಣಕ್ಕಾಗಿ ಬಿಡುಗಡೆಯಾಗಿಲ್ಲ ಇವುಗಳ ಬಗ್ಗೆ ಚರ್ಚೆ ಎತ್ತಿಕೊಂಡರೆ, ಬಡವರ, ದಲಿತರ ವಿರೋಧಿಗಳು ಯಾರು ಎಲ್ಲಿದ್ದಾರೆ ಮತ್ತೆ ಹೇಗೆ ಯಥಾಸ್ಥಿತಿ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವ ಹುನ್ನಾರದಲ್ಲಿ ತೊಡಗಿದ ವಿವಿಧ ಇಲಾಖೆಗಳ ಬಣ್ಣ ಬಯಲಾಗುತ್ತದೆ. ಇದನ್ನು ಬರಿ ಮುಖ್ಯಮಂತ್ರಿ ಮಾತ್ರ ಮಾಡಿದರೆ ಸಾಲದು, ಅವರ ಮಂತ್ರಿ ಮಂಡಲದ ಎಲ್ಲಾ ಸದಸ್ಯರು ಸಕ್ರಿಯವಾಗಿ ಮಾಡಬೇಕು, ಆಡಳಿತ ಯಂತ್ರವನ್ನು ಕ್ರಿಯಾಶೀಲವಾಗಿಸಬೇಕು. ಅದಕ್ಕಾಗಿ ಹೋರಾಟದ ಹಿನ್ನೆಲೆಯ ನಾಯಕರು ಸಮಸ್ಯೆಗಳನ್ನು ವಿಶ್ಲೇಷಿಸಿ ಬೆಳಕು ಚೆಲ್ಲಬೇಕು.

ದಲಿತ ಸಿಎಂ ಬೇಕೇ ಬೇಕು ಎಂದು ಕೇಳುವುದು ದಲಿತರ ಮತ್ತು ದಲಿತನಾಯಕರಿಗೆ ಮಾಡುತ್ತಿರುವ ಅವಮಾನ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಮಾಧಾನಕರ ಬಹುಮಾನಗಳನ್ನು ನೀಡಿದಂತೆ ಉಪಾಧ್ಯಕ್ಷ, ಉಪ ಮುಖ್ಯಮಂತ್ರಿ ಎಂಬ ಹುದ್ದೆಗಳಿಗೆ ಹಾತೊರೆಯುವ ಸ್ವಾರ್ಥಿಗಳು ಇದರಿಂದ ಹಿಂದೆ ಸರಿದರೆ ಅಂಬೇಡ್ಕರ್ ಚಿಂತನೆಯ ಗಟ್ಟಿಕಾಳುಗಳು ಮುಂದೊಂದು ದಿನ ಮುಖ್ಯಮಂತ್ರಿ,

ಪ್ರಧಾನಮಂತ್ರಿಗಳಾಗುವುದನ್ನ ಯಾರು ತಡೆಯಲಾಗದು.

ಅದನ್ನು ಬಿಟ್ಟು 'ಹೊತ್ತಲ್ಲದ ಹೊತ್ತಿನಲ್ಲಿ' ದಲಿತ ಮುಖ್ಯಮಂತ್ರಿ ಬೇಕೇಬೇಕು ಎನ್ನುವ ಅಪಕ್ವವಾದ ವಾದವು ಜನರಿಗೆ ಮನರಂಜನೆ ನೀಡುತ್ತಾ ಜಾತಿವಾದಿಗಳಿಗೆ ದಾಳಗಳಾಗಿ ಉಪಯೋಗಿಸಲ್ಪಡುತ್ತದೆ ಎಂಬ ಅನುಮಾನ ಮೂಡಿ ಬರುತ್ತಿದೆ

ಬುದ್ಧ, ಬಸವ, ಗಾಂಧಿ, ಪೆರಿಯಾರ್, ಕುದ್ಮಲ್ ರಂಗರಾವ್, ಗೋಪಾಲಸ್ವಾಮಿ ಅಯ್ಯರ್, ನಾರಾಯಣಗುರು, ಜ್ಯೋತಿಬಾ ಫುಲೆ, ಕೊಲ ಲಕ್ಷ್ಮಿನಾರಾಯಣ ಕಾರಂತ ಇನ್ನೂ ಅನೇಕ ಉಚ್ಚ ಜಾತಿಯಲ್ಲಿ ಹುಟ್ಟಿದ್ದರೂ, ಸಮಾಜದಲ್ಲಿನ ಅಸಮಾನತೆ ಮತ್ತು ಅಸ್ಪೃಶ್ಯತೆ ಹಾಗೂ ಲಿಂಗ ಸಮಾನತೆಗಾಗಿ ಹೋರಾಡಿರುವ ಚರಿತ್ರೆಯು ನಮ್ಮ ಕಣ್ಣ ಮುಂದಿದೆ. ಹೀಗಿರುವಾಗ ದಲಿತ ಜಾತಿಗಳಲ್ಲಿ ಹುಟ್ಟಿದವನೊಬ್ಬ ಅಧಿಕಾರಕ್ಕೆ ಬಂದರೆ ಅವರಿಗೆ ಮುಕ್ತಿ ದೊರೆಯುತ್ತದೆ ಎಂದು ವಾದ ಮಂಡಿಸುವ ನಮ್ಮ ಸ್ನೇಹಿತರು ಕರ್ನಾಟಕ ಮತ್ತು ದೇಶದ ಇತರೆ ಹೋರಾಟಗಳ ಚರಿತ್ರೆಯನ್ನು ಅವಲೋಕಿಸಿದರೆ ಒಳ್ಳೆಯದು.

**(ನಿವೃತ್ತ ಕೆ.ಎ.ಎಸ್. ಅಧಿಕಾರಿಯಾದ ರುದ್ರಪ್ಪ ಹನಗವಾಡಿವರು ವಿದ್ಯಾರ್ಥಿ ದೆಸೆಯಿಂದಲೂ ದಲಿತ ಸಂಘರ್ಷ ಸಮಿತಿಯ ಕಾರ್ಯ ಚಟುವಟಿಕೆಗಳೊಂದಿಗೆ ಗುರುತಿಸಿಕೊಂಡು ಬಂದವರು. ಸದ್ಯ ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್‌ನ ಓರ್ವ ಟ್ರಸ್ಟೀಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ)**

# ಚಾಮರಾಜನಗರದಲ್ಲಿ ಲೋಹಿಯಾರ ೧೦೫ನೇ ಜನ್ಮ ದಿನಾಚರಣೆ



**ಅ**ಭಿವೃದ್ಧಿ ಎನ್ನುವುದು ಪ್ರಕೃತಿ ಜತೆ ಅನುಸಂಧಾನ ಮಾಡುವಂತಿರಬೇಕು ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಬಂಜಗೆರೆ ಜಯಪ್ರಕಾಶ್ ಅಭಿಪ್ರಾಯಪಟ್ಟರು. ಅವರು ಚಾಮರಾಜನಗರದ ಜಿಲ್ಲಾಡಳಿತ ಭವನದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಸಮಾಜವಾದಿ ಅಧ್ಯಯನ ಟ್ರಸ್ಟ್–ಅಮೃತ ಭೂಮಿ ಟ್ರಸ್ಟ್ ವತಿಯಿಂದ ರಾಮಮನೋಹರ ಲೋಹಿಯಾ ಅವರ ೧೦೫ನೇ ಜನ್ಮ ದಿನಾಚರಣೆ ಅಂಗವಾಗಿ ಮಾರ್ಚ್ ೨೩ರಂದು 'ಲೋಹಿಯಾ ವ್ಯಕ್ತಿ–ವಿಚಾರ ಓದು' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದರು..

ಯಾವುದೇ ಪಕ್ಷಗಳ ಸರಕಾರಗಳು ಬಂದರೂ ಮೊದಲು ಪಠಿಸುವುದು ದೇಶದ ಅಭಿವೃದ್ಧಿ ಮಂತ್ರವನ್ನು. ಅಭಿವೃದ್ಧಿ ಎನ್ನುವುದು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಸೇರಿಹೋಗಿದ್ದು, ಅರಣ್ಯ, ಬೆಟ್ಟ ಗುಡ್ಡ ಸೇರಿದಂತೆ ೧೦೮ ಸಂಪನ್ಮೂಲಗಳನ್ನು ವಿದೇಶಗಳಿಗೆ ಮಾರಾಟ ಮಾಡುವ ಸಿದ್ಧತೆ ನಡೆಯುತ್ತಿದೆ ಎಂದು ಅವರು ತಿಳಿಸಿದರು. ಲೋಹಿಯಾ ಅವರು ತಮ್ಮ ಹೋರಾಟದ ದಿನಗಳಲ್ಲಿ ಸಮಾಜದಲ್ಲಿ ತಂಡವವಾಡುತ್ತಿದ್ದ ಮೇಲು, ಕೀಳು ಎಂಬುದನ್ನು ಹೋಗಲಾಡಿಸಿ, ಸುಸ್ಥಿರ ಸರಳ ಬದುಕನ್ನು ನಡೆಸಬೇಕು ಎಂಬ ಹಿನ್ನೆಲೆಯಲ್ಲಿ ಸತ್ಯಾಗ್ರಹ ಕೈಗೊಂಡಿದ್ದರು ಎಂದು ಬಂಜಗೆರೆ ನೆನಪಿಸಿದರು.

ಪ್ರಾಸ್ತಾವಿಕ ಮಾತನಾಡಿದ ಅಮೃತಭೂಮಿ ಟ್ರಸ್ಟ್ ಧರ್ಮದರ್ಶಿ ಚುಕ್ಕಿ ನಂಜುಂಡಸ್ವಾಮಿ ದೇಶದಲ್ಲಿ ರೈತರು ಶ್ರಮದಿಂದ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಆದರೆ ಕೇಂದ್ರ ಸರಕಾರ ಶ್ರೀಮಂತರನ್ನು ಓಲೈಸಲು ಭೂಸ್ವಾಧೀನ ಸುಗ್ರೀವಾಜ್ಞೆ ಕಾಯಿದೆಗೆ ತಿದ್ದುಪಡಿ ತರುವ ಮೂಲಕ ಬಡವರ ಭೂಮಿಯನ್ನು ಕಿತ್ತುಕೊಳ್ಳಲು ಹೊರಟಿದೆ ಎಂದು ಆರೋಪಿಸಿದರು.ರೈತರನ್ನು ಅತಂಕಕ್ಕೆ ದೂಡಿರುವ ಸರಕಾರದ ನಿಲುವನ್ನು ಖಂಡಿಸಿ ಏ.೧೯ರಂದು ಬದನವಾಳಿನಲ್ಲಿ ಸುಸ್ಥಿರ ಬದುಕು ರಾಷ್ಟ್ರೀಯ ಸಮಾವೇಶ ಹಮ್ಮಿಕೊಳ್ಳಲಾಗಿದ್ದು ಇದು ಚಳವಳಿ ರೂಪ ಪಡೆಯಬೇಕು. ಹಾಗಾದಾಗ ರಾಮ್ ಮನೋಹರ್ ಲೋಹಿಯಾ ಅವರ ಸರಳ ಸುಸ್ಥಿರ ಬದುಕಿಗೆ ಅರ್ಥ ಬರುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಬದನವಾಳಿನಲ್ಲಿ ಆಯೋಜಿಸಿರುವ ಸುಸ್ಥಿರ ಬದುಕು ರಾಷ್ಟ್ರೀಯ ಸಮಾವೇಶದ ಅಂಗವಾಗಿ ನಡೆಯುವ ಸತ್ಯಾಗ್ರಹದ ಘೋಷಣೆಗಳಾದ ಕೈಮಗ್ಗ ವಸ್ತ್ರ ನಾಳಿನ ವಸ್ತ್ರ. ಪಾರಂಪರಿಕ ಕೃಷಿ ನಾಳಿನ ಕೃಷಿ. ಮಾತೃ ಭಾಷೆ ನಾಳಿನ ಭಾಷೆ. ವಿಕೇಂದ್ರೀಕರಣ ನಾಳಿನ ರಾಜಕಾರಣ ಕುರಿತು ಪ್ರಣಾಳಿಕೆಯನ್ನು ಹೆಗ್ಗೋಡಿನ 'ಚರಕ'ದ ಪ್ರಸನ್ನ ಮಂಡಿಸಿದರು.

ಕವಿ ಕೆ.ಪಿ.ನಟರಾಜ ಲೋಹಿಯಾ ವ್ಯಕ್ತಿ ವಿಚಾರ ಓದು ಎನ್ನುವ ವಿಚಾರದ ಕುರಿತು ಮಾತನಾಡಿದರು. ಕೆ. ವೆಂಕಟರಾಜುರವರು ಉಪಸ್ಥಿತರಿದ್ದರು, ಅಪೂರ್ವ ಡಿ.ಸಿಲ್ವಾ ಕಾರ್ಯಕ್ರಮ ನಿರೂಪಿಸಿದರು.

(ವರದಿ: **ಪಾಲಲೋಚನ**)

**೮ನೇ ಪುಟದಿಂದ)**

**ಸಾಮಾಜಿಕ ವಲಯದ ಮೇಲೆ ಪರಿಣಾಮ :**

ಸಹಜವಾಗಿಯೇ ಖಾಸಗಿ ನಿಗಮಗಳು ಈ ಸಲದ ಆಯವ್ಯಯವನ್ನು ಹೊಗಳುತ್ತಿವೆ. ಆದರೆ ಸಾಮಾಜಿಕ ವಲಯಕ್ಕೆ ಈ ಆಯವ್ಯಯ ಆಘಾತಕಾರಿಯಾಗಿದೆ. ಪ್ರಥಮ ಬಾರಿಗೆ ಶಾಲೆಗಳಲ್ಲಿನ ಬಿಸಿಯೂಟ ಸಮಗ್ರ ಶಿಶು ಅಭಿವೃದ್ಧಿ ಕಾರ್ಯಕ್ರಮಗಳು ಭಾರೀ ನಿಧಿ ಕಡಿತಕ್ಕೆ ಒಳಗಾಗಿವೆ. ಈ ಕೊರತೆಯನ್ನು ರಾಜ್ಯ ಸರ್ಕಾರಗಳು ಭರಿಸಬೇಕು ಎನ್ನಲಾಗುತ್ತಿದೆ. ಕೇಂದ್ರ ರಾಜ್ಯಗಳ ಸಂಬಂಧದ ಬಗ್ಗೆ ಕನಿಷ್ಠ ಜ್ಞಾನವುಳ್ಳವರಿಗೂ ಇದರಲ್ಲಿನ ಅಪಾಯದ ಸೂಚನೆ ತಿಳಿದೀತು.

ಈ ಸಾಲದ ಆಯವ್ಯಯದಿಂದ ದೊಡ್ಡ ಪೆಟ್ಟು ಬಿದ್ದಿರುವುದು ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ. ಈ ಕ್ಷೇತ್ರಕ್ಕೆ ಭಾರತದಲ್ಲಿ ಖರ್ಚು ಮಾಡುತ್ತಿರುವ ಮೊತ್ತ ಇತರ ಯಾವುದೇ ದೇಶಕ್ಕಿಂತಲೂ ಕಡಿಮೆಯೇ. ಕೇವಲ GDPಯ ಶೇಕಡಾವಾರು ರೂಪದಲ್ಲಿ ಮಾತ್ರವಲ್ಲದೆ, ಹಣದ ಒಟ್ಟು ಮೊತ್ತದ ರೂಪದಲ್ಲಿ ಅದು ಕಡಿಮೆಯಾಗಬಹುದು. ಕಳೆದ ಆಯವ್ಯಯದಲ್ಲಿ ಜೇಟ್ಲಿಯವರು ಘೋಷಿಸಿದ ಸಾರ್ವತ್ರಿಕ ಆರೋಗ್ಯ ಖಾತ್ರಿಯ ಬಗ್ಗೆ ಪ್ರಸ್ತುತ ಬಜೆಟ್‌ನಲ್ಲಿ ಪ್ರಸ್ತಾಪವೇ ಇಲ್ಲ. ಈ ಸಲ ಘೋಷಿಸಿರುವ ಮತ್ತೊಂದು ಆರೋಗ್ಯ ಯೋಜನೆಗೆ ಯಾವಗತಿ ಉಂಟಾಗುವುದೋ ತಿಳಿಯದು. ಏಕೆಂದರೆ ಇದರ ಅನುಷ್ಠಾನಕ್ಕೆ ಯಾವ ಕಾಲಮಿತಿಯನ್ನು ಸೂಚಿಸಲಾಗಿಲ್ಲ.

ಸಾರ್ವಜನಿಕ ಕ್ಷೇತ್ರಕ್ಕೆ ಸಂದಿರುವ ಮೊತ್ತದ ಬಗ್ಗೆ ಮುಖ್ಯವಾಹಿನಿ ಮಾಧ್ಯಮಗಳಲ್ಲಿ ಸಂತೋಷದ ಪ್ರತಿಕ್ರಿಯೆ ಬಂದಿರುವುದು ಆಘಾತಕಾರಿ. ಇದನ್ನು ಭಿಕ್ಷೆಯಿಂದ ಉತ್ಪಾದಕ ಹೂಡಿಕೆಯ ಕಡೆಗೆ ಆಗಿರುವ ಬದಲಾವಣೆ ಎಂದು ಅವು ಹೇಳುತ್ತಿವೆ. ಪ್ರತಿಷ್ಠಿತ ವರ್ಗಕ್ಕೆ ಬೇರೆ ಬೇರೆ ರೂಪದ ಸಹಾಯಧನ ಈಗಲೂ ಮುಂದುವರೆದಿದೆ. ಮತ್ತೊಂದೆಡೆ ಸಾಮಾನ್ಯ ಜನರಿಗೆ ಉಪಯುಕ್ತವಾಗಬಲ್ಲ ಕಾರ್ಯಕ್ರಮಗಳಿಗೆ ಕತ್ತರಿ ಬೀಳುತ್ತಿದೆ.

**(ಲೇಖಕ ಜೀನ್ ಡ್ರೇಜ್ ಮೂಲತಃ ಬೆಲ್ಜಿಯಂನವರಾಗಿದ್ದು ಈಗ ಭಾರತೀಯ ಪ್ರಜತನ ಪಡೆದು ಭಾರತದಲ್ಲೇ ನೆಲೆಸಿದ್ದಾರೆ. ಭಾರತದ ಆರ್ಥಿಕ ಪ್ರಗತಿ ಕುರಿತ ಗಂಭೀರ ಚಿಂತಕರೂ, ಸಲಹಾಕಾರರೂ ಆಗಿರುವ ಅವರು, ಈ ಹಿಂದಿನ ಯುಪಿಎ ಸರ್ಕಾರದ ಸಲಹಾ ಸಮಿತಿಯ ಸದಸ್ಯರಾಗಿ ಆಹಾರ ಭದ್ರತೆ, ಉದ್ಯೋಗ ಖಾತರಿ, ಭೂಸ್ವಾಧೀನ ಮತ್ತು ಮಾಹಿತಿ ಹಕ್ಕು ಕಾಯಿದೆಗಳು ಜಾರಿಗೆ ಬರಲು ಕಾರಣರಾದವರು)**

(ಕನ್ನಡಕ್ಕೆ: **ಎಂ. ರಾಜು**

ಕೃಪೆ: ***ದ ಹಿಂದೂ,*** ಮಾರ್ಚ್ ೫, ೨೦೧೫)

~~~~~~~~~~~~~~~~~~~~~~~~~~~~~~~~~~~~~~~~~~

**ಸ್ವಾತಂತ್ರ್ಯೋತ್ತರ ಭಾರತ ಕಂಡ ಅತ್ಯಂತ ದಿಟ್ಟ, ಪ್ರಾಮಾಣಿಕ ಮತ್ತು ವಿಶಿಷ್ಟ ಪ್ರತಿಭೆಯ ಪತ್ರಕರ್ತರೂ, ಲೇಖಕರೂ ಮತ್ತು 'ಔಟ್‌ಲುಕ್' ವಾರಪತ್ರಿಕೆಯ ಸಂಪಾದಕರೂ ಆಗಿದ್ದ ವಿನೋದ್ ಮೆಹತಾ ಅವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ–ಸಂ.**
~~~~~~~~~~~~~~~~~~~~~~~~~~~~~~~~~~~~~~~~~~

೭ನೇ ಪುಟದಿಂದ)

ಈಗ ಹಾಗೆ ಮಾಡಲು ವಿಫಲವಾಗಿದೆ. ಜ್ಞಾನೋದಯ (Enlightnment) ಮತ್ತು ಪುನರುಜ್ಜೀವನ(Renaissance) ಎಂಬ ಶಬ್ದಗಳಿಗೆ ಸಮಾನ ಆಧುನಿಕ ಇಸ್ಲಾಮೀ ಶಬ್ದಗಳೇ ಇಲ್ಲ. ಅದು ಇಂದಿಗೂ ಆಧುನಿಕತೆಯ ವಿರುದ್ಧ ಹೆಜ್ಜೆ ಹಾಕಿ ಗಾಬರಿ ಹುಟ್ಟಿಸುತ್ತಿದೆ.

ಇಂಥ ವೈಚಾರಿಕ ಪ್ರಯತ್ನಗಳಿಗೆ ಇಂಬುನೀಡುವ *ಮುತಜಿಲ್ಲಾ* ಚಳುವಳಿಯನ್ನು ಮೂಲಭೂತವಾದಿ ಮುಸ್ಲಿಮರು ನಾಶಮಾಡಿದರು. *ಮುತಜಿಲ್ಲಾ* ಚಳುವಳಿಯು ಇಂದಿನ ಜೀವನದ ಅಗತ್ಯಗಳಿಗೆ ಸ್ಪಂದಿಸುವಂತಹ ರೀತಿಯಲ್ಲಿ ಕುರಾನನ್ನು ಒಂದು ಜೀವಂತ ಪಠ್ಯವಾಗಿ ಮಾಡುವ ಅಗತ್ಯವನ್ನು ಒತ್ತಿಹೇಳಿತ್ತು.

ಅದಕ್ಕಾಗಿಯೇ "ನಾವು ೩ನೆಯ ಅಥವಾ ೪ನೆಯ ಶತಮಾನದಲ್ಲಿಯೋ ಬದುಕುತ್ತಿಲ್ಲ. ಮನುಷ್ಯನ ಪ್ರಜ್ಞೆ-ವೈಚಾರಿಕತೆಗಳು ಬಹಳ ವ್ಯಾಪಕವಾಗಿ ಬದಲಾವಣೆ ಹೊಂದಿದ್ದು ನಾವು ದೇವರು ದಯಪಾಲಿಸಿರುವ ವಿವೇಚನಾಶಕ್ತಿಯನ್ನು ಇನ್ನಷ್ಟು ನಿಜವಾದ ಸಂಗತಿಗಳನ್ನು ಹುಡುಕಲು ಬಳಸಿಕೊಳ್ಳಬೇಕಾಗಿದೆ" ಎಂದು ದೆಹಲಿಯ ಮಹಮ್ಮದ್ ಯೂನುಸ್ ಎಂಬ ಇಸ್ಲಾಮಿಕ್ ಚಿಂತಕರು ಹೇಳಿದ್ದು ಬಹಳ ಪ್ರಸ್ತುತವಾಗಿದೆ.

ಈ ಮಧ್ಯೆ ಈಜಿಪ್ಟ್‌ನ ಅಧ್ಯಕ್ಷ ಅಬ್ದೆಲ್ ಫತಾ ಅಲ್ ಸಿಸಿ ಇಸ್ಲಾಮನ್ನು ಉಗ್ರರ ಹಾವಳಿಯಿಂದ ರಕ್ಷಿಸಲು ಧಾರ್ಮಿಕ ಕ್ರಾಂತಿಗೆ ಅಣಿಯಾಗಬೇಕೆಂದು ಕರೆ ನೀಡಿದ್ದಾನೆ. ಸುನ್ನಿ ಜ್ಞಾನ ಆಧ್ಯಯನಕ್ಕೆ ಮೀಸಲಾಗಿರುವ *ಅಲ್ ಅಜರ್* ವಿಶ್ವವಿದ್ಯಾನಿಲಯದ ಪಂಡಿತರನ್ನು ಕುರಿತು ಮಾತನಾಡುತ್ತ ಆತ ಹೇಳಿದ: "ನಮಗೀಗ ಧಾರ್ಮಿಕ ಕ್ರಾಂತಿಯೊಂದರ ಅಗತ್ಯವಿದೆ ಎಂಬುದನ್ನು ಸಾರಿ ಸಾರಿ ಹೇಳಬೇಕಾಗಿದೆ. ನೀವು ಇಮಾಂಗಳು ದೇವರಿಗೆ ಜವಾಬ್ದಾರರು. ಇಸ್ಲಾಮಿಕ್ ಪ್ರಪಂಚವು ತನ್ನೊಳಗೆ ತಾನೇ ಛಿದ್ರಗೊಳ್ಳುತ್ತ, ದಿನೇ ದಿನೇ ನಮ್ಮವರಿಂದಲೇ ನಾಶವಾಗುತ್ತಿರುವುದನ್ನು ಪ್ರಪಂಚ ನೋಡುತ್ತಿದೆ".

ವ್ಯಂಗ್ಯವೇನೆಂದರೆ ಇಂಥ ಮಾತುಗಳನ್ನು ಆಡುತ್ತಿರುವ ಹೊತ್ತಿನಲ್ಲಿಯೇ ಈಜಿಪ್ಟ್‌ನ ನ್ಯಾಯಾಲಯವೊಂದು ಕರೀವ್ ಅಲ್ ಬನ್ನಾ ಎಂಬ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಫೇಸ್‌ಬುಕ್‌ನಲ್ಲಿ ತನಗೆ ಧರ್ಮಗಳಲ್ಲಿ ನಂಬಿಕೆ ಇಲ್ಲ ಎಂದು ಬರೆದದ್ದನ್ನು ಇಸ್ಲಾಮ್‌ಗೆ ಅಗೌರವ ಎಂದು ಪರಿಗಣಿಸಿ ಮೂರು ವರ್ಷಗಳ ಶಿಕ್ಷೆ ವಿಧಿಸಿದೆ. ಫಾತಿಮಾ ನೌತ್ ಎಂಬ ಲೇಖಕಿ *ಈದ್‌*ನ ಸಂದರ್ಭದಲ್ಲಿ ಕುರಿಗಳನ್ನು ಬಲಿ ನೀಡುವ ಪದ್ಧತಿಯನ್ನು ವಿರೋಧಿಸಿದ್ದಕ್ಕೆ ಆಕೆಯ ಮೇಲೆ ಮೊಕದ್ದಮೆಯೊಂದನ್ನು ಹೂಡಲಾಗಿದೆ. ಕವಿ ಕರೀಮ್ ಸಬ್ರೆ 'ದೇವರು ಎಲ್ಲಿದ್ದಾನೆ?' ಎಂಬ ಕತೆಯೊಂದನ್ನು ಬರೆದಿದ್ದಕ್ಕಾಗಿ ಜೈಲಿನಲ್ಲಿದ್ದಾನೆ.

ಸರಿಯಾಗಿ ಗುರಿ ಇಟ್ಟು ಹೇಳುವುದಾದರೆ, ಇಸ್ಲಾಮ್‌ನ ಈ ಬಿಕ್ಕಟ್ಟನ್ನು ದಿಟ್ಟವಾಗಿ ಎದುರಿಸುವ ಕಾಲ ಮುಸ್ಲಿಮರಿಗೆ ಈಗ ಎದುರಾಗಿದೆ. ಇಲ್ಲದಿದ್ದರೆ, ೯/೧೧ ಸಂದರ್ಭದಲ್ಲಿ ಇರ್ಶಾದ್ ಮಾಂಝಿ ಎಂಬ ಕೆನಡಿಯನ್ ಮಹಿಳೆ ೨೦೦೩ರಲ್ಲಿ ಬರೆದ 'ದ ಟ್ರಬಲ್ ವಿತ್ ಇಸ್ಲಾಮ್ ಟುಡೇ' ಎಂಬ ಪುಸ್ತಕದಲ್ಲಿನ ಮಾತುಗಳನ್ನು ಬಳಸಿ ಹೇಳುವುದಾದರೆ ಪ್ಯಾರಿಸ್ ಹಂತಕರು 'ತಮ್ಮ ಪ್ರದರ್ಶನ ಕೊಟ್ಟು ಹಾಯಾಗಿ ಹೋಗಿಬಿಡುತ್ತಾರೆ' 'ಸಹಧರ್ಮೀಯ ಮುಸ್ಲಿಮರು ತಾವು ನಿರ್ಯೋಚನೆಯಿಂದ ಸಮರ್ಥಿಸುವ ಇಸ್ಲಾಂ ಬಗ್ಗೆ ಪುನರಾವಲೋಕನ ಮಾಡುವ' ಸವಾಲಿದೆ ಎನ್ನುವ ಅವರು, 'ಇಸ್ಲಾಂನಲ್ಲಿ ಯಾವ ಸಮಸ್ಯೆಯೂ ಇಲ್ಲ ಎನ್ನುವವರು ವಾಸ್ತವವನ್ನು ಚಾಪೆಯ ಕೆಳಕ್ಕೆ ಗುಡಿಸುತ್ತಿದ್ದಾರೆ' ಎಂದು ಅಭಿಪ್ರಾಯಪಟ್ಟು 'ನಮ್ಮ ಆತ್ಮದ್ರೋಹದಿಂದ ನಾವು ಹೊರಬರಬೇಕಿದೆ' ಎಂದು ಆಗ್ರಹಿಸಿದ್ದಾರೆ. ಇಂತಹ ವಿಮರ್ಶಾತ್ಮಕ ಸಾಲುಗಳನ್ನು ಬರೆದಿದ್ದಕ್ಕಾಗಿ ಆಕೆಯನ್ನು 'ಸ್ಕರ್ಟ್ ತೊಟ್ಟ ಸಲ್ಮಾನ್ ರಶ್ದಿ' ಎಂದು ಹೀಗಳೆಯಲಾಗಿದೆ.

ಚಾರ್ಲಿ ಹೆಬ್ಡೋ ಘಟನೆಯ ನಂತರ ಇದು ಬಹಳ ದಿನ ಹೀಗೇ ಮುಂದುವರೆಯಲಾರದು ಎಂದು ಮುಸ್ಲಿಮರಿಗೆ ಮನವರಿಕೆಯಾಗಿದೆ. ಆದರೂ, ಧೈರ್ಯವಾಗಿ ಮಾತಾಡಲು ಅವರು ಇನ್ನು ಹಿಂಜರಿಯುತ್ತಿದ್ದಾರೆ; ಈ ಹಿಂಜರಿಕೆ ಮುಂದುವರೆದಷ್ಟೂ ಇಸ್ಲಾಂಗೆ ಅಪಾಯ ಹೆಚ್ಚುತ್ತಾ ಹೋಗುತ್ತದೆ. ಇಸ್ಲಾಮನ್ನು ಕುರಿತು ಈ ಬಗೆಯ ಪ್ರಶ್ನೆಗಳನ್ನು ಕೇಳದಿದ್ದರೆ ಮತ್ತು ಕೇಳಲು ಎಷ್ಟು ವಿಳಂಬ ಮಾಡಲಾಗುತ್ತದೋ ಅದರಿಂದ ಅಷ್ಟೂ ಹೆಚ್ಚು ಹಾನಿಯಾಗಲಿದೆ ಎಂಬುದನ್ನು ಅರಿಯಬೇಕಾಗಿದೆ. ಒಂದು ಇಸ್ಲಾಮೀ ಪುನರುಜ್ಜೀವನ ಬಯಸುವವರು ಯಾರಾದರೂ ಇದ್ದಾರಾ?

(ಕನ್ನಡಕ್ಕೆ: **ಡಾ. ಎಸ್. ಸಿರಾಜ್ ಅಹಮದ್**

ಕೃಪೆ: ***ಔಟ್‌ಲುಕ್*, ೨೬ ಜನವರಿ, ೨೦೧೫**)

೯ನೇ ಪುಟದಿಂದ)

ಮಾನವ ಮಂಟಪದ ಸಭೆಯಲ್ಲಿ ನಡೆದ ಚರ್ಚೆಗಳು ಸಮಾಜವಾದಿಗಳ ನಡುವೆ ಮೂಡಿರುವ ಭಿನ್ನಾಭಿಪ್ರಾಯಗಳನ್ನು ಎತ್ತಿತೋರಿಸುತ್ತಿವೆ. ಇದಕ್ಕೆ ಆರೋಗ್ಯಕರ ಸಂವಾದದ ಮೂಲಕ ಒಂದು ಸ್ಪಷ್ಟವಾದ ನಿಲುವನ್ನು ಕಂಡುಕೊಳ್ಳಬೇಕಾಗಿದೆ. ಮುಖ್ಯವಾಗಿ ಜಾತಿ ಬಗೆಗಿನ ಸೂಕ್ಷ್ಮ ವಿಚಾರ ಗೊಂದಲ 'ಗೂಡಾಗಿರುವುದೂ ತುಂಬಾ ಅಪಾಯಕಾರಿ. ಜಾತಿ ವಿನಾಶವೋ ಅಥವಾ ಜಾತಿ ಸಮಾನತೆಯೋ ಎಂಬ ಚರ್ಚೆ ಮತ್ತೆ ಹಿರಿಯ ಸಮಾಜವಾದಿಗಳ ಅಸ್ಪಷ್ಟತೆಯನ್ನು ಮತ್ತು ಭಿನ್ನಾಭಿಯಪ್ರಾಯಗಳನ್ನು ಬಿಂಬಿಸುತ್ತಿದೆ. ಇವೆಲ್ಲ ಕಿರಿಯ ಸಮಾಜವಾದಿಗಳನ್ನು ಹಾಗೂ ಸಮಾಜವಾದಕ್ಕೆ ತೆರೆದುಕೊಳ್ಳುತ್ತಿರುವ ಹೊಸ ಹುಡುಗರನ್ನು ದಿಕ್ಕು ತಪ್ಪಿಸಲಿದೆ. ಹಾಗಾಗಿ ಜಾತಿ ಬಗೆಗಿನ ಚರ್ಚೆ ಇಂದು ಹಿಂದಿಗಿಂತಲೂ ಹೆಚ್ಚು ಪ್ರಸ್ತುತವಾಗಿದ್ದು ಅದರಲ್ಲೂ ಬದಲಾಗುತ್ತಿರುವ ಜನರ ಬದುಕಿನ ಕ್ರಮದ ಸಂದರ್ಭದಲ್ಲಿ ಇದು ಇನ್ನು ಹೆಚ್ಚು ಅಗತ್ಯ. ಇದರ ದುಷ್ಪರಿಣಾಮಗಳ ಬಗ್ಗೆ ಹೆಚ್ಚು ಚರ್ಚಿಸಬೇಕಿದೆ. 'ಹೊಸ ಮನುಷ್ಯ' ಈ ಸಂವಾದಕ್ಕೆ ವೇದಿಕೆಯಾಗಬೇಕೆಂದು ಕೇಳಿಕೊಳ್ಳುತ್ತೇನೆ.

**(ಲೇಖಕ ಬಿ. ರಾಜೇಶ್, ಚಾಮರಾಜನಗರದಲ್ಲಿನ ಸಮಾಜವಾದಿ ಅಧ್ಯಯನ ಕೇಂದ್ರದ ಸಂಸ್ಥಾಪಕ ಸದಸ್ಯರಲ್ಲೊಬ್ಬರು. ಸದ್ಯ ಮೈಸೂರಿನಲ್ಲಿ 'ದ ಹಿಂದೂ' ಪತ್ರಿಕೆಯಲ್ಲಿ ಜಾಹೀರಾತು ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಇವರು ಮೈಸೂರಿನಲ್ಲಿಯೂ ಸಮಾಜವಾದಿ ಅಧ್ಯಯನ ಕೇಂದ್ರ ಟ್ರಸ್ಟ್ ಸ್ಥಾಪಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಕಾವ್ಯ ಮತ್ತು ರಂಗಭೂಮಿ ಇವರ ಆಸಕ್ತಿಯ ಕ್ಷೇತ್ರಗಳು)**

**ಸಂಪಾದಕರ ಪ್ರತಿಕ್ರಿಯೆ :**

೧.. ಈ 'ಮಾನವ ಮಂಟಪದ' ಸ್ಥಾಪಕ ಸದಸ್ಯರಲ್ಲೊಬ್ಬನಾಗಿದ್ದ ಮತ್ತು ಈ ವೇದಿಕೆಯ ಮೊದಲ ಸಮಾವೇಶದ ಸ್ಮರಣ ಸಂಚಿಕೆಯ ಸಂಪಾದಕನಾಗಿದ್ದ ನನಗೀಗ ಈ 'ಮಾನವ ಮಂಟಪ' ಎಲ್ಲಿದೆ, ಏನು ಮಾಡುತ್ತಿದೆ ಎಂಬುದು ಗೊತ್ತಾಗುತ್ತಿಲ್ಲ ಎಂಬುದೇ ಅದರ ಬಗ್ಗೆ ಸ್ವಲ್ಪವಾದರೂ ಹೇಳುತ್ತದೆ. ಆದುದರಿಂದ ಅದರ ನಡಾವಳಿ-ನಿರ್ಣಯಗಳ ಬಗ್ಗೆ ವಿಚಲಿತರಾಗುವ ಅಗತ್ಯವಿಲ್ಲ.

೨. ಒಂದು ಕಾಲದಲ್ಲಿ ಜಾತಿ ಮೀರಿ ಮದುವೆಯಾದವರು ಮದುವೆಯ ನಂತರ ಜಾತಿ(ವ್ಯವಸ್ಥೆ)ಯಲ್ಲಿ ಒಳ್ಳೆಯದನ್ನೋ, ಲಾಭವನ್ನೋ ಕಂಡುಕೊಂಡು ಜಾತಿ ಸಮಾನತೆಯ ಬಗ್ಗೆ ಮಾತನಾಡುತ್ತಿರಬಹುದು. ಒಳ್ಳೆಯದನ್ನು ಕಂಡುಕೊಂಡವರಿಗೆ ಶುಭ ಹೇಳೋಣ. ಲಾಭ ಕಂಡುಕೊಂಡವರಿಗೆ ವಿದಾಯ ಹೇಳೋಣ.

೩. ಈಗ ಕರ್ನಾಟಕದಲ್ಲಿ ಒಂದು ಸಮಾಜವಾದಿ ಪಕ್ಷವಾಗಲೀ, ಸಂಘಟನೆಯಾಗಲೀ ಇಲ್ಲದಿರುವುದರಿಂದ ಯಾರು ಸಮಾಜವಾದಿ, ಯಾರು ಅಲ್ಲ ಎಂದು ವರ್ಗೀಕರಿಸುವುದು ಕಷ್ಟ. ಈಗ ಎಲ್ಲರೂ ಸ್ವಯಂಘೋಷಿತ ಸಮಾಜವಾದಿಗಳೇ! ಹಾಗಾಗಿ ಈ ಸ್ವಯಂಘೋಷಿತ ಸಮಾಜವಾದಿಗಳು ಸೃಷ್ಟಿಸಿರುವ ಗೊಂದಲದ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಬದಲಿಗೆ, ನಿಮ್ಮನ್ನು ಸಮಾಜವಾದಕ್ಕೆ ಆಕರ್ಷಿಸಿದ ತತ್ವಗಳೇ ನಿಮಗೆ ಒರೆಗಲ್ಲಾಗಿ, ನೀವು ನಿಮ್ಮ ನಿರ್ಧಾರ ತೆಗೆದುಕೊಳ್ಳಿರಿ.

ಈ ಬಗ್ಗೆ ನಮ್ಮ ಓದುಗರಿಂದಲೂ ಅಭಿಪ್ರಾಯಗಳನ್ನು ಆಹ್ವಾನಿಸಲಾಗುತ್ತಿದೆ. ದಯವಿಟ್ಟು ಬರೆಯಿರಿ-**ಸಂ.**

**ಪ್ರಿಯ ಓದುಗರೇ,**

**ಹೊಸ ಮನುಷ್ಯ' ಪತ್ರಿಕೆಗೆ ಚಂದಾದಾರರಾಗ ಬಯಸುವವರು *ಸಂಪಾದಕರು, ಹೊಸ ಮನುಷ್ಯ*-ಈ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ (IFSC Code: SBMY 0040444) ವಿನೋಬನಗರ ಶಾಖೆಯಲ್ಲಿ ತೆರೆದಿರುವ ಕರೆಂಟ್ ಅಕೌಂಟ್ ಸಂಖ್ಯೆ: 64110358330 ಇಲ್ಲಿಗೆ ಚಂದಾ ಮೊತ್ತವನ್ನು ವರ್ಗಾಯಿಸಿ ಪತ್ರ ಮುಖೇನ ಅಥವಾ ದೂರವಾಣಿ ಸಂದೇಶದ ಮೂಲಕ ತಮ್ಮ ವಿಳಾಸವನ್ನು ತಪ್ಪದೆ ಸಂಪಾದಕರಿಗೆ ತಿಳಿಸಬೇಕು.**

**ಚಂದಾ ವಿವರ, ದೂರವಾಣಿ ಸಂಖ್ಯೆಗಳು, ಈ ಮೇಲ್ ವಿಳಾಸ ಹಾಗೂ ಅಂಚೆ ವಿಳಾಸ ಪತ್ರಿಕೆಯ ಮುಖಪುಟದಲ್ಲಿದೆ.** -ಸಂಪಾದಕ

## ಭಾಷೆ, ಸಾಹಿತ್ಯ, ಸಂಸ್ಕೃತಿ ಇತ್ಯಾದಿ

# ಕೆಲವು ಬಿಡಿ ಟಿಪ್ಪಣಿಗಳು



ಶಿಕ್ಷಣ ಮಾಧ್ಯಮದ ಸಂಬಂಧವಾಗಿ ಭಾರಿ ಧೂಳು ಎಬ್ಬಿಸಿ ಕೋಟಿ ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಡೆದ ಸಾಹಿತ್ಯ ಸಮ್ಮೇಳನ ಆ ಧೂಳಿನ ಮೇಲೆ ಭಾಷಣ–ಘೋಷಣೆ–ಗೋಷ್ಠಿಗಳ ತಣ್ಣೀರೆರಚಿ ಸದ್ಯ ಎಂದು ನಿಟ್ಟುಸಿರಿನೊಂದಿಗೆ ಮುಕ್ತಾಯವಾಗಿದೆ. ಸರ್ಕಾರವೂ ಸಂತೆ ಹೊತ್ತಿಗೆ ಮೊಳ ನೇಯ್ದುಕೊಂಡು ಬಂದಂತೆ ಯಾವುದೋ ಕಾಯಿದೆಗೆ ಏನೋ ತಿದ್ದುಪಡಿ ಮಾಡಿ ಕನ್ನಡವನ್ನು ಕಾಪಾಡುವ 'ಬೂಸಿ' ಬಿಟ್ಟು ಹೋಗಿದೆ. ಜನ ಕೂಡ ಇದೆಲ್ಲವನ್ನೂ ತಾವು ಸಮ್ಮೇಳನದಲ್ಲಿ ನಿರೀಕ್ಷಿಸಿದ ವಿಹಾರದ ಭಾಗವಾಗಿ ಒಪ್ಪಿಕೊಂಡು ತಂತಮ್ಮ ಊರುಗಳಿಗೆ ಹಿಂತಿರುಗಿ, ಇನ್ನೇನು ಬರಲಿರುವ ಶೈಕ್ಷಣಿಕ ವರ್ಷದಲ್ಲಿ ಶಾಲಾ ಪ್ರವೇಶಕ್ಕೆ ಅರ್ಹರಾದ ತಮ್ಮ ಮಕ್ಕಳಿಗೆ ಯಾವ ಇಂಗ್ಲಿಷ್ ಶಾಲೆ 'ಬೆಸ್ಟ್' ಎಂದು ಹುಡುಕುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ.

ಇನ್ನು ದೇವನೂರ ಮಹಾದೇವ ಅವರು ತಮ್ಮ ಕನ್ನಡ ಹೋರಾಟವನ್ನು ಇಂಗ್ಲಿಷ್ ಸಾಪ್ತಾಹಿಕವೊಂದರಲ್ಲಿ ಮಾತೃಭಾಷಾ ಪರವಾದ ತಮ್ಮ ಅಮಾಯಕವೆನ್ನಿಸುವ ವಾದದ ಅನುವಾದವನ್ನು ಪ್ರಕಟಿಸಿಕೊಂಡು, ಅದರಲ್ಲಿ ಮಾತೃಭಾಷೆಗಳನ್ನು ರಕ್ಷಿಸುವಂತೆ ರಾಷ್ಟ್ರಪತಿಗಳಿಗೆ ಮೊರೆ ಇಟ್ಟು ಮುಂದುವರೆಸಿದ್ದಾರೆ. ನನ್ನ ಆಶ್ಚರ್ಯವೆಂದರೆ ಕನ್ನಡದ ಮಕ್ಕಳು ಇನ್ನೂ ಒಂದು ವರ್ಷ ಕನ್ನಡ ಶಿಕ್ಷಣ ಮಾಧ್ಯಮದಿಂದ ವಂಚಿರಾಗುವುದನ್ನು ತಪ್ಪಿಸಲು, ಅವರು ತಮ್ಮ ಹತ್ತಿರದ ಮಿತ್ರರಾದ ಅಡ್ವೊಕೇಟ್ ಜನರಲ್ ರವಿವರ್ಮ ಕುಮಾರ್‌ಗೋ ಅಥವಾ ಮುಖ್ಯ ಮಂತ್ರಿ ಸಿದ್ಧರಾಮಯ್ಯನವರಿಗೋ, ಸರ್ವೋಚ್ಚ ನ್ಯಾಯಾಲಯಕ್ಕೆ ಪರಿಹಾರಾತ್ಮಕ ಅರ್ಜಿ ಬೇಡ;ಬದಲಿಗೆ. ತಕ್ಷಣ ಎಲ್ಲ ರಾಜ್ಯಗಳ ಮುಖ್ಯಮಂತ್ರಿ ಅಥವಾ ಪ್ರಾಥಮಿಕ ಶಿಕ್ಷಣ ಮಂತ್ರಿಗಳ ಸಭೆ ಕರೆದು ಮಾತೃಭಾಷಾ ಶಿಕ್ಷಣದ ಪರವಾದ ಒಂದು ನಿರ್ಣಯ ಕೈಗೊಂಡು ಅದನ್ನು ಮುಂದಿನ ಕಾನೂನಾತ್ಮಕ ಅಥವಾ ಸಾಂವಿಧಾನಿಕ ಕ್ರಮಕ್ಕಾಗಿ ಕೇಂದ್ರಕ್ಕೋ, ರಾಷ್ಟ್ರಪತಿಗಳಿಗೋ ಕಳಿಸುವ ವ್ಯವಸ್ಥೆ ಮಾಡುವಂತೆ ಏಕೆ ಸೂಚಿಸುತ್ತಿಲ್ಲ ಎಂದು! ಬಹುಶಃ ತಮ್ಮ ಮುದ್ದು 'ಕುಸುಮಬಾಲೆ' ಇಂಗ್ಲಿಷ್ ಲಂಗ ತೊಟ್ಟು ಆಡುತ್ತಿರುವ ಆಟಪಾಠಗಳನ್ನು ನೋಡಿ ಸವಿಯುತ್ತಾ ಕನ್ನಡದ ಬಗ್ಗೆ ಸ್ಪಷ್ಟವಾಗಿ ವಿಚಾರ ಮಾಡಲಾಗದಿದ್ದಾರೆ ಎಂದು ಕಾಣುತ್ತದೆ. ಇಂಗ್ಲಿಷ್ ಭೂತ ಹೊಕ್ಕ ಎಲ್ಲರ ಪಾಡೂ ಇದೇ ಇರಬೇಕು!




ಕನ್ನಡ ಹೀಗೆ ಕರ್ನಾಟಕದಲ್ಲಿ ಕನ್ನಡಿಗರ ಕೈಯಲ್ಲೇ ಒದ್ದಾಡುತ್ತಿದ್ದರೂ ಅದರ 'ಕಂಪು' ಮಾತ್ರ ದೇಶಾದ್ಯಂತ ಎಗ್ಗಿಲ್ಲದೆ ಹರಡುತ್ತಿದೆ! ಮೊನ್ನೆ ನಮ್ಮ ವೀರಪ್ಪ ಮೊಯ್ಲಿಯವರ 'ಶ್ರೀ ರಾಮಾಯಣ ಮಹಾನ್ವೇಷಣಂ' ಕಾವ್ಯಕ್ಕೆ 'ಸರಸ್ವತಿ ಸಮ್ಮಾನ್' ದೊರೆತಿರುವುದೇ ಇದಕ್ಕೆ ಸಾಕ್ಷಿಯಲ್ಲವೇ? ಕರ್ನಾಟಕದಲ್ಲಿ ವಿವೇಕ ರೈ, ಸಿ .ಎನ್. ರಾಮಚಂದ್ರನ್ ಬಿಟ್ಟು ಇನ್ನಾರಾದರೂ ಇದನ್ನು ಓದಿರುವ ಸಾಕ್ಷಿ ಇಲ್ಲದಾಗ (ಕಂಬಾರ ಮತ್ತು ಹಂಪನಾ ಅದರ ಗಾತ್ರವನ್ನು ತಡವಿಯೇ ಬೆಚ್ಚಿ ಬಿದ್ದು, ಆದರೂ 'ಇರಲಿ' ಎಂದು 'ಬಹಳ ಚೆನ್ನಾಗಿದೆ ಸರ್' ಎಂದು ಮೊಯ್ಲಿಯವರಿಗೆ ಹೇಳಿರಬಹುದೆಂಬುದು ಗುಮಾನಿಯಷ್ಟೆ!) ಯಾವ ಕನ್ನೇಡತರ ಸಾಹಿತ್ಯ ರಸಿಕರು ಈ ಹೆಗ್ರಂಥದ ಪ್ರಾಯೋಜಿತ ಅನುವಾದವನ್ನು ಓದಿ ಮೆಚ್ಚಿ ಈ ಪ್ರಶಸ್ತಿ ನೀಡಿದರಪ್ಪ! ಎಂಬ ಬೆರಗಿನಲ್ಲೇ ಕನ್ನಡ ಸಾರಸ್ವತ ಲೋಕ ಬೆಚ್ಚಿಬಿದ್ದು ಎಲ್ಲೆಲ್ಲೂ ಮೌನವೇ ಮೊಯ್ಲಿಯವರನ್ನು ಎದುರುಗೊಳ್ಳುತ್ತಿದೆ. ಈ ದೃಷ್ಟಿಯಿಂದ ಕನ್ನಡ ಸಾರಸ್ವತ ಲೋಕ ತನ್ನ ಸಂವೇದನೆಯನ್ನು ಇನ್ನೂ ಕಿಂಚಿತ್ತಾದರೂ ಉಳಿಸಿಕೊಂಡಿರುವ ಸೂಚನೆ ನೀಡಿದೆ. ಆದರೂ ಸ್ವಲ್ಪ ಕಾಲ ತಡೆದೇ ಈ ಮಾತನ್ನು ಆಡಬಹುದೇನೋ... ಏಕೆಂದರೆ, ಭಜನೆ ಪಾರ್ಟಿ ಇನ್ನೂ ಗಂಟಲು ಸರಿ ಮಾಡಿಕೊಳ್ಳುತ್ತಿರಬಹುದು!

ರಾಜಕಾರಣಿಯೊಬ್ಬರು ಸಾಹಿತ್ಯ ಕೃಷಿ ಮಾಡಬಾರದು, ಅದರಲ್ಲಿ ಸಾಧನೆ ಮಾಡಲಾಗದು ಎಂದು ಯಾರೂ ಹೇಳುತ್ತಿಲ್ಲ. ಆದರೆ ಯಾವುದೇ ಕೃತಿ ಮೊದಲು ತನ್ನ ಮೂಲಭಾಷೆಯ ಸಮುದಾಯದಲ್ಲಿ ತನ್ನ ಮಾನ್ಯತೆಯನ್ನು ಸ್ಥಾಪಿಸಿಕೊಳ್ಳಬೇಕು. ಈ 'ಶ್ರೀ ರಾಮಾಯಣ ಮಹಾನ್ವೇಷಣಂ' ಮೊದಲು ಪ್ರಕಟಗೊಂಡಾಗ ಈ ಮೊಯ್ಲಿಯವರ ಸಾಹಿತ್ಯ ದಲ್ಲಾಳಿಗಳು ಪ್ರತಿ ಜಿಲ್ಲಾ ಕೇಂದ್ರದಲ್ಲೂ ಈ ಕೃತಿ ಕುರಿತು ಗೋಷ್ಠಿಗಳನ್ನು ಏರ್ಪಡಿಸಲು ಹೇಗೆ ಹೆಣಗಿ, ಎಷ್ಟು ಖರ್ಚು ಮಾಡಿ ಹಾಸ್ಯಾಸ್ಪದರಾದರು ಎಂಬುದನ್ನು ನಾನು ವೈಯಕ್ತಿಕವಾಗಿ ಬಲ್ಲೆ.

ಅದೇನೇ ಇರಲಿ, ಇದೆಲ್ಲದರಿಂದ ನಿಜವಾಗಿ ವಿಚಲಿತರಾಗಿರಬಹುದಾದವರೆಂದರೆ, ಇತ್ತೀಚೆಗೆ ಇದೇ 'ಸರಸ್ವತಿ ಸಮ್ಮಾನ್' ಪಡೆದು ತಮ್ಮ ಅಭಿಮಾನಿಗಳ ಅಪಾರ ಹರ್ಷದ ಮಧ್ಯೆ ಸನ್ಮಾನಿತರಾಗಿದ್ದ ಭೈರಪ್ಪನವರು. ಇನ್ನು ಮುಂದೆ ಅವರ ಅಭಿಮಾನಿಗಳು ತಮ್ಮ ಈ ನೆಚ್ಚಿನ ಲೇಖಕನ್ನು ಸರಸ್ವತಿ ಸಮ್ಮಾನ್ ಪುರಸ್ಕೃತ ಲೇಖಕ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವರೇ? ಕಾದು ನೋಡಬೇಕು! ಈ ಸರಸ್ವತಿ ಸಮ್ಮಾನ್ ಪ್ರಶಸ್ತಿ ಹಿಂದೊಮ್ಮೆ ಅಡಿಗರಿಗೂ ಸಂದಿತ್ತು ಎಂದರೆ, ಇಂದು ಈ ಪ್ರತಿಷ್ಠಿತ ಪ್ರಶಸ್ತಿಗಳಿಗೆ ಒದಗಿರುವ ದುರ್ಗತಿ ಎಂತಹುದು ಎಂಬುದು ವಿದಿತವಾದೀತು. ಇದು ಸಂಪೂರ್ಣ ಅವನತಿ.

ಪ್ರಶಸ್ತಿಗಳ ಈ ರಾಜಕೀಯೀಕರಣ ಇಂದು ಧುತ್ತನೇ ಆಗಿದ್ದಲ್ಲ. ಚಂಪಾ ಬಹು ಹಿಂದೆಯೇ 'ಪ್ರಶಸ್ತಿಯನ್ನು ಪಡಕೊಳ್ಳುವ ಮತ್ತು ಹೊಡಕೊಳ್ಳುವ' ಮಾತುಗಳನ್ನಾಡಿದ್ದರು. ಅಂದು ಅವರು ಈ ಮಾತನ್ನಾಡಿದ ಸಂದರ್ಭದಲ್ಲಿ ಚಂಪಾ ಅವರ ಎಲ್ಲರಿಗೂ ಗೊತ್ತಿದ್ದ ಪೂರ್ವಗ್ರಹದಿಂದಾಗಿ ಅದು ಅಷ್ಟು ವಿಶ್ವಾಸಾರ್ಹವೆನಿಸಿರಲಿಲ್ಲ. ಆದರೆ ಇಂದು ಪ್ರಶಸ್ತಿಗಳ ಆಯ್ಕೆಯ ರೀತಿ ನೋಡಿದರೆ, ಅವರ ಮಾತು ಇಂದು ಹೆಚ್ಚು ನಿಜವೆನ್ನಿಸುತ್ತಿದೆ. ಬಹುಶಃ ಸಾಹಿತ್ಯ–ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿರುವಷ್ಟು ಪ್ರಶಸ್ತಿಗಳು ಜಗತ್ತಿನಲ್ಲಿ ಇನ್ನೆಲ್ಲಿಯೂ ಇಲ್ಲವೆಂದು ಕಾಣುತ್ತದೆ! ಪ್ರತಿದಿನ ಪತ್ರಿಕೆಗಳಲ್ಲಿ ಒಂದಲ್ಲ ಒಂದು ಪ್ರಶಸ್ತಿಯ/ಗಳ ಸುದ್ದಿ ಇದ್ದೇ ಇರುತ್ತದೆ. ಇಂದು ನಮ್ಮ ಅಕಾಡೆಮಿಗಳು, ಪ್ರಾಧಿಕಾರಗಳು ಮತ್ತು ಖಾಸಗಿ ಪ್ರತಿಷ್ಠಾನ ಇತ್ಯಾದಿಗಳು ಪ್ರಕಟಿಸುವ ಪ್ರಶಸ್ತಿಗಳು ಅಕಸ್ಮಾತ್ ಅರ್ಹರಿಗೆ ಸಂದಿದ್ದರೆ ಅವರು ಅದನ್ನು ಹೇಳಿಕೊಳ್ಳಲು ಸಂಕೋಚಪಡುವಷ್ಟು ಅವು ತಮ್ಮ ಬೆಲೆಯನ್ನು ಕಳೆದುಕೊಂಡಿವೆ. ಕಾರಣ, ಪ್ರಶಸ್ತಿ ಕೊಡುವ ಈ ಸಂಸ್ಥೆಗಳು–ಬಹುಶಃ ಒಂದೆರಡು ಅಪವಾದಗಳ ಹೊರತಾಗಿ–ತಮ್ಮ ಸಾಂಸ್ಕೃತಿಕ ಸ್ವಾಯತ್ತತೆಯನ್ನು ಕಳೆದುಕೊಂಡು ಪೂರಾ ಜಾತೀಯ, ಹುಸಿ ತತ್ವಾಂಧತೆಯ, ಚೇಲಾಗಿರಿಯ ಗೂಡುಗಳಾಗಿವೆ. ಸರ್ಕಾರವೆಂದರೆ ಈಗ ಪೂರ್ಣವಾಗಿ ಪಕ್ಷ ರಾಜಕಾರಣವೇ ಆಗಿರುವುದರಿಂದ ಅವು ತನ್ನ ಆಶ್ರಯದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಗಳನ್ನು ತಮ್ಮ ಚೇಲಾಗಳ ಸಾಕಾಣಿಕೆ ಕೇಂದ್ರಗಳನ್ನಾಗಿ ಪರಿವರ್ತಿಸಿಕೊಂಡಿವೆ. ಹೀಗಾಗಿ ಸಾಹಿತ್ಯಿಕ–ಸಾಂಸ್ಕೃತಿಕ ಪುಢಾರಿಗಳಿಗೆ ಈಗ ಹಬ್ಬ! ಈಗ ಪ್ರಶಸ್ತಿಗಳ ಜೊತೆ ದೊಡ್ಡ ನಗದಿನ ಗಂಟೂ ಇರುವುದರಿಂದ ಅದಕ್ಕೆ ಆ ನಗದೇ ಬೆಲೆ! ಅದರ ಜೊತೆಗೆ ಕೊಡುವ 'ತಗಡು' ಯಾರಿಗೆ ಬೇಕು?





'ಸಂಕ್ರಮಣ'ದ ಎರಡನೇ ಸುವರ್ಣ ಸಂಪುಟ ಇತ್ತೀಚೆಗೆ ತಾನೇ ಹೊರಬಂದಿದೆ. ಇದು ಆಗಸ್ಟ್ ೧೯೬೬ರಿಂದ ಜೂನ್ ೧೯೬೮ರವರೆಗಿನ ಹನ್ನೊಂದು ಸಂಚಿಕೆಗಳನ್ನು ಒಳಗೊಂಡಿದೆ. ಮೊದಲ ಸಂಪುಟ ನವ್ಯ ಸಾಹಿತ್ಯದ ಹುಟ್ಟಿನ ಸಂಭ್ರಾಮಚರಣೆಯ ಬರಹಗಳ ಮೂಲಕ ಗಮನ ಸೆಳೆದಿದ್ದರೆ, ಈ ಸಂಪುಟ ಅದು ತನ್ನ ಎರಡನೇ ತಲೆಮಾರಿನ ಲೇಖಕರನ್ನು ಸೃಷ್ಟಿಸಿಕೊಳ್ಳುತ್ತಾ ವಿಶ್ವಾಸದಿಂದ ಬೆಳೆಯುತ್ತಿರುವ ಸೂಚನೆಗಳನ್ನು ಹೊತ್ತ ಕಥೆ–ಕವನ–ಪ್ರಬಂಧ–ವಿಮರ್ಶೆ–ಸಂದರ್ಶನಗಳಿಂದ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಅಧ್ಯಯನ ಮಾಡಬಯಸುವವರ ಕುತೂಹಲವನ್ನು ಸೆಳೆಯುವಂತಿದೆ. ಶಂಬಾ, ಅಡಿಗ ಕಣವಿ, ಅಮೂರ, ಮೊಕಾಶಿ, ಗಿರಡ್ಡಿ, ಪಟ್ಟಣಶೆಟ್ಟಿ, ಚಂಪಾ, ಶಾಂತಿನಾಥ, ಲಂಕೇಶ್, ಕಾರ್ನಾಡ್, ನಾಡಿಗ, ಶ್ರೀಕೃಷ್ಣ ಆಲನಹಳ್ಳಿ, ಬಿ.ಆರ್. ಲಕ್ಷ್ಮಣರಾವ್, ಎಸ್. ದಿವಾಕರ, ರಾಜಶೇಖರ ನೀರಮಾನ್ವಿ, ಸುಬ್ರಾಯ ಚೊಕ್ಕಾಡಿ, ಸತ್ಯನಾರಾಯಣ ರಾವ್ ಅಣತಿ, ಕೆ.ನ ಶಿವತೀರ್ಥನ್, ಎಂ.ಬಿ. ನಟರಾಜ –ಹೀಗೆ ಮೂರು ತಲೆಮಾರುಗಳ ಲೇಖಕರು ಒಂದು ಸಾಹಿತ್ಯ ತಾತ್ವಿಕತೆಯನ್ನು ಕಟ್ಟುವ ಕ್ರಿಯೆಯಲ್ಲಿ ತೊಡಗಿದ ಒಂದು ಸೃಜನಶೀಲ ಸಾಹಸವೆಂಬಂತೆಯೂ ಈ ಸಂಪುಟವನ್ನು ನೋಡಬಹುದಾಗಿದೆ.

**–ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

ಪು: **ಜಾಲಾರ ಹೂವು ಮತ್ತು ಇತರ ಪ್ರಬಂಧಗಳು** ಲೇ: ಜಿ.ವಿ. ಆನಂದಮೂರ್ತಿ ಪ್ರ: **ಅಹಿರ್ನಿಶಿ,** ಶಿವಮೊಗ್ಗ ಪು: **೯೬,** ಬೆಲೆ: **ರೂ. ೮೫/-**

# ಪರಿತ್ಯಕ್ತ ಗ್ರಾಮಭಾರತದ ಸ್ಮೃತಿ ಚಿತ್ರಗಳು




**ಈ** ಪುಸ್ತಕ ಹನ್ನೊಂದು ಪ್ರಬಂಧಗಳ ಮಾಲಿಕೆ. ಈ ಪ್ರಬಂಧಗಳೆಂಬ ಗ್ರಾಮಭಾರತದ ಆದಿಮ ಬಯಲುಗಳಲ್ಲಿ ಇಲ್ಲಿನ ಪ್ರಜ್ಞೆ ಅಲೆಯುತ್ತದೆ. ಇಲ್ಲೊಂದು ಹಿಂಪಯಣವಿದೆ. ನಗರದಿಂದ ಗ್ರಾಮಕ್ಕೆ, ನಾಗರಿಕ ಬದುಕಿನಿಂದ ಪ್ರಾಕೃತ ಪರಿಸರಕ್ಕೆ ಈ ಹಿಂಪಯಣ ಸಾಗುತ್ತದೆ. ಸದ್ಯದಿಂದ ಬಾಲ್ಯಕಾಲಕ್ಕೆ ಇಲ್ಲಿನ ಹಂಬಲಿಕೆ ಹರಿಹಾಯುತ್ತದೆ.

ಇದೊಂದು ಪರಿತ್ಯಕ್ತ ಪ್ರಪಂಚ. ಆಧುನಿಕ ನಾಗರಿಕತೆ ಪರಿತ್ಯಾಗ ಮಾಡಿದ ಮೂಲನಿವಾಸಗಳ ಛಿದ್ರಭೂಮಿ ಇದು. ಆದರೆ ಅದರರಿವಿರದ ಅಥವಾ ಅದನ್ನೊಪ್ಪದ ಚಂಡಿ ಹಿಡಿವ ಮಗುವಿನಂತೆ ಇಲ್ಲಿನ 'ಪ್ರಬಂಧ'ಗಳೆಂಬ ಸಜ್ಜೈವಿಕ ಚಿತ್ರಗಳು ರೇಖಿಸಲ್ಪಟ್ಟಿವೆ. ಪ್ರಬಂಧಕಾರರು ಬರೆಯುತ್ತಾರೆ "ಬಾಲ್ಯದ ದಿನಗಳಲ್ಲಿ ನನ್ನ ಅರಿವಿಗೆ ತಾಕಿದ ಲೌಕಿಕದ ಎಲ್ಲ ಅನುಭವಗಳ ಕೈಸೆರೆಯಾಗಿದ್ದೇನೆ. ಅವುಗಳಿಂದ ಬಿಡುಗಡೆ ಹೊಂದುವುದೆಂದರೆ ಮತ್ತೊಮ್ಮೆ ತಾಯಿಕರುಳಿನ ಸಂಬಂಧವನ್ನು ಹರಿದುಕೊಂಡು ಬಂದಂತೆ, ಅದು ಆಗದ ಮಾತು. ಇಂದಿನ ಯಾವ ಅನುಭವಗಳೂ ನನ್ನ ಎಳವೆಯ ದಿನಗಳ ಮುಗ್ಧ ಸೌಂದರ್ಯವನ್ನು, ಅದು ಕಲಿಸಿದ ಜೀವನದ ಪಾಠಗಳನ್ನು ಕಸಿದುಕೊಳ್ಳಲಾರವು. ಅಷ್ಟರಮಟ್ಟಿಗೆ ನಾನು ಇಂದಿನ ಅನುಭವಗಳ ಮೇಲೆ ಜಯ ಸಾಧಿಸಿದ್ದೇನೆ."

ಮೊದಲಿಗೆ ಸಾರ್ವತ್ರಿಕವೆನ್ನಿಸುವ ಸೋಲಿನ ನಡುವೆ ಒಬ್ಬನೆ ಒಬ್ಬ ವ್ಯಕ್ತಿಯ ವಿಜಯದಂತೆ ಈ 'ಜಯ' ದಾಖಲಾಗುತ್ತದೆ. ಈ ಕಾರಣಕ್ಕೇ ಇದು 'ಮುಗ್ಧ', ಕುತೂಹಲಕರ ಹೇಳಿಕೆಯಾಗಿ ನನಗೆ ಕಾಣುತ್ತದೆ. ಆದರೆ ಇಂಥ ತೀವ್ರಾನುರಕ್ತಿಯಿಂದ, ತಾದಾತ್ಮ್ಯದಿಂದ, ಈ ಬರಹಗಳ ಮಾಲಿಕೆ ಈ ಬಗೆಯ ಸ್ಫುಟತೆಯಲ್ಲಿ ದಾಖಲಾಗಲು ಸಾಧ್ಯವಾಗಿದೆ ಎಂಬ ಮಾತೂ ಸತ್ಯ.

ಎರಡನೆಯದಾಗಿ, ಬೇರೊಂದು ನಿಟ್ಟಿನಿಂದ ನೋಡಿದಲ್ಲಿ ಓದಿದವರ ಎದೆಗೆ ತೀಕ್ಷ್ಣವಾಗಿ ತಾಕುವ ಸಾಲುಗಳು ಇವು. ಆದರೆ ಮುನ್ನುಡಿಯಲ್ಲಿ ಡಾ. ಓ.ಎಲ್. ನಾಗಭೂಷಣ ಸ್ವಾಮಿಯವರು ಈ ಸಂಕಲನವನ್ನು "ಲಲಿತ ಪ್ರಬಂಧಗಳ ಪ್ರಕಾರಕ್ಕೆ ಉತ್ತಮ ಸೇರ್ಪಡೆ" ಎಂದು ಕರೆದಿದ್ದಾರೆ. ಈ ಪ್ರಬಂಧಗಳ ಲಾಲಿತ್ಯದ ಆಳದಲ್ಲಿರುವ ಗಂಭೀರ ಸ್ಪಂದನಗಳನ್ನು ಪರಿಗಣಿಸಿದಲ್ಲಿ, ಈ ಮಾಲಿಕೆ ಬೇರೆಯದೆ ಬಗೆಯ ಗ್ರಹಿಕೆಗಾಗಿ ಕಾದಿರುವಂತೆ ಕಾಣುತ್ತದೆ.

ಇಲ್ಲಿರುವ ಉತ್ತಮ ಪ್ರಬಂಧಗಳಲ್ಲಿ ಒಂದಾಗಿ ಕಾಣುವ 'ಅವ್ವ ಮತ್ತು ರಾಗಿ ರೊಟ್ಟಿ': ಬಾಲ್ಯ, ಶಾಲೆ, ಅಲ್ಲಿ ನಿಜಕ್ಕೂ ಶಿಕ್ಷಿಸುವ, ರೌದ್ರಾವತಾರ ತಾಳುವ ಶಿಕ್ಷಕರು, 'ಅವ್ವ' ಮತ್ತು 'ರಾಗಿ ರೊಟ್ಟಿ'ಯ ಸುತ್ತ ನಿರೂಪಿತವಾಗುವ ಗ್ರಾಮ ಪರಿಸರದ ಪ್ರಾತಿನಿಧಿಕ ಚಿತ್ರಣಗಳಿರುವ ಒಂದು ಸಾವಯವ ರಚನೆಯಾಗಿದೆ. ಒಂದು ಶಕ್ತ ಕಥೆಯಂತೆ ಇಲ್ಲಿನ ಆದಿ ಮಧ್ಯಾಂತಗಳು ಭಾವಾವೇಗದಲ್ಲಿ ರೂಪತಾಳುತ್ತವೆ. ಪ್ರಬಂಧ, ತನ್ನ ಒಡಲ ಬೇಗುದಿಯನ್ನು ಒಂದು ಸುಸಂಗತ ತಾತ್ವಿಕ ಆಗ್ರಹವಾಗಿ ಮಂಡಿಸುತ್ತದೆ. ಈ ಪ್ರಬಂಧದ 'ಕಾವು' ಏರುತ್ತ ಹೋಗುತ್ತದೆ.

'ರೊಟ್ಟಿ ಎಂಗೈತೋ ಕಾಣೆ' ಅಂತ ಅವ್ವ ಕೇಳಿದರೆ 'ನಿನ್ನ ಮನಸು ಎಂಗೈತೋ ಅಂಗೇನೆ. ರೊಟ್ಟೀನೂ ಸೆಂದಾಗೈತೆ ಕಣವ್ವ' ಎಂಬ ಕದಿರಮ್ಮದೊಡ್ಡಿ ಹೇಳಿದ ಮಾತುಗಳ ಮೂಲಕ 'ರಾಗಿರೊಟ್ಟಿ'ಯ ಚಿತ್ರಣ ಕಟ್ಟುವ ಪರಿ.

ಮಡಿವಾಳರ ಸಣ್ಣ ತಿಮ್ಮಕ್ಕ, ಮಾದಿಗರ ಆಂಜಿನಿಗೆ ಹೇಳುವ 'ಮಾದಿಗರು ಮಡಿವಾಳರ ಸಾಕುಮಕ್ಕಳು' ಎಂಬ ಕಥನ, ಕಣ್ತೆರೆಸುವ ಶಕ್ತಿ ಪಡೆದಿದೆ. ಸ್ಪೃಶ್ಯಾಸ್ಪೃಶ್ಯ ಭೇದ ತೊಡೆವಷ್ಟು ಶಕ್ತಿಶಾಲಿಯಾದ ಈ ಕಥೆ ಹೊಚ್ಚಹೊಸದಾಗಿದೆ. ಪ್ರಭಾವಶಾಲಿಯಾಗಿದೆ. ('ಮಾಗಿಯ ದಿನಗಳು')

'ಕವಿಯ ತೋಟದಲ್ಲಿ ಒಂದು ಯುಗಾದಿ' ತುಮಕೂರಿನ ಕವಿ ದಿ. ವೀಚಿಯವರ ಜೊತೆ ಅವರ ತೋಟದಲ್ಲಿ ಕಳೆದ ಯುಗಾದಿಯ ಹಬ್ಬದ ದಿನವೊಂದರ ಚಿತ್ರಣ. ಲೇಖಕ ವೀಚಿಯವರ ಮನೆ ಅವರ ಓದುವ ಕೋಣೆ ಹಾಗೂ ಅವರ ತೋಟದ ಪರಿಸರವೆಲ್ಲ ಈ ಪ್ರಬಂಧದ ಒಳಾಯದಲ್ಲಿ ಬಂದು ಬದುಕಿಕೊಂಡಿದೆ.

'ಬೆಟ್ಟದ ದಾರಿಯಲ್ಲಿ' ಎಂಬ ಪ್ರಬಂಧ ಕೊರಟಗೆರೆ ತಾಲ್ಲೂಕಿನ ಸಿದ್ಧರಬೆಟ್ಟ ಕುರಿತ ಹಲವು ಅಧಿಕೃತ ಅಂಶಗಳ ಮನೋಜ್ಞ ಸಂಗಮ. ಅದೊಂದು ಗುಹಾಂತರ ಬೆಟ್ಟ, ಸಿದ್ಧರ ನೆಲೆವೀಡು ಎಂಬ ಮಾಹಿತಿ, ಕೆ.ಎಂ. ಶಂಕರಪ್ಪ ಈ ತಾಣದ ಕುರಿತು ಹೇಳಿದ್ದು, ಅಮ್ಮಾಜಮ್ಮ ಎಂಬ ಸಾಧಕಿಯ ತವರು, ಅಲ್ಲಿನ ಔಷಧೀಯ ಸಸ್ಯಲೋಕದ ಖಚಿತ ವಿವರ ಹೀಗೆ ಹಲವು ಸಂಗತಿಗಳ ತಲಸ್ಪರ್ಶಿ ನಿರೂಪಣೆಯನ್ನು ಈ ಪುಟ್ಟ ರಚನೆಯು ಹೊಂದಿದೆ.

ಹೀಗೆ ಈ 'ಸಂಗ್ರಹ'ದಲ್ಲಿ ಮಡುಗಟ್ಟುವ ನೋವು ಮತ್ತು ವಿಷಾದಗಳ ಪರಿಹಾರ ಕಾಣದ ಮ್ಲಾನತೆಯ ನಡುವಿನಿಂದ ಪ್ರಬಂಧಕಾರ "ಕಳೆದು ಹೋದ ಜಗತ್ತನ್ನು ಕೀರ್ತಿಸುವುದು ನನ್ನ ಪ್ರಬಂಧದ ಉದ್ದೇಶವಲ್ಲ, ಬದಲಿಗೆ ನಾವು ಏನನ್ನು ಕಳೆದುಕೊಂಡಿದ್ದೇವೆ ಎನ್ನುವುದನ್ನು ದಾಖಲಿಸಲು ಮಾತ್ರ ನನ್ನ ಬಾಲ್ಯದ ನೆನಪುಗಳಿಗೆ ಮೊರೆ ಹೋಗಿದ್ದೇನೆ" ಎಂದು ಬರೆಯುತ್ತಾರೆ.

ಆದ್ದರಿಂದ ಈ ಲೇಖಕರ ಒಂದು ನಿಶ್ಚಿತ ತಾತ್ವಿಕ ನಿಲುವು ಈ ಪ್ರಬಂಧಗಳ ರಚನೆಯ ಹಿಂದೆ ಇರುವುದು ನಮಗೆ ಮನದಟ್ಟಾಗುತ್ತದೆ.

ಗ್ರಾಮಭಾರತದ ಈ ಛಿದ್ರಲೋಕದಿಂದ ಎತ್ತಿಕೊಂಡ ಸ್ಮೃತಿ ವಿಶೇಷಗಳು ಲೇಖಕರ ಪೊರೆವ ಅಂತಃಕರಣದಿಂದ ಪ್ರಬಂಧಗಳಾಗಿ ಅರಳಿದ ಈ ಲೋಕ ಈ ಮೊದಲೇ ಹೇಳಿದಂತೆ ಆಧುನಿಕ ನಾಗರಿಕತೆ ಪರಿತ್ಯಜಿಸಿದ ಲೋಕ. ಈ 'ಲೋಕರಚನೆ'ಯ ಹಿಂದಿನ ಮನಸ್ಥಿತಿಯನ್ನು ವಸ್ತುನಿಷ್ಠವಾದದ್ದೆಂದು ಹೇಗೇ ಸಮರ್ಥಿಸಿದರೂ ಇಲ್ಲಿನ ತಾತ್ವಿಕ ನಿಲುವು ನಿರ್ಭಾವುಕವಾಗಿ ಕಾಣುವುದಿಲ್ಲ. ಅದಕ್ಕೇ ಇಲ್ಲಿಂದ 'ಎಲ್ಲಿ ಹೋದಾವೂ ಗೆಳೆಯ ಆ ಕಾಲ' 'ನೆನೆ ನೆನೆ ಆ ದಿನವ' ಎಂಬಂತಹ ವಿಷಾದದ ಮಾತುಗಳನ್ನು ಕೇಳುತ್ತೇವೆ. ಈ ಮಾತುಗಳು ಈ ಘಾಸಿಗೊಳಗಾದ ಜಗತ್ತಿನ ನಿಡು ನಿರೂಪಣೆಯ ತುದಿಗೆ ಬಿಟ್ಟ ನಿಟ್ಟುಸಿರಿನಂತೆ ಕೇಳಿಸುತ್ತವೆ.

ಆದ್ದರಿಂದ ಇಲ್ಲಿನ ಪ್ರಬಂಧಗಳು ಸೂಕ್ತ ಪರಿಹಾರಾತ್ಮಕ ಹೊರಚಾಚನ್ನು ಕಾಣದೆ ಉಳಿಯುತ್ತವೆ. ಇಲ್ಲಿನ ದುಃಖ ಗಾಢವಾಗುತ್ತ ಹೋಗುತ್ತದೆ. ಬಿಡುಗಡೆಯ ಮಾರ್ಗಗಳಿಲ್ಲದ ದಿಕ್ಕುಗಾಣದ ಸ್ಥಿತಿ ಇದು. ಸಮಾಜವಾದವನ್ನೂ ಒಳಗೊಂಡು ವಿಭಿನ್ನ ಅರಿವುಗಳ ಸಾಹಚರ್ಯವಿದ್ದೂ ಈ ಲೇಖಕ ಈ ಪ್ರಬಂಧಗಳಿಗೊಂದು ಪರಿಹಾರಾತ್ಮಕ ಆಯಾಮವನ್ನು ಜೋಡಿಸಿ ನೋಡದೆ ಇಲ್ಲಿನ ಅಸಹಾಯಕತೆಯನ್ನು ತೀವ್ರಗೊಳಿಸಿದ್ದಾರೆ ಅನ್ನಿಸುತ್ತದೆ. ಯಾಕೆಂದರೆ "ರಾಜಕೀಯವೇ ಆಧುನಿಕ ವಿಧಿಯಾಗಿದೆ". ಪರಿಹಾರಾತ್ಮಕ, ಸುಧಾರಣಾ 'ವಿಧಿ'ಯಾಗಿದೆ.

'ರಾಜಕೀಯ'ದ ರೂಕ್ಷ, ಅಶುದ್ಧ, ಬಗ್ಗಡದ ಸೇರ್ಪಡೆಯಿಂದಾಗಿ ಈ ಪ್ರಬಂಧಗಳ ಲಲಿತ ಶರೀರಕ್ಕೆ ಘಾಸಿಯಾಗುತ್ತಿತ್ತೆಂದು ಈ ಲೇಖಕ ಭಾವಿಸಿದರೆ ? ಎಂದು ಪ್ರಶ್ನಿಸುವಂತಾಗುತ್ತದೆ. ಈ ಹಿಂದೆ ಪ್ರಸ್ತಾಪಿಸಿದ ಪ್ರಬಂಧಗಳನ್ನೂ ಒಳಗೊಂಡು, ಕಣ್ಮರೆಯಾಗುತ್ತಿರುವ ಜಾಲಾರ ಹೂವಿನ ವೃಕ್ಷ ಸಂಕುಲವನ್ನಾಗಲೀ, ತೊಗಲುಗೊಂಬೆಗಳನ್ನು ಬಟ್ಟೆಯಲ್ಲಿ ಸುತ್ತಿಟ್ಟು ನಿರ್ಗಮಿಸಲು ಅಣಿಯಾಗಿರುವ ಗೊಂಬೆರಾಮರ ಗೋವಿಂದಯ್ಯನವರ ಘನ ಕಥನವಾಗಲೀ, ವಿಘಟಿಸುತ್ತಿರುವ ಕೂಡು ಕುಟುಂಬಗಳ ಬಗೆಬಗೆಯ ವ್ಯಥೆಯ ಅಧ್ಯಾಯಗಳಾಗಲೀ, ಒಟ್ಟಾಗಿ ಈ ಎಲ್ಲ ಕಥನಗಳ ಧಾರಣಭೂಮಿಯಾದ ಗ್ರಾಮಜಗತ್ತಿನ ಸಂಕಟಕರ ಕಣ್ಮರೆಯೇ ಇಡೀ ಸಂಕಲನದ 'ಪ್ರಬಂಧ ಧ್ವನಿ'ಯಾಗಿದೆ.

ಆದರೆ ಕೊನೆಯಲ್ಲೊಂದು ಮಾತನ್ನು ಹೇಳಲೇಬೇಕಿದೆ: ಈ ಕಣ್ಮರೆಯ ಕುರಿತು ಪ್ರಬಂಧಕಾರರ "ಅಷ್ಟರಮಟ್ಟಿಗೆ ನಾನು ಇಂದಿನ ಅನುಭವಗಳ ಮೇಲೆ ಜಯ ಸಾಧಿಸಿದ್ದೇನೆ" ಎಂಬ ಮಾತು ಕರ್ಮಸಿದ್ಧಾಂತವನ್ನು ನೆಚ್ಚಿ, ಸಕಲ ಅನ್ಯಾಯ, ದುಃಖ, ದುಮ್ಮಾನಗಳನ್ನು ಸಹಿಸುವ 'ಸಂತಪ್ತ' ಸಾಮಾನ್ಯ ಭಾರತೀಯನ 'ತೃಪ್ತ' ಭಾವದಂತೆ ಕಾಣುತ್ತದೆ. ಈ ಪ್ರಬಂಧ ಗುಚ್ಛದ ಸ್ಥಾಯಿ ಅನುಭವ, ನಿರಾಶೆಯ ನಡುವಿನ ತೊಳಲಾಟ ಮಾತ್ರವಾಗಿ ಕಂಡು ತಳಮಳ ಉಂಟು ಮಾಡುತ್ತದೆ. ಈ 'ಮಾನವಕೃತ ವಿಧಿ'ಯನ್ನು ಸೀಳಿಕೊಂಡು ಹೊರಬರುವ ಚೈತನ್ಯ ಕಾಣದೆ ಹೋಗುತ್ತದೆ. ಬದಲಿಗೆ 'ನಾವು ಏನನ್ನು ಕಳೆದುಕೊಂಡಿದ್ದೇವೆ ಎನ್ನುವುದನ್ನು ಮಾತ್ರ ದಾಖಲಿಸುತ್ತ' ವಿರಮಿಸುತ್ತದೆ.

**–ಕೆ.ಪಿ. ನಟರಾಜ**

**ಶುಭಾಶಯಗಳೊಂದಿಗೆ,**




**ಬೆಂಗಳೂರಿನಲ್ಲಿ ಕ್ಯಾಬ್‌ಗಳನ್ನು ಬುಕ್ ಮಾಡಲು ಸಂಪರ್ಕಿಸಿ: 080- 30 600 600**

'ಹೊಸ ಮನುಷ್ಯ'
ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



**ಮೆ। ಡಿ.ಎಂ. ಅರಳಿಕಟ್ಟಿ ಇಂಜಿನಿಯರಿಂಗ್ ವರ್ಕ್ಸ್**

(ಫ್ಯಾಬ್ರಿಕೇಶನ್ಸ್ ಕೆಲಸಗಳಲ್ಲಿ ಪರಿಣತರು)

**ಪ್ರೊ: ದವಲ್ ಸಾಬ್ ಎಂ. ಅರಳಿಕಟ್ಟಿ**

ಯಾಲಕ್ಕಿ ಶೆಟ್ಟಿ ಕಾಲೋನಿ,

**ಧಾರವಾಡ**

**ನಾಡಿನ ವಿಚಾರವಂತರ ಮನೆ-ಮನ ತಲುಪುತ್ತಿರುವ 'ಹೊಸ ಮನುಷ್ಯ'ನಿಗೆ ಹಾರ್ದಿಕ ಶುಭಾಶಯಗಳು**



**-ನಾಡೋಜ ಹಂಪನಾ**
ಮತ್ತು **ನಾಡೋಜ ಕಮಲಾ ಹಂಪನಾ**
ಬೆಂಗಳೂರು

## ತಿಂಗಳ ಸಾಲುಗಳು...



ರಾಜಕೀಯ ಉನ್ನತಿಗೆ ಮನಸ್ಸಿನ ಮತ್ತು ಆತ್ಮದ ಉನ್ನತಿ ಪ್ರಾಥಮಿಕ ಅವಶ್ಯಕತೆಗಳಾಗಿವೆ.

-ಡಾ. ಬಿ.ಆರ್. ಅಂಬೇಡ್ಕರ್

**ಪತ್ರಿಕೆಗೆ ಶುಭ ಕೋರುತ್ತಾ...**

**–ಬಿ.ಸುರೇಶ**

**ಡಾ. ವಿಜಯಾ**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204 (Karnataka)